ಶ್ರೀಸೂಕ್ತ

ಮಂತ್ರ, ಅರ್ಥ, ವ್ಯಾಖ್ಯಾನ

ಸಾ. ಕೃ. ರಾಮಚಂದ್ರ ರಾವ್

ಶ್ರೀಸೂಕ್ತ

(ಅರ್ಥ - ವಿವರಣೆಗಳೊಂದಿಗೆ)

ಸಾ. ಕೃ. ರಾಮಚಂದ್ರರಾವ್

ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ
ಬೆಂಗಳೂರು

ಪ್ರಕಾಶಕರು :
ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ಇನ್‌ಸ್ಟಿಟ್ಯೂಟ್ ಆಫ್ ವೇದಿಕ್ ಕಲ್ಚರ್
ನಂ. 63, 13ನೇ ಮೇನ್, 4ನೇ ಬ್ಲಾಕ್, ಜಯನಗರ ಪೂರ್ವ
ಬೆಂಗಳೂರು - 560 011
ದೂರವಾಣಿ : 080-22456315 / 9341233221 (ಮೊಬೈಲ್)

ಈ ಮೇಲ್ : info@vedah.com
Web : www.vedah.com

© ಕಾದಿರಿಸಲಾಗಿದೆ

ಪುಟಗಳು : xiv + 66

ಮೊದಲ ಆವೃತ್ತಿ : 2009

ಬೆಲೆ : ರೂ. **50**

ಮುಖಪುಟ ವಿನ್ಯಾಸ : ಟಿ. ವಿ. ಶಂಕರ್

ISBN 81-7994-078-0

ಮುದ್ರಕರು : ಶ್ರೀರಂಗ ಪ್ರಿಂಟರ್ಸ್ ಪ್ರೈ. ಲಿ., ಬೆಂಗಳೂರು - 560 019.

SHRĪSŪKTA [Kannada], by S.K. Ramachandra Rao; Published by: **SAKSI**, No. 63, 13th Main, 4th Block East, Jayanagar, Bangalore-560 011. First edition: 2009. Pages : xiv+66; Price: Rs. 50/-

Printed at: Sreeranga Printers Pvt. Ltd., Bangalore-560 019.

ಒಳಪುಟಗಳಲ್ಲಿ

ತಂತ್ರದ ಹೊಸ್ತಿಲಿನಲ್ಲಿ	iv
ಪೀಠಿಕೆ	vi
ಸಂಕೇತಾಕ್ಷರಗಳ ವಿವರಣೆ	xiii
ಮಂತ್ರ 1	1
ಮಂತ್ರ 2	10
ಮಂತ್ರ 3	12
ಮಂತ್ರ 4	15
ಮಂತ್ರ 5	20
ಮಂತ್ರ 6	27
ಮಂತ್ರ 7	31
ಮಂತ್ರ 8	34
ಮಂತ್ರ 9	37
ಮಂತ್ರ 10	42
ಮಂತ್ರ 11	46
ಮಂತ್ರ 12	50
ಮಂತ್ರ 13	53
ಮಂತ್ರ 14	56
ಮಂತ್ರ 15	60
ಪರಿಶಿಷ್ಟ ಶ್ಲೋಕಗಳು	62

ತಂತ್ರದ ಹೊಸ್ತಿಲಿನಲ್ಲಿ

ಆಧುನಿಕ ಸಮಾಜದಲ್ಲಿ ಆಧ್ಯಾತ್ಮದ ಬಗ್ಗೆ ಆಸಕ್ತಿ ಇದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು ಸಾಕಷ್ಟಿದ್ದಾರೆ. ಯೋಗ, ಪ್ರಾಣಾಯಾಮ, ಧ್ಯಾನ, ವಿವಿಧ ಧ್ಯಾನ ಚಿಕಿತ್ಸೆಗಳೂ ಪ್ರಚಲಿತವುಂಟು. ಇದಲ್ಲದೆ ತಂತ್ರದ ಬಗ್ಗೆ ವಿಶೇಷ ಆಸಕ್ತರಿದ್ದಾರೆ. ಅದರ ಹೆಸರು ಮಾತ್ರ ಕೇಳಿದವರಿದ್ದಾರೆ. ತಂತ್ರದ ಹೆಸರಿನಲ್ಲಿ ತಮಗೆ ತಿಳಿದದ್ದನ್ನೆಲ್ಲ ಹೇಳಿ ಇದೆಲ್ಲ ತಂತ್ರ ಎಂದು ಹೇಳುವ ಅಭಿನವ 'ತಾಂತ್ರಿಕ'ರೂ ಹೇರಳವಾಗಿದ್ದಾರೆ. ಈ ಸೃಷ್ಟಿಗೊಂದು ಅರ್ಥವಿದೆ, ಉದ್ದೇಶವಿದೆ. ಅದೆಂದರೆ ಎಲ್ಲೆಡೆ ದೈವೀಕತೆಯ ಸಾಕ್ಷಾತ್ಕಾರವನ್ನು ಸಾಧ್ಯಗೊಳಿಸುವುದು. ತಂತ್ರ ಬದುಕನ್ನು ಲೌಕಿಕ, ಆಧ್ಯಾತ್ಮಿಕ ಎಂದು ಗೆರೆಮಾಡಿ ತೋರಿಸಿಲ್ಲ. ಏಕೆಂದರೆ ಇಡೀ ಬದುಕೆ ಪವಿತ್ರ, ಸುಂದರ, ದೈವಿಕ, ಅನುಭವಿಸಲು ಯೋಗ್ಯ ಎಂಬುದು ತಂತ್ರದ ಮುಖ್ಯ ನಿಲುವು.

ಇಂದಿನ ಆಧುನಿಕ ಬದುಕಿನಲ್ಲಿ ತಂತ್ರದ ಬಗ್ಗೆ ಮೂಲಗ್ರಂಥಗಳನ್ನು ಓದುವುದು ಕಷ್ಟ. ಆ ಗ್ರಂಥಗಳು ದೊರಕುವುದೂ ಕಷ್ಟ. ಆದರೆ ತಂತ್ರವನ್ನು ಅರಗಿಸಿಕೊಂಡವರು, ಅಳವಡಿಸಿಕೊಂಡವರು ನಮ್ಮ ನಡುವೆ ಇದ್ದಾರೆ, ಆಗಿಹೋಗಿದ್ದಾರೆ. ಅಭಿನವಗುಪ್ತಪಾದ, ಶಂಕರಾಚಾರ್ಯ, ಶ್ರೀ ಅರೋಬಿಂದೊ, ರಮಣಮಹರ್ಷಿ, ವಾಸಿಷ್ಠಗಣಪತಿ ಮುನಿ, ಕಪಾಲಿ ಶಾಸ್ತ್ರಿ, ಶ್ರೀಮಾತೆ, ಎಂ.ಪಿ. ಪಂಡಿತ್, ಜಾನ್‌ವುಡ್ರೋಫ್.... ಅವರ ಬಾಳಿನ ಬೆಳಕು, ಸಾರ, ಕೆನೆ ಕೆಲವು ಗ್ರಂಥಗಳ ರೂಪದಲ್ಲಿ ನಮ್ಮೆದುರು ಇದೆ. ಅದರಲ್ಲಿ ಇಂದಿನ ಬದುಕಿಗೆ ಬೇಕಾದ ಅನುಭವ, ವಿವೇಕಗಳ ಭಂಡಾರವಿದೆ. ಈ 'ಭುವನದ ಭಾಗ್ಯ'ವನ್ನು ಇಂದಿನವರು ತಮ್ಮದಾಗಿಸಿಕೊಳ್ಳಲಿ ಎಂಬುದು ನಮ್ಮ ಆಶಯ. ಅದಕ್ಕಾಗಿ ಈ 'ತಂತ್ರ ಚಿಂತನ ಸರಣಿ'.

ತಂತ್ರಗಳ ಸಾಮಾನ್ಯ ಪರಿಚಯ, ತಂತ್ರ-ಮಂತ್ರ-ಯಂತ್ರಗಳ ಸಂಬಂಧ, ಯಂತ್ರಗಳು ಮತ್ತು ಚಕ್ರಗಳ ಪ್ರಯೋಜನಗಳು, ತಂತ್ರ ಸಾಧನೆಯ ಮಾರ್ಗಗಳು, ಕೆಲವು ಮಹಾನುಭಾವರ ಅನುಭವಗಳು, ದೈಹಿಕ-ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯದ ವಿಕಾಸದಲ್ಲಿ ತಂತ್ರದ ಪಾತ್ರ ಈ ಕೆಲವು ವಿಷಯಗಳ ಮೇಲೆ ಬೆಳಕು ಬೀರುವುದೆ 'ತಂತ್ರ ಚಿಂತನ ಸರಣಿ'ಯ ಉದ್ದೇಶ. ಸರಳ ಭಾಷೆಯಲ್ಲಿ ತಂತ್ರಗಳ ಪ್ರಾಥಮಿಕ ಪರಿಚಯ ಮಾಡಿಕೊಡುವುದು ನಮ್ಮ ಗುರಿ.

ಈ ಸರಣಿಗೆ ಮತ್ತೊಂದು ಸೇರ್ಪಡೆ 'ಶ್ರೀಸೂಕ್ತ'. ವಿದ್ವತ್ ಲೋಕದ ಮೇರುಶಿಖರ ಎಂದೇ ಖ್ಯಾತರಾದ ಪ್ರೊ|| ಎಸ್.ಕೆ. ರಾಮಚಂದ್ರ ರಾವ್ ಅವರ ಕೊಡುಗೆ ಇದಾಗಿದೆ. ಮಂತ್ರಗಳು, ಪ್ರತಿಯೊಂದು ಮಂತ್ರಕ್ಕೆ ಧ್ಯಾನ ಶ್ಲೋಕ, ಆಯಾ ಮಂತ್ರಕ್ಕೆ ಸಂಬಂಧಿಸಿದ ಯಂತ್ರ ಇವೆಲ್ಲವೂ ಇಲ್ಲಿವೆ. ಸಾಧಕರಿಗೆ ಇದೊಂದು ಅತ್ಯುಪಯುಕ್ತ ಕೃತಿ ಆಗಿದೆ.

ಡಾ॥ ಎಸ್.ಕೆ. ರಾಮಚಂದ್ರ ರಾವ್ ಅವರು ಬರೆದ 'ಯಂತ್ರಗಳು' ಪುಸ್ತಕವೂ ಈ ಸರಣಿಯಲ್ಲಿ ಈಗಾಗಲೇ ಪ್ರಕಟವಾಗಿದೆ. ಯಂತ್ರಗಳು ತಂತ್ರಶಾಸ್ತ್ರದ ಒಂದು ಭಾಗ. ಯಂತ್ರಗಳ ನೆಲೆ-ಹಿನ್ನೆಲೆ, ಅವುಗಳ ರಹಸ್ಯಾರ್ಥ, ಬಳಕೆ, ಪೂಜಾ ವಿಧಾನ ಮುಂತಾದವು ಈ ಪುಸ್ತಕದಲ್ಲಿ ಒಳಗೊಂಡಿವೆ. ಐದನೆ ಅಧ್ಯಾಯವು ವಿವಿಧ ಯಂತ್ರಗಳ ಚಿತ್ರಗಳು ಹಾಗೂ ಅವುಗಳನ್ನು ಪ್ರಭಾವೀಗೊಳಿಸಲು ಬಳಸುವ ಮಂತ್ರಗಳಿಗೆ ಮೀಸಲಾಗಿದೆ. ಯೋಗ ಶಾಸ್ತ್ರದಲ್ಲಿ ಚಕ್ರಗಳಿಗೆ ವಿಶೇಷ ಸ್ಥಾನವಿದೆ. ಚಕ್ರ ಎಂದರೇನು, ಚಕ್ರಗಳು ಹಾಗೂ ಯಂತ್ರಗಳ ನಡುವಿನ ಸಂಬಂಧ ಕುರಿತು ಲೇಖಕರೇ ಬರೆದ ಇಂಗ್ಲೀಷ್ ಲೇಖನದ ಅನುವಾದವನ್ನು ಅನುಬಂಧವಾಗಿ ಜೋಡಿಸಿದ್ದೇವೆ.

ಪ್ರಸ್ತುತ 'ಶ್ರೀಸೂಕ್ತ' ಕೃತಿಯಲ್ಲಿನ ಕೆಲವಾರು ವಿಷಯಗಳಿಗೆ ಸಂಬಂಧಿಸಿದ ವಿವರಗಳು 'ಯಂತ್ರಗಳು' ಪುಸ್ತಕದಲ್ಲಿ ಲಭ್ಯ ಇವೆ.

ಈ ಪುಸ್ತಕವನ್ನು ಪ್ರಕಟಿಸಲು ಅವಕಾಶ ಮಾಡಿಕೊಟ್ಟ ಪ್ರೊ॥ ಸಾ.ಕೃ. ರಾಮಚಂದ್ರ ರಾವ್ ಅವರ ಧರ್ಮಪತ್ನಿ ಶ್ರೀಮತಿ ರಮಾ ಮತ್ತು ಅವರ ಪುತ್ರ ಡಾ॥ ಸುದರ್ಶನ್ ಹಾಗೂ ಕುಟುಂಬ ವರ್ಗದವರಿಗೆಲ್ಲ ಕೃತಜ್ಞರಾಗಿದ್ದೇವೆ. ಪುಸ್ತಕದ ಮೊದಲ ಆವೃತ್ತಿಯನ್ನು ನಮಗೆ ಲಭ್ಯಗೊಳಿಸಿದ ಶ್ರೀ ಎಂ.ಕೆ. ಗೋಪಾಲಕೃಷ್ಣ ಅವರಿಗೆ ನಾವು ಕೃತಜ್ಞರಾಗಿದ್ದೇವೆ. ಸಂಪಾದಕೀಯ ಕಾರ್ಯದಲ್ಲಿ ನೆರವಾದ ಶ್ರೀ ಟಿ.ಬಿ. ಲಕ್ಷ್ಮಣರಾವ್ ಅವರಿಗೆ ಧನ್ಯವಾದಗಳು.

ತಂತ್ರಕ್ಕೆ ಸಂಬಂಧಿಸಿದ ನಮ್ಮ ಈ ಸರಣಿಯನ್ನು ಭಾರತೀಯ ಸಂಸ್ಕೃತಿಯ ಪೋಷಕರೂ, ಯಂತ್ರ-ತಂತ್ರದ ಅಭಿಮಾನಿಗಳೂ, ಸಾಧಕರೂ ತುಂಬು ಹೃದಯದಿಂದ ಸ್ವೀಕರಿಸಿ ಓದಿದರೆ ನಮ್ಮ ಪ್ರಯತ್ನ ಸಾರ್ಥಕ ಎಂದು ಭಾವಿಸುತ್ತೇವೆ.

27.03.09 — ಪ್ರಕಾಶಕ

ಯುಗಾದಿ

ಪೀಠಿಕೆ

(ಮೊದಲನೇ ಆವೃತ್ತಿಗೆ ಬರೆದದ್ದು)

(1)

ಸಾಮಾನ್ಯವಾಗಿ ನಮ್ಮ ಗುಡಿಗಳಲ್ಲೂ ಮನೆಗಳಲ್ಲೂ ಮಾಡುವ ಪೂಜೆಯಲ್ಲಿ ವೈದಿಕ ವಿವರಗಳೂ ಇರುತ್ತವೆ, ತಾಂತ್ರಿಕ ವಿವರಗಳೂ ಇರುತ್ತವೆ. ಮುದ್ರೆ, ಮಂಡಲ, ಅಂಗನ್ಯಾಸ-ಕರನ್ಯಾಸಗಳು, ಪ್ರಾಣಪ್ರತಿಷ್ಠೆ, ಉಪಚಾರಗಳು ಇವೆಲ್ಲ ತಾಂತ್ರಿಕ ಚೌಕಟ್ಟಿನಿಂದ ಪಡೆದುಕೊಂಡವೇ. ಆದರೆ ಆ ಕ್ರಿಯೆಗಳನ್ನು ನಡೆಸುವಾಗ ಬಳಸುವ ಮಂತ್ರಗಳು ವೇದಗಳಿಂದ ಆಯ್ದುಕೊಂಡವು. ವೇದಮಂತ್ರಗಳಿಗೆ ಪೂಜೆಯಲ್ಲಿ ವಿನಿಯೋಗ ದಿಟವಾಗಿ ಇಲ್ಲ; ಆದರೆ ಯಾವ ಕಾಲದಿಂದಲೋ ನಮ್ಮ ಪೂಜೆಯ ವಿಧಿಗಳಲ್ಲಿ ಅವನ್ನು ಅಳವಡಿಸಿಕೊಂಡಿದ್ದೇವೆ. ಅವುಗಳ ಜೊತೆಗೆ ಪೌರಾಣಿಕ ಶ್ಲೋಕಗಳನ್ನೂ ಬಳಸುತ್ತೇವನ್ನಿ.

ದೇವತಾರ್ಚನೆಗೆ ಮತ್ತು ಅದಕ್ಕೆ ಸಂಬಂಧಪಟ್ಟ ಹೋಮ, ಉತ್ಸವ, ವ್ರತ ಮೊದಲಾದ ಸಂದರ್ಭಗಳಲ್ಲಿ ವಿಶೇಷವಾಗಿ ಬಳಸುವ ವೇದ ಮಂತ್ರಗಳೆಂದರೆ ಪುರುಷಸೂಕ್ತ ಮತ್ತು ಶ್ರೀಸೂಕ್ತ. ಇವುಗಳ ಬಳಕೆಯಲ್ಲಿ ಶೈವ, ವೈಷ್ಣವ, ಶಾಕ್ತ ಮೊದಲಾದ ಸಂಪ್ರದಾಯಭೇದ ಇರುವುದಿಲ್ಲ; ಎಲ್ಲರೂ ಇವನ್ನು ಸಮಾನವಾಗಿಯೇ ಬಳಸುತ್ತಾರೆ. ಪೂಜೆ, ಹೋಮ, ಜಪ, ಪಾರಾಯಣ ಎಲ್ಲ ಸಂದರ್ಭಗಳಲ್ಲೂ ಈ ಎರಡು ಸೂಕ್ತಗಳು ಪ್ರಸಿದ್ಧವಾಗಿವೆ. ಸಾಮಾನ್ಯವಾಗಿ ಎಲ್ಲ ಧಾರ್ಮಿಕ ಶ್ರದ್ಧಾಳುಗಳಿಗೂ ಇವುಗಳ ಪರಿಚಯವಿರುತ್ತದೆ.

'ಶ್ರೀಸೂಕ್ತ' ಎನ್ನುವುದು ಋಗ್ವೇದದ ಖಿಲಸೂಕ್ತಗಳಲ್ಲೊಂದು. 'ಖಿಲ'ವೆಂದರೆ ಪರಿಶಿಷ್ಟ ಭಾಗ. ಋಗ್ವೇದದ ಮೂಲಸ್ತರದಲ್ಲಿ ಸೇರದೆ, ಸಂಹಿತಾ ವ್ಯವಸ್ಥೆಯಾದ ಮೇಲೆ (ಮಂಡಲ, ಸೂಕ್ತ, ಋಕ್ಕುಗಳೆಂದೋ, ಅಥವಾ ಅಷ್ಟಕ, ಅಧ್ಯಾಯ, ವರ್ಗ, ಋಕ್ಕುಗಳೆಂದೋ) ಯಾವ ಕಾರಣದಿಂದಲೋ ಸೇರಿಕೊಂಡು ಬಂದ ಭಾಗ ಇದು. ಶ್ರೀಸೂಕ್ತವಲ್ಲದೆ ರಾತ್ರಿ ಸೂಕ್ತ, ಮೇಧಾ ಸೂಕ್ತ, ಶಿವಸಂಕಲ್ಪ ಸೂಕ್ತ ಮೊದಲಾದವೂ ಖಿಲಸೂಕ್ತಗಳೇ. ಇವುಗಳ ಭಾಷೆ, ಒಕ್ಕಣೆ, ಧೋರಣೆ ಮೊದಲಾದ ವಿವರಗಳು ಉಳಿದ ಮಂತ್ರಗಳಂತೆ ಪ್ರಾಚೀನವಲ್ಲ ಎಂಬುದನ್ನು ಗಮನಿಸಬಹುದು. ಸಂಹಿತೆ ಸಿದ್ಧವಾದ ಮೇಲೆ ಒದಗಿಬಂದ ಸೇರ್ಪಡೆ ಎನ್ನುವುದನ್ನೂ ಅರಿತುಕೊಳ್ಳಬಹುದು.

ಶ್ರೀಸೂಕ್ತ ಋಗ್ವೇದದ ಐದನೆಯ ಮಂಡಲ ಮುಗಿದ ಮೇಲೆ ಆರನೆಯ ಮಂಡಲ ಮೊದಲಾಗುವ ಮುಂಚೆ ಬರುತ್ತದೆ. ಈ ಮಂಡಲಕ್ಕೆ ಆತ್ರೇಯ ಮಂಡಲವೆಂದೂ ಹೆಸರಿದೆ. ಇದಕ್ಕೆ ಹಲವು ಪರಿಶಿಷ್ಟ ಭಾಗಗಳು ಸೇರಿವೆ. ಐದನೆಯ ಮಂಡಲದ ಋಕ್ಕುಗಳು ಮುಗಿದೊಡನೆ

'ಅತೇ ಗರ್ಭೋ' ಎಂದು ಮೊದಲಾಗುವ ಐದು ಮಂತ್ರಗಳೂ, ಅನಂತರ 'ಅಗ್ನಿರೈತು' ಎಂದು ಆರಂಭವಾಗುವ ಮತ್ತೆ ಐದು ಮಂತ್ರಗಳೂ, ಅನಂತರ 'ಹಿರಣ್ಯವರ್ಣಾಂ' ಎಂದು ಮೊದಲಾಗುವ ಹದಿನೈದು ಮಂತ್ರಗಳೂ ಇವೆ. ಈ ಹದಿನೈದು ಮಂತ್ರಗಳನ್ನೇ ಕೂಡಿಸಿ ಶ್ರೀಸೂಕ್ತವೆಂದು ಕರೆಯುತ್ತಾರೆ. ಈ ಎಲ್ಲ ಮಂತ್ರಗಳೂ ವಾಸ್ತವವಾಗಿ ಅಗ್ನಿಯನ್ನು ಕುರಿತವು; ಆದರೆ ಸಂಪತ್ತಿನ ಅಭಿಮಾನಿ ದೇವತೆಯಾದ ಲಕ್ಷ್ಮಿಯನ್ನು ಕುರಿತವೆಂದು ಪ್ರತೀತಿಯಿದೆ. ಆದುದರಿಂದಲೇ ಅವುಗಳ ಬಳಕೆ ವಿಶೇಷವಾಗಿದೆ !

ಈ ಸೂಕ್ತದಲ್ಲಿ ಸೇರಿರುವುದು ಹದಿನೈದು ಮಂತ್ರಗಳು (ಅಥವಾ ಋಕ್ಕುಗಳು). ಸಂಪ್ರದಾಯದಲ್ಲಿ ಇದಕ್ಕೆ 'ಪಂಚದಶರ್ಚ' (ಎಂದರೆ ಹದಿನೈದು ಋಕ್ಕುಗಳುಳ್ಳದ್ದು) ಎಂದೇ ಹೆಸರಿದೆ. ಆದರೆ ಈಗ ಪೂಜಾದಿ ಸಂದರ್ಭಗಳಲ್ಲಿ ಪಠಿಸುವ ಶ್ರೀಸೂಕ್ತದಲ್ಲಿ ಈ ಹದಿನೈದು ಋಕ್ಕುಗಳಲ್ಲದೆ, ಮತ್ತೆ ಹನ್ನೆರಡು (ಅಥವಾ ಹದಿಮೂರು) ಶ್ಲೋಕಗಳನ್ನೂ ಪೌರಾಣಿಕವಾದ ಇನ್ನೂ ಮೂರು ಶ್ಲೋಕಗಳನ್ನೂ, ಕಡೆಗೆ ಲಕ್ಷ್ಮೀ ಗಾಯತ್ರಿಯನ್ನೂ ಸೇರಿಸಿಕೊಳ್ಳುವುದುಂಟು. ಆದರೆ ಇವುಗಳಿಗೆ ಋಕ್ಕುಗಳೆಂಬ ವ್ಯವಹಾರವಿಲ್ಲ; ಇವುಗಳಿಗೆ ಋಷಿ, ದೇವತೆ, ಛಂದಸ್ಸು, ವಿನಿಯೋಗಗಳನ್ನು ಹೇಳುವ ಪದ್ಧತಿಯೂ ಇಲ್ಲ. ಬಹುಮಟ್ಟಿಗೆ ಅವು ಪೌರಾಣಿಕ ಶ್ಲೋಕಗಳಂತೆ ತೋರುತ್ತವೆ. ಅವುಗಳಲ್ಲಿ ಪಾಠ ಭೇದವಿದೆ; ಅವುಗಳ ಕ್ರಮವೂ ಬೇರೆ ಬೇರೆಯಾಗಿಯೇ ಇರುವುದುಂಟು. ಅವುಗಳಲ್ಲಿ ಒಂದೇ ಧೋರಣೆಯಾಗಲಿ, ತಾತ್ಪರ್ಯವಾಗಲೀ ಇಲ್ಲ. ವೇದದ ಭಾಷ್ಯಕಾರರು ಗಮನಿಸಿಲ್ಲದಿರುವುದನ್ನೂ ನಾವು ಗಮನಿಸಬೇಕು; ಅವರ ಪಾಲಿಗೆ ವೇದಕ್ಕೆ ಸೇರಿದ ಭಾಗ ಹದಿನೈದು ಋಕ್ಕುಗಳಷ್ಟೆ. ಹೀಗೆ ಪರಿಶಿಷ್ಟಕ್ಕೆ ಪರಿಶಿಷ್ಟವಾಗಿ ಸೇರಿಕೊಂಡು ಬಂದ ಈ ಶ್ಲೋಕಗಳಲ್ಲಿ ಹತ್ತನೆಯದು ಋಗ್ವೇದದ ನಾಲ್ಕನೆಯ ಅಷ್ಟಕದ ನಾಲ್ಕನೆಯ ಅಧ್ಯಾಯದ ಮೂವತ್ತೊಂದನೆಯ ವರ್ಗಕ್ಕೆ ಪರಿಶಿಷ್ಟವಾಗಿ ಸೇರಿರುವ 'ವರ್ಷಂ ತು ತೇ ವಿಭಾವರೀ' ಎಂದು ಮೊದಲಾಗುವ ಮಂತ್ರ.

(2)

ಶ್ರೀ ಸೂಕ್ತದ ಈಗಿನ ಬಳಕೆ ಇದು ಲಕ್ಷ್ಮಿಯನ್ನು ಕುರಿತ ಮಂತ್ರಗಳೆಂಬ ಕಾರಣದಿಂದ. ಇಲ್ಲಿ 'ಶ್ರೀ' ಎಂದರೇ ಲಕ್ಷ್ಮಿ. ಆದರೆ ವಿಷ್ಣುವಿನ ಹೆಂಡತಿ, ಐಶ್ವರ್ಯದ ದೇವತೆ ಎಂಬ ಸಂಕುಚಿತ ಅರ್ಥ ಹದಿನೈದು ಮಂತ್ರಗಳಲ್ಲಿ ಕಾಣುವುದಿಲ್ಲ. ಇದು ಮಾತೃದೇವತೆಯ, ಜಗದ್ಧಾತ್ರಿಯ ಸ್ತುತಿ. ಚಂದ್ರ-ಸೂರ್ಯರೊಡನೆ ಆಕೆಯ ಸಮೀಕರಣ ನಡೆದಿದೆ; ದಿಟವಾಗಿ ಆಕೆ ಅಗ್ನಿಯೇ. ಶಿವನೂ ವಿಷ್ಣುವೂ ಇತರ ದೇವತೆಗಳೂ ಆಕೆಯನ್ನು ಅವಲಂಬಿಸುವರು. ಆಕೆ 'ನಾರಾಯಣಿ'ಯೂ ಹೌದು, 'ತ್ರ್ಯಂಬಕೆ'ಯೂ ಹೌದು. ಈ ಕಾರಣದಿಂದ ಶಕ್ತಿ ಪೂಜೆಯ ಸಂದರ್ಭದಲ್ಲೆಲ್ಲ (ಶೈವಪದ್ಧತಿಯಾಗಲಿ, ವೈಷ್ಣವ ಪದ್ಧತಿಯಾಗಲಿ, ಶಾಕ್ತಪದ್ಧತಿಯಾಗಲಿ) ಈ ಸೂಕ್ತವನ್ನು ಬಳಸಿಕೊಳ್ಳುತ್ತಾರೆ.

'ಶ್ರೀ' ಎನ್ನುವ ಮಾತು 'ಶ್ರಿಜ್' ಎಂಬ ಧಾತುವಿನಿಂದ ಒದಗಿದೆ; ಈ ಧಾತುವಿಗೆ ಆಶ್ರಯಿಸುವುದು, ಸೇವಿಸುವುದು ('ಶ್ರಿಜ್ ಸೇವಾಯಾಂ') ಎಂದರ್ಥ. ಇದಕ್ಕೆ 'ಆಜ್' ಎನ್ನುವ ಉಪಸರ್ಗವನ್ನು ಹಚ್ಚಿ 'ಶ್ರೀ' ಎಂಬ ಪದವನ್ನು ಮಾಡಿದ್ದಾರೆ. ಎಲ್ಲರೂ ಯಾವುದನ್ನು ಆಶ್ರಯಿಸುವರೋ ಅದು ಶ್ರೀ ('ಶ್ರೀಯತೇ ಸರ್ವೈಃ ಇತಿ ಶ್ರೀಃ'). ಎಲ್ಲರೂ ಎಲ್ಲ ಪ್ರಾಣಿಗಳೂ ಆಶ್ರಯಿಸುವುದು ಲಕ್ಷ್ಮಿಯನ್ನು, ಎಂದರೆ ಎಲ್ಲ ಪ್ರಾಣಿಗಳಲ್ಲೂ ಸಂಪತ್ತಿನ ರೂಪದಲ್ಲಿ ಅಡಗಿರುವ ಶಕ್ತಿ. 'ಯಾ ದೇವೀ ಸರ್ವಭೂತೇಷು ಲಕ್ಷ್ಮೀರೂಪೇಣ ಸಂಸ್ಥಿತಾ'. ಲಕ್ಷ್ಮಿ ಎಂದರೆ ಚಿಹ್ನೆ, ಗುರುತು, ಕಾಣಿಸುವ ಒಂದು ಸಾಧನ ('ಲಕ್ಷಯತ್ಯನಯಾ'), ಚೈತನ್ಯವೂ ಭೂತಿಯೂ ಇರುವುವೆಂಬ ಗುರುತು. ಈ ಕಾರಣದಿಂದಲೇ ಆ ಶಕ್ತಿ ''ಏವಂ ಸರ್ವತ್ರ ಸರ್ವೈಶ್ಚ ವಂದಿತಾ ಪೂಜಿತಾ ಸದಾ। ಸರ್ವೈಶ್ವರ್ಯಾಧಿದೇವೀ ಸಾ ಸರ್ವ ಸಂಪತ್ಸ್ವರೂಪಿಣೀ ॥''

ದುರ್ಗಾಸಪ್ತಶತಿಯಲ್ಲಿ ದೇವಿಯನ್ನು 'ತ್ವಂ ಶ್ರೀಃ ತ್ವಂ ಈಶ್ವರೀ' ಎಂದು ಕರೆದಿದೆ; ಮತ್ತು 'ಆಧಾರಭೂತಾ ಜಗತಃ ತ್ವಮೇಕಾ' ಎಂದೂ 'ಸರ್ವಾಶ್ರಯಾಖಿಲಮಿದಂ ಜಗತ್' ಎಂದೂ ಬಣ್ಣಿಸಿದೆ. ವಿಷ್ಣುಪತ್ನಿಯಾದ ಲಕ್ಷ್ಮಿಯೆಂದು ಮಾತ್ರವಲ್ಲದೆ ಎಲ್ಲ ಮಾತೃದೇವತೆಗಳನ್ನೂ ಪ್ರತಿನಿಧಿಸುವುದು 'ಶ್ರೀ'. ಆಕೆಯನ್ನು ಪೂಜೆ ಮಾಡಿದರೆ ಜನರಿಗೆ ಇಹಲೋಕದ ಭೋಗಗಳೂ ಮೋಕ್ಷವೂ ದೊರೆಯುವುವೆಂಬ ನಂಬಿಕೆಯೂ ಇದೆ ('ಆರಾಧಿತಾ ಸೈವ ನೃಣಾಂ ಭೋಗ ಸ್ವರ್ಗಾಪವರ್ಗದಾ'). ಕಾಲಿಕಾಪುರಾಣವು ಆಕೆಯನ್ನು 'ಮಹಾಮಾಯಾ, ಜಗದೀಶ್ವರೀ' ಎಂದು ಮಾತ್ರವಲ್ಲದೆ 'ಆತ್ಮವಿದ್ಯೆ'ಯೆಂದೂ 'ಗುಹ್ಯವಿದ್ಯೆ' ಎಂದೂ ಕರೆದಿದೆ.

'ಶ್ರೀ' ಎನ್ನುವುದಾಗಲಿ ಶಕ್ತಿಯೆನ್ನುವುದಾಗಲಿ ಸ್ತ್ರೀಲಿಂಗವಾಚಿಯಾದ ಪದಗಳು. ಜನರ ಕಲ್ಪನೆಯಲ್ಲೂ ಹೆಂಗಸಿನ ರೂಪದಲ್ಲೇ ಕಾಣಿಸಿಕೊಳ್ಳುವುದುಂಟು. ಆದರೆ ತಾತ್ತ್ವಿಕವಾಗಿ ಸ್ತ್ರೀಪುರುಷ ಭೇದವನ್ನು ಮೀರಿದ್ದು ಅದು. ದಕ್ಷಿಣಾಮೂರ್ತಿಸಂಹಿತೆಯಲ್ಲಿ ವಿಶ್ವಕ್ಕೆಲ್ಲ ಬೀಜಭೂತವಾದ ಈ ತತ್ತ್ವವೇ ಹೆಂಗಸಾಗಿ ಗಂಡಸಾಗಿ ಬೆಳಗುವಳೆಂದು ಹೇಳಿದೆ ('ಯೋಷಿತ್ ಪುರುಷ ರೂಪೇಣಸ್ಫುರಂತೀ ವಿಶ್ವಮಾತೃಕಾ'). ಎಂದರೆ ಪ್ರಕೃತಿಯೂ ಪುರುಷನೂ ಅದೇ ತತ್ತ್ವವೇ. ಹಾಗೆಂದೇ ವಾಮಕೇಶ್ವರತಂತ್ರವು ಶಕ್ತಿಯನ್ನು 'ಪರಬ್ರಹ್ಮ ಸ್ವರೂಪಾ ಚ' ಎಂದು ವಿವರಿಸುತ್ತದೆ. ಪಾರಮಾರ್ಥಿಕ ಅವಸ್ಥೆಯಲ್ಲಿ ನಿಷ್ಕಲವಾಗಿ, ಅಲಿಂಗವಾಗಿದ್ದರೂ, ಜಗತ್ತಿನ ಕಡೆಯಿಂದ ನಾವು ನೋಡುವಾಗ ಇವೆಲ್ಲವನ್ನೂ ಉಂಟುಮಾಡುವ ಮಹಾಶಕ್ತಿಯೆಂದು ಭಾವಿಸಿ ಸ್ತ್ರೀರೂಪವನ್ನು ಅದಕ್ಕೆ ಆರೋಪಮಾಡುವುದು ಸಹಜವೇ. ತಾಂತ್ರಿಕರು 'ಯೋನಿ'ಯೆಂದು ಕರೆಯುವುದು ಇದೇ ಅರ್ಥದಲ್ಲಿಯೇ. ಪರಬ್ರಹ್ಮವೆನ್ನುವುದು ಪೂರ್ವರೂಪ; ಯೋನಿ ಅಥವಾ ಆದ್ಯಾಶಕ್ತಿಯೆನ್ನುವುದು ಉತ್ತರರೂಪ. ಇವೆರಡನ್ನೂ ಒಳಮಾಡಿಕೊಂಡು ಸಾಧಕರ ಹೃದಯದಲ್ಲಿ ಬೆಳಗುವ 'ಅಗ್ನಿಸ್ತಂಭ' (ಎಂದರೆ ತೇಜಸ್ಸಿನ ಕಂಬ)ವನ್ನೇ 'ಶ್ರೀ' ಎಂದು ಕರೆದಿದ್ದಾರೆ.

ದೇವ್ಯಥರ್ವಶೀರ್ಷದಲ್ಲಿ 'ನೀನು ಯಾರೆಂದು' ('ಕಾಸಿ ತ್ವಂ ಮಹಾದೇವಿ?') ಪ್ರಶ್ನೆ ಮಾಡಿ, ದೇವಿಯ ಬಾಯಿಂದ 'ನಾನು ಬ್ರಹ್ಮಸ್ವರೂಪಿಣಿ, ನನ್ನಿಂದಲೇ ಪ್ರಕೃತಿ ಪುರುಷಾತ್ಮಕವಾದ ಈ

ಜಗತ್ತು' ಎಂದು ಹೇಳಿಸಿದೆ. ('ಅಹಂ ಬ್ರಹ್ಮಸ್ವರೂಪಿಣೀ, ಮತ್ತಃ ಪ್ರಕೃತಿ ಪುರುಷಾತ್ಮಕಂ ಜಗತ್'). ಇವೆರಡರಲ್ಲಿ ಭೇದವಿಲ್ಲ ಎಂದು ಸೂಚಿಸುವುದು ಈ ಸಂವಾದದ ಉದ್ದೇಶ. ಜಗತ್ತಿನ ಸ್ವಭಾವದಲ್ಲೇ ಎಡೆಬಿಡದೆ ಅಡಗಿರುವ ಸ್ತ್ರೀತತ್ತ್ವ (ಪ್ರಕೃತಿ) ಮತ್ತು ಪುರುಷತತ್ತ್ವ ಎರಡೂ ವಾಸ್ತವವಾಗಿ ಒಂದೇ. ಕಾರ್ಯರೂಪವಾದ ಜಗತ್ತು (ಎಂದರೆ ಸಗುಣ, ವ್ಯಕ್ತ, ಪ್ರಪಂಚ) ಮತ್ತು ಅದರ ಕಾರಣರೂಪವಾದ ಬ್ರಹ್ಮ ಎರಡೂ ಪಾರಮಾರ್ಥಿಕವಾಗಿ ಒಂದೇ.

ಶ್ರೀಸೂಕ್ತದ ತಾತ್ತ್ವಿಕ ಚೌಕಟ್ಟು ಇದಾದರೂ, ಆರಾಧನೆಗಾಗಿ ಇದನ್ನು ಬಳಸುವಾಗ ಸಗುಣಕಲ್ಪನೆಯೇ ಇದೆ. ತಾವರೆಹೂವಿನ ಮೇಲೆ, ತಾವರೆ ಹೂಗಳನ್ನು ಕೈಯಲ್ಲಿ ಹಿಡಿದು, ವಿವಿಧ ಆಭರಣಗಳಿಂದ ಕಂಗೊಳಿಸುತ್ತ ಕುಳಿತಿರುವ ದೇವಿಯನ್ನು ಕಲ್ಪಿಸಿಕೊಳ್ಳುತ್ತಾರೆ. ಈ ಸಾಕಾರಮೂರ್ತಿಯನ್ನು ಲಕ್ಷ್ಮಿಯೆಂದು ನಿರ್ದೇಶನ ಮಾಡಿದ್ದಾರೆ. ಆದ್ದರಿಂದ ಧ್ಯಾನಶ್ಲೋಕಗಳೂ, ನ್ಯಾಸಾದಿಗಳಿಗೆ ಬಳಸುವ ಮಾತುಗಳೂ, ನಾಮಜಪಕ್ಕೆ ಸಿದ್ಧಪಡಿಸಿಕೊಳ್ಳುವ ಹೆಸರುಗಳೂ ಲಕ್ಷ್ಮಿಯನ್ನೇ ಕುರಿತವು. ಶ್ರೀಸೂಕ್ತದ 'ಶ್ರೀ' ಮಂಗಳದೇವತೆ.

(3)

ಸೂಕ್ತವೆಂದರೆ ಋಕ್ಕುಗಳ ಸಂಗ್ರಹ. ಈ ಮಾತಿನ ಅರ್ಥವೇನೊ 'ಚೆನ್ನಾಗಿ ಹೇಳಿದ್ದು' ('ಸುಷ್ಠು ಉಕ್ತಂ') ಎಂದಷ್ಟೇ. ಆದರೆ ವೈದಿಕ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ವಿಭಾಗ ಮಾಡಿಕೊಳ್ಳುವಾಗ, ಹಲವು ಋಕ್ಕುಗಳನ್ನು ಒಂದು ಗುಂಪಿನಲ್ಲಿ ಸೇರಿಸಿ 'ಸೂಕ್ತ'ವೆಂದೂ, ಹಲವು ಸೂಕ್ತಗಳನ್ನು ಒಂದು ಗುಂಪಾಗಿ ಜೋಡಿಸಿ 'ಮಂಡಲ'ವೆಂದೂ ಎಣಿಸುವ ಪದ್ಧತಿಯಿದೆ. ಋಗ್ವೇದದಲ್ಲಿ ಹತ್ತು ಮಂಡಲಗಳು, 1028 ಸೂಕ್ತಗಳು, 10,552 ಋಕ್ಕುಗಳು ಇವೆ.

ಆದರೆ ಎಲ್ಲ ಸೂಕ್ತಗಳಿಗೂ ಬೇರೆ ಬೇರೆ ಹೆಸರಿರುವುದಿಲ್ಲ. ವಿಶಿಷ್ಟವಾದ ಹೆಸರುಗಳನ್ನು ಪಡೆದುಕೊಂಡು ಪ್ರಸಿದ್ಧವಾಗಿರುವ ಸೂಕ್ತಗಳು ಕೆಲವೇ. ನಿದರ್ಶನಕ್ಕೆ 'ಅಗ್ನಿಮೀಳೇ' ಎಂಬ ಋಕ್ಕಿನಿಂದ ಮೊದಲಾಗುವ 'ಅಗ್ನಿಸೂಕ್ತ' (ಮೊದಲ ಮಂಡಲ, ಮೊದಲ ಸೂಕ್ತ) ''ಸಹಸ್ರಶೀರ್ಷಾ'' ಎಂಬ ಋಕ್ಕಿನಿಂದ ಮಾಡಲಾಗುವ 'ಪುರುಷಸೂಕ್ತ' (10ನೆ ಮಂಡಲ, 60ನೆಯ ಸೂಕ್ತ), 'ಅಹಂ ರುದ್ರೇಭಿಃ' ಎಂದು ಮೊದಲಾಗುವ 'ದೇವೀಸೂಕ್ತ' (10,125), 'ರಾತ್ರೀ ವ್ಯಖ್ಯದಾಯತೀ' ಎಂಬ ಋಕ್ಕಿನಿಂದ ಮೊದಲಾಗುವ 'ರಾತ್ರಿಸೂಕ್ತ' (10,127), 'ಅತೋ ದೇವಾ ಅವಂತು ನೋ' ಎಂದು ಮೊದಲಾಗುವ 'ವಿಷ್ಣುಸೂಕ್ತ' (1,22,16), 'ಹಿರಣ್ಯವರ್ಣಾಂ' ಎಂದು ಮೊದಲಾಗುವ 'ಶ್ರೀಸೂಕ್ತ' (ಐದನೆಯ ಮಂಡಲವಾದ ಮೇಲೆ). ಋಗ್ವೇದದಲ್ಲಿ ವಾಸ್ತವವಾಗಿ ಸೂಕ್ತಗಳು 1017; ಆದರೆ, 'ವಾಲಖಿಲ್ಯಸೂಕ್ತ'ಗಳನ್ನೂ ಸೇರಿಸಿದರೆ ಮೊತ್ತ 1028 ಆಗುತ್ತದೆ. ಹನ್ನೊಂದು ಸೂಕ್ತಗಳಿಗೆ ಒಟ್ಟಾರೆ 'ವಾಲಖಿಲ್ಯ ಸೂಕ್ತ'ಗಳೆಂದು ಹೆಸರು.

(4)

ಶ್ರೀಸೂಕ್ತಕ್ಕೆ ಹಲವಾರು ಭಾಷ್ಯಗಳೂ ವ್ಯಾಖ್ಯಾನಗಳೂ ಇವೆ. ಇಡೀ ಋಗ್ವೇದಕ್ಕೆ ಭಾಷ್ಯ ಬರೆದ ಸಾಯಣಾಚಾರ್ಯರು ಮತ್ತು ಪೃಥ್ವೀಧರಾಚಾರ್ಯರು ಋಗ್ವೇದಕ್ಕೆ ಸೇರಿದ ಈ ಸೂಕ್ತದ ಮೇಲೂ ಭಾಷ್ಯ ಬರೆದಿದ್ದಾರೆ. ದಕ್ಷಿಣ ದೇಶದಲ್ಲಿ ಸಾಯಣರ ಪ್ರಸಿದ್ಧಿ ವಿಶೇಷವಾಗಿ ಇದ್ದರೂ, ವಾಡಿಕೆಯಲ್ಲಿರುವುದು ಪೃಥ್ವೀಧರರ ಭಾಷ್ಯವೇ. ಇವರ ಭಾಷ್ಯದ ಆಧಾರದಿಂದಲೇ ಜನರು ಶ್ರೀಸೂಕ್ತದ ತಾತ್ಪರ್ಯವನ್ನು ಮನಗಂಡಿರುವುದು. ಇಡೀ ಋಗ್ವೇದದ ಮೇಲೆ ಭಾಷ್ಯವನ್ನು ಸಿದ್ಧಮಾಡಿದ ಇನ್ನೊಬ್ಬ ಆಚಾರ್ಯರು ಶ್ರೀಕಂಠರು. ಇವರೂ ಶ್ರೀಸೂಕ್ತಕ್ಕೆ ಭಾಷ್ಯ ಬರೆದಿದ್ದಾರೆ. ಇವರದ್ದು ಶೈವದೃಷ್ಟಿ. ಇಲ್ಲಿ ಬರುವ ಜಾತವೇದ-ಅಗ್ನಿಯನ್ನು ಇವರು ಶಿವನೆಂದು, 'ಶ್ರೀ' ದೇವಿಯನ್ನು ಗೌರಿಯೆಂದು ಗುರುತಿಸಿದ್ದಾರೆ.

ಶ್ರೀಸೂಕ್ತಕ್ಕೆ ಸ್ವತಂತ್ರವಾಗಿ ವ್ಯಾಖ್ಯಾನ ಮಾಡಿರುವ ನಿದರ್ಶನಗಳು ಹಲವು. ಆದರೆ, ಇವನ್ನು ಬರೆದವರ ವಿಚಾರವಾಗಿ ಹೆಚ್ಚೇನೂ ತಿಳಿದುಬರುವುದಿಲ್ಲ. ಶತಾನಂದರ 'ವೃತ್ತಿ', ಚಿದಾನಂದರ 'ವಿವೃತಿ', ಬರೆದವರ ಹೆಸರು ತಿಳಿಯದ 'ಸೂಕ್ತಾರ್ಥಸಂಗ್ರಹ', 'ಆಂಡವಲ್ಲೀ ವ್ಯಾಖ್ಯಾ', 'ಸಾರಸ್ವತ ಸಿದ್ಧಿ', 'ಭಾಗಧೇಯ ಭೂಷಣ', ಮತ್ತು 'ಸೌಭಾಗ್ಯ ಸಂಜೀವನ' ಇವು ಅಚ್ಚು ಕಂಡಿರುವ ವ್ಯಾಖ್ಯಾನಗಳು. ಇವಲ್ಲದೆ, ವಿಶಿಷ್ಟಾದ್ವೈತ ಸಂಪ್ರದಾಯಕ್ಕನುಸಾರವಾಗಿ ರಾಮಾನುಜಾಚಾರ್ಯರ ಸಾಕ್ಷಾಚ್ಛಿಷ್ಯರಾದ ಪರಾಶರಭಟ್ಟರು 'ಶ್ರೀಗುಣರತ್ನಕೋಶ'ವೆಂಬ ಒಂದು ವ್ಯಾಖ್ಯಾನವನ್ನೂ, ಪರಾಶರಭಟ್ಟರ ಶಿಷ್ಯರಾಗಿದ್ದ ಮಾಧವಸೂರಿಗಳು (ನಂಜೀಯರ್) 'ಶ್ರೀಸೂಕ್ತಭಾಷ್ಯ'ವೆಂಬ ಇನ್ನೊಂದು ವ್ಯಾಖ್ಯಾನವನ್ನೂ ರಚಿಸಿದ್ದಾರೆ.

ಶ್ರೀಸೂಕ್ತವನ್ನೇ ಎದುರಿಗಿರಿಸಿಕೊಂಡು ಮಾಡಿದ ವ್ಯಾಖ್ಯಾನಗಳು ಇವು. ಹೀಗೆ ನಿರ್ದಿಷ್ಟವಾದ ಚೌಕಟ್ಟಿಲ್ಲದೆ, ಪೂಜಾಕ್ರಮ, ಮಂತ್ರ ನಿರ್ದೇಶನ ಇವುಗಳನ್ನು ವಿವರಿಸಲು ಹೊರಟ ಕೆಲವು ಗ್ರಂಥಗಳೂ ಶ್ರೀಸೂಕ್ತದ ಮಂತ್ರಗಳಿಗೆ ಅರ್ಥವನ್ನು ಹೇಳುತ್ತವೆ. 'ಮಂತ್ರಕಲ್ಪಾರ್ಣವ', 'ವೈಖಾನಸವಿದ್ಯಾ', 'ಲಕ್ಷ್ಮೀಯಾಮಳ', 'ಶ್ರೀರತ್ನಕೋಶ', 'ಶ್ರೀತತ್ತ್ವ' ಮುಂತಾದವು. ಲಕ್ಷ್ಮಿಯ ಪೂಜೆಗೆಂದೇ ಸಿದ್ಧವಾದ 'ಮಹಾಲಕ್ಷ್ಮೀ ರತ್ನಕೋಶ', 'ಶ್ರೀವಿದ್ಯಾ ವಿಲಾಸ' ಮುಂತಾದ ಗ್ರಂಥಗಳೂ ಇವೆ.

ಶ್ರೀಸೂಕ್ತದಲ್ಲಿ, ಮೊದಲೇ ಹೇಳಿದಂತೆ, ಹದಿನೈದು ಋಕ್ಕುಗಳು ಸೇರಿವೆ. ವೈದಿಕ ಮಂತ್ರಗಳಾದುದರಿಂದ ಒಂದೊಂದು ಋಕ್ಕಿಗೂ ಬೇರೆ ಬೇರೆಯಾಗಿ ಋಷಿ, ಛಂದಸ್ಸು, ದೇವತೆ, ವಿನಿಯೋಗಗಳನ್ನು ಸೂಚಿಸುವ ವಾಡಿಕೆಯಿದೆ. ಆದರೆ ಎಲ್ಲ ಋಕ್ಕುಗಳನ್ನೂ ಸೇರಿಸಿ 'ಸಮಷ್ಟಿಸೂಕ್ತ'ವೆಂದು ಬಗೆದು ಒಟ್ಟಾರೆ ಅವುಗಳಿಗೆ ಲಕ್ಷ್ಮಿಯ ಮಾನಸ ಪುತ್ರರೆಂದು ಹೇಳುವ ಆನಂದ, ಚಿಕ್ಲೀತ, ಕರ್ದಮ, ಶ್ರೀದ (ಅಥವಾ ಇಂದಿರ) ಇವರನ್ನು ಋಷಿಗಳೆಂದು ಎಣಿಸುತ್ತಾರೆ. ಕೆಲವೊಮ್ಮೆ 'ಶ್ರೀದ'ನನ್ನು ಬಿಟ್ಟು ಉಳಿದ ಮೂವರನ್ನು ಮಾತ್ರ ಎಣಿಸುತ್ತಾರೆ

(ಪರಿಶಿಷ್ಟ ಶ್ಲೋಕ 2ರಲ್ಲಿರುವಂತೆ). ಸಮಷ್ಟಿಸೂಕ್ತದ ದೇವತೆಗಳು ಇಬ್ಬರು: ಅಗ್ನಿ (ಜಾತವೇದ) ಮತ್ತು ಲಕ್ಷ್ಮಿ (ಶ್ರೀ). ಆದ್ದರಿಂದ 'ಶ್ರ್ಯಗ್ನೀ' ಎಂದೋ 'ಶ್ರೀರಗ್ನಿರ್ದೇವತೇ' ಎಂದೋ ಹೇಳುವ ವಾಡಿಕೆ. ಸೂಕ್ತದ ಮೊದಲ ಮೂರು ಮಂತ್ರಗಳು ಅನುಷ್ಟುಪ್ ಛಂದಸ್ಸಿನಲ್ಲಿವೆ; ನಾಲ್ಕನೆಯದು ಬೃಹತೀ ಛಂದಸ್ಸು, ಐದನೆಯದೂ ಆರನೆಯದೂ ತ್ರಿಷ್ಟುಭ್ ಛಂದಸ್ಸು; ಕಡೆಯದು ಪ್ರಸ್ತಾರ ಪಂಕ್ತಿಯೆಂಬ ಛಂದಸ್ಸು. ಉಳಿದ ಮಂತ್ರಗಳೆಲ್ಲ ಅನುಷ್ಟುಪ್ ಛಂದಸ್ಸಿನಲ್ಲಿವೆ.

ಸೂಕ್ತದ ಮೊದಲ ಮಾತಾದ 'ಹಿರಣ್ಯವರ್ಣಾಂ' ಎಂಬುದನ್ನು ಸೂಕ್ತದ 'ಬೀಜ'ವೆಂದು ಪರಿಗಣಿಸುವರು. ಎರಡನೆಯ ಮಂತ್ರ ಮೊದಲಾಗುವ 'ತಾಂ ಮ ಆವಹ ಜಾತವೇದೋ' ಎಂಬುದು ಸೂಕ್ತದ 'ಶಕ್ತಿ', ಏಳನೆಯ ಮಂತ್ರದ ಕಡೆಯಲ್ಲಿ ಬರುವ 'ಕೀರ್ತಿಂ ಋದ್ಧಿಂ ದದಾತು ಮೇ' ಎನ್ನುವುದನ್ನು 'ಕೀಲಕ'ವೆಂದು ಹೇಳುತ್ತಾರೆ. ಸೂಕ್ತವನ್ನು ಸಂಪ್ರದಾಯದಂತೆ ಪಠಿಸುವವರು 'ಬೀಜ', 'ಶಕ್ತಿ', 'ಕೀಲಕ'ಗಳನ್ನೂ ಗುರುತಿಸಬೇಕೆಂಬ ವಿಧಿಯಿದೆ. 'ಬೀಜ'ವೆಂದರೆ ಇಡೀ ಸೂಕ್ತ ಎಲ್ಲಿಂದ ಮೊದಲಾಗುವುದೋ ಆ ಭಾಗ; ಸೂಕ್ತದ ಅತ್ಯಾವಶ್ಯಕವಾದ ಭಾಗ ಇದು. 'ಶಕ್ತಿ'ಯೆನಿಸಿಕೊಳ್ಳುವ ಭಾಗದಲ್ಲಿ ಸೂಕ್ತದ ಆಧ್ಯಾತ್ಮಿಕ ಸಾಮರ್ಥ್ಯವು ಅಡಗಿರುವುದೆಂದು ನಂಬಿಕೆ. 'ಕೀಲಕ'ವೆಂದರೆ ಗೂಟ; ಸೂಕ್ತವನ್ನು ಪಠಿಸುವವನು ತನ್ನ ಶ್ರದ್ಧೆಯನ್ನು ಈ ಭಾಗಕ್ಕೆ ಕಟ್ಟಿ ಹಾಕಿರಬೇಕೆಂದು ತಾತ್ಪರ್ಯ.

ಸೂಕ್ತಕ್ಕೆ ಒಂದು ಧ್ಯಾನಶ್ಲೋಕವೂ ಇದೆ –

ಅರುಣಕಮಲಸಂಸ್ಥಾ ತದ್ರಜಃಪುಂಜವರ್ಣಾ
ಕರಕಮಲಧೃತೇಷ್ಟಾಭೀತಿಯುಗ್ಮಾಂಬುಜಾತಾ ।
ಮಣಿಮಕುಟವಿಚಿತ್ರಾಲಂಕೃತಿಃ ಪದ್ಮಮಾಲಾ
ಭವತು ಭುವನಮಾತಾ ಸಂತತಂ ಶ್ರೀಃ ಶ್ರಿಯೈ ನಃ ॥

ಈ ಧ್ಯಾನಶ್ಲೋಕದಲ್ಲಿ ಶ್ರೀದೇವಿಯನ್ನು ಮಾನುಷಮೂರ್ತಿಯನ್ನಾಗಿ ಕಲ್ಪಿಸಿಕೊಂಡು, ಕೆಂದಾವರೆ ಹೂವಿನ ಮೇಲೆ ಕುಳಿತಂತೆ, ಅದರ ಪರಾಗದಿಂದ ಮೈಯೆಲ್ಲ ಕೆಂಬಣ್ಣವಾಗಿ ಹೊಳೆಯುವಂತೆ, ತನ್ನ ನಾಲ್ಕು ಕೈಗಳಲ್ಲಿ ವರದಮುದ್ರೆ, ಅಭಯಮುದ್ರೆ, ಎರಡು ಕಮಲಗಳು ಇವನ್ನು ಹಿಡಿದಂತೆ, ತಲೆಯ ಮೇಲೆ ಬೆಳಗುವ ಮುಕುಟವನ್ನು ಧರಿಸಿದಂತೆ, ಕಮಲದ ಹೂಗಳ ಮಾಲೆಯನ್ನು ತೊಟ್ಟಂತೆ ಚಿತ್ರಿಸಿಕೊಳ್ಳಬೇಕೆಂದು ವಿಧಿ. ಹೀಗೆ ಮನಸ್ಸಿನಲ್ಲಿ ಮೂಡಿಸಿಕೊಂಡ ಲಕ್ಷ್ಮಿಯನ್ನು 'ಜಗತ್ತುಗಳಿಗೆಲ್ಲ ತಾಯಿ' (ಭುವನಮಾತಾ) ಎಂದು ಬಗೆದು, ಭಕ್ತರ ಸಂಪದಭ್ಯುದಯಗಳಿಗೆ ಕಾರಣವಾಗುವಂತೆ ಕೋರಿಕೊಳ್ಳುವುದು ಧ್ಯಾನಶ್ಲೋಕದ ಉದ್ದೇಶ.

ಈ ಗ್ರಂಥವನ್ನು ಸಿದ್ಧಪಡಿಸುವಾಗ ನನಗೆ ನೆರವಾದ ಗ್ರಂಥಗಳನ್ನು, ಇಲ್ಲಿ ಬಳಸಿರುವ ಸಂಕೇತಾಕ್ಷರಗಳೊಂದಿಗೆ, ಕಾಣಿಸಿದೆ – (ಪ್ರತ್ಯೇಕ ಪಟ್ಟಿ ನೋಡಿ – ಸಂ.)

ಇವುಗಳಲ್ಲಿ ಶ್ರೀಸೂಕ್ತದ ವ್ಯಾಖ್ಯಾನಗಳು ಹಲವು; ಇವುಗಳಲ್ಲಿ ನನ್ನ ಸಂಗ್ರಹದಲ್ಲಿಲ್ಲದ ಕೆಲವು ಪುಸ್ತಕಗಳನ್ನು (ಕೆಲವು ಅಚ್ಚಾದವು, ಕೆಲವು ಕೈಬರಹದಲ್ಲೇ ಇರುವುವು) ಒದಗಿಸಿಕೊಟ್ಟ ಹಿರಿಯರಾದ ವಿದ್ವಾನ್ ಆಸೂರಿ ಶ್ರೀನಿವಾಸಯ್ಯಂಗಾರ್ಯರು (ಈಗ ಯದುಗಿರಿ ಯತಿರಾಜಮಠದ ಸ್ವಾಮಿಗಳು), ಪಂಡಿತ ಮಾಯವರಂ ವೇಂಕಟೇಶ್ವರ ಶಾಸ್ತ್ರಿಗಳು, ವಿದ್ವಾನ್ ನಂದಗುಡಿ ಕೃಷ್ಣಮೂರ್ತಿಗಳು ಇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮಿತ್ರರಾದ ಡಾ|| ಡಿ. ಸುಂದರರಾಯರು (ಬೆಂಗಳೂರಿನ ಕೃಪಾ ಹೋಮಿಯೋಪತಿ ವೈದ್ಯಸಂಸ್ಥೆಯ ಒಡೆಯರು) ತಮ್ಮಲ್ಲಿದ್ದ ತುಂಬ ಪ್ರಾಚೀನವಾದ ಶ್ರೀಸೂಕ್ತದ ಸಂಸ್ಕರಣವೊಂದನ್ನು ಕೃಪೆಯಿಟ್ಟು ನನಗೆ ಕೊಟ್ಟರು. ಸುಮಾರು ನೂರು ವರ್ಷಗಳ ಹಿಂದೆ ಕಲ್ಲಚ್ಚಿನಲ್ಲಿ ಪ್ರಕಟಗೊಂಡು ಜೀರ್ಣವಾದ ಈ ಪುಸ್ತಕ ತೆಲುಗು ಲಿಪಿಯಲ್ಲಿದೆ; ಎರಡು ವ್ಯಾಖ್ಯಾನಗಳನ್ನೊಳಗೊಂಡಿದೆ (ಪೃಥ್ವೀಧರಭಾಷ್ಯ ಮತ್ತು ಸಾಯಣಭಾಷ್ಯ); ಅಲ್ಲಲ್ಲಿ ವಿವರಣೆಗಳೂ ಕೊಂಚ ಮಟ್ಟಿಗೆ ಇವೆ. ಈ ಪುಸ್ತಕದ ಸ್ವಾರಸ್ಯವಾದ ಭಾಗವೆಂದರೆ ಸೂಕ್ತದ ಪ್ರತಿಯೊಂದು ಮಂತ್ರಕ್ಕೂ ಚಿತ್ರಗಳನ್ನೂ ಮಂತ್ರಗಳನ್ನೂ ಇಲ್ಲಿ ಪಡಿಯಚ್ಚು ಮಾಡಿ ಸೇರಿಸಿದೆ. ಈ ಪುಸ್ತಕವನ್ನು ಒದಗಿಸಿ ಉಪಕಾರ ಮಾಡಿದ ಡಾ|| ಸುಂದರರಾಯರಿಗೆ ಋಣಿಯಾಗಿದ್ದೇನೆ.

ಇದನ್ನು ಪ್ರಕಾಶ ಮಾಡಲು ನೆರವಾದವರು ಶಾರದಾ ಪ್ರಕಾಶನದ ನಿರ್ವಾಹಕರಾದ, ಮಾನ್ಯ ಮಿತ್ರರಾದ ಶ್ರೀಬಸವರಾಜ್ ಅವರು. ಮುದ್ರಣದಲ್ಲಿ ಆಸಕ್ತಿಯನ್ನು ವಹಿಸಿದವರು ಶ್ರೀ ಎಂ. ನಾಗರಾಜ್ ಅವರು. ಇವರಿಬ್ಬರ ಸೌಹಾರ್ದ-ಸೌಜನ್ಯಗಳಿಗೆ ಕೃತಜ್ಞನಾಗಿದ್ದೇನೆ.

– ಸಾ. ಕೃ ರಾಮಚಂದ್ರರಾವ್

1984

ಸಂಕೇತಾಕ್ಷರಗಳ ವಿವರಣೆ

(ಅ.ವೇ.)	ಅಥರ್ವವೇದ
(ಆಂ.ವ್ಯಾ.)	ಆಂಡವಲ್ಲೀ-ವ್ಯಾಖ್ಯಾನ
(ಋ.)	ಋಗ್ವೇದ
(ಚಿ.ವೃ.)	ಚಿದ್ವಿಲಾಸ-ವೃತ್ತಿ
(ಪೃ.ಭಾ.)	ಪೃಥ್ವೀಧರಭಾಷ್ಯ
(ಬೃ.)	ಬೃಹದ್ದೇವತಾ
(ಭಾ.ಭೂ.)	ಭಾಗಧೇಯ ಭೂಷಣಂ
(ಭಾ.ಪು.)	ಭಾಗವತ-ಪುರಾಣ
(ಮ.ಭಾ.)	ಮಹಾಭಾರತ
(ಮ.ಲ.ರ.)	ಮಹಾಲಕ್ಷ್ಮೀರತ್ನಕೋಶ
(ಮಂ.ಕ.)	ಮಂತ್ರಕಲ್ಪಾರ್ಣವ
(ಯಾ.ನಿ.)	ಯಾಸ್ಕರ ನಿರುಕ್ತ
(ಲ.ಯಾ.)	ಲಕ್ಷ್ಮೀಯಾಮಳ
(ವೈ.ವಿ.)	ವೈಖಾನಸವಿದ್ಯಾ
(ಶ.ವೃ.)	ಶತಾನಂದ ವೃತ್ತಿ
(ಶ್ರೀ.ಭಾ.)	ಶ್ರೀಕಂಠಭಾಷ್ಯ
(ಶ್ರೀ.ಗು.ರ.)	ಶ್ರೀಗುಣರತ್ನಕೋಶ
(ಶ್ರೀ.ತ.)	ಶ್ರೀತತ್ತ್ವ
(ಶ್ರೀ.ಟೀ.)	ಶ್ರೀಧರಟೀಕಾ (ಭಾಗವತದ ಮೇಲೆ)
(ಶ್ರೀ.ಸೂ.ಭಾ.)	ಶ್ರೀಸೂಕ್ತಭಾಷ್ಯ (ನಂಜೀಯರದ್ದು),
(ಸಾ.ಭಾ.)	ಸಾಯಣಭಾಷ್ಯ
(ಸಾ.ಸಿ.)	ಸಾರಸ್ವತ ಸಿದ್ಧಿ
(ಸೂ.ಸಂ.)	ಸೂಕ್ತಾರ್ಥ-ಸಂಗ್ರಹ
(ಸೌ.ಸಂ.)	ಸೌಭಾಗ್ಯ ಸಂಜೀವನಂ

ಮಂತ್ರ 1

ಹಿರಣ್ಯವರ್ಣಾಂ ಹರಿಣೀಂ ಸುವರ್ಣರಜತಸ್ರಜಾಂ ।
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥

(ಬಂಗಾರದಂತೆ ಹೊಳೆಯುವ ಮೈಬಣ್ಣದವಳು, ಜಿಂಕೆಯಂತೆ ಚೆಲುವೆ, ಬಂಗಾರ ಬೆಳ್ಳಿಗಳ ಮಾಲೆಯನ್ನು ತೊಟ್ಟವಳು, ಚಂದ್ರನಂತೆ ಕಂಗೊಳಿಸುವವಳು, ಮನಸೆಳೆಯುವ ರೂಪವುಳ್ಳವಳು - ಇಂಥ ಲಕ್ಷ್ಮಿಯನ್ನು ನನ್ನೆಡೆಗೆ ಬರಮಾಡು, ಓ ಜಾತವೇದ!)

ಇದು ಅಗ್ನಿಯನ್ನು ಕುರಿತಾದ ಪ್ರಾರ್ಥನೆ. ವೈದಿಕ ಮನೋಧರ್ಮದಲ್ಲಿ ಯಾವ ದೇವತೆಯನ್ನು ಬರಮಾಡಿಕೊಳ್ಳುವುದೂ ಅಗ್ನಿಯ ಮೂಲಕವೇ; ಆದುದರಿಂದ ಲಕ್ಷ್ಮಿಯೇ ಉದ್ದಿಷ್ಟ ದೇವತೆಯಾದರೂ ಅಗ್ನಿಯನ್ನು ಇಲ್ಲಿ ಬೇಡಲಾಗಿದೆ. ಹಾಗೆಂದೇ ಈ ಮಂತ್ರಕ್ಕೆ 'ಶ್ರೀ' ಮತ್ತು 'ಅಗ್ನಿ' ಇಬ್ಬರು ದೇವತೆಗಳು.

ಜಾತವೇದ – ಅಗ್ನಿಯನ್ನು ಇಲ್ಲಿ 'ಜಾತವೇದ'ನೆಂದು ಕರೆಯಲಾಗಿದೆ. 'ಜಾತವೇದಸ್' ಎನ್ನುವ ಮಾತಿನ ಸಂಬೋಧನ ರೂಪ 'ಜಾತವೇದ' (ಹೇ ಜಾತವೇದ!). ಈ ಮಾತಿಗೆ ವ್ಯಾಖ್ಯಾನಕಾರರು ಹಲವು ವಿವರಣೆಗಳನ್ನೊದಗಿಸಿದ್ದಾರೆ.

(1) ಯಾರಿಗಾಗಿ ವೇದಗಳು ಹುಟ್ಟಿವೆಯೋ ಅವನು ಜಾತವೇದ. 'ವೇದಗಳು ನಿನಗಾಗಿಯೇ ಒದಗಿಬಂದಿವೆ!' ('ವೇದಾಃ ತ್ವದರ್ಥಂ ಜಾತಾಃ', ಮ.ಭಾ. 231,41) ಎಂಬ ಉಲ್ಲೇಖವಿದೆ. ವೇದಮಂತ್ರಗಳೆಲ್ಲ ದೇವತಾಪರವಾದುವು. ದೇವತೆಗಳನ್ನು ಬರಮಾಡಿಕೊಳ್ಳುವುದು, ಹೊಗಳುವುದು, ಅವರ ನೆರವನ್ನು ಕೋರುವುದು, ಇದೇ ವೇದಮಂತ್ರಗಳ ಉದ್ದೇಶ. ದೇವತೆಗಳಿಗೆಲ್ಲ ಮೂರ್ತರೂಪವಿರದು; ಅವರು ನಮ್ಮೆದುರು ಬಂದು ನಿಲ್ಲಲಾರರು; ನಾವು ಅವರನ್ನು ಕಾಣಲಾರೆವು. ಆದುದರಿಂದ ಅಗ್ನಿಯಲ್ಲಿಯೇ ಅವರನ್ನೆಲ್ಲ ಕಲ್ಪಿಸಿಕೊಳ್ಳಬೇಕಾದ ಅಗತ್ಯವಿದೆ. ಎಲ್ಲ ವೇದಮಂತ್ರಗಳೂ ಈ ದೃಷ್ಟಿಯಿಂದ ಅಗ್ನಿಗಾಗಿಯೇ ಮೂಡಿಕೊಂಡು ಬಂದುವು. ಉದ್ದಿಷ್ಟ ದೇವತೆಯ ಹೆಸರು ಹೇಳಿ ಅಗ್ನಿಯಲ್ಲಿಯೇ ಹವಿಸ್ಸನ್ನು ಸಲ್ಲಿಸಬೇಕು. ಅಗ್ನಿಯು ಆಯಾ ದೇವತೆಗಳಿಗೆ ಒಯ್ಯುವನೆಂದು ನಂಬಿಕೆ. ಹಾಗೆಂದೇ ಅಗ್ನಿಯನ್ನು ಯಜ್ಞಕ್ಕೆ ಒಡೆಯನೆಂದು (ಯಜ್ಞೇಶ್ವರನೆಂದು) ಕರೆಯುತ್ತಾರೆ. ಅವನು 'ದೂತ', 'ಹವ್ಯವಾಹನ', 'ಪುರೋಹಿತ'.

(2) ವೇದವೆಂದರೆ ತಿಳಿಯುವುದು ('ವಿದ್' ಎಂಬ ಧಾತುವಿನಿಂದ), ಅರಿವು, ಪ್ರಜ್ಞೆ. ಇದು ಯಾರಲ್ಲಿ ನಿರತಿಶಯವಾಗಿ ಮೂಡಿದೆಯೋ, ಯಾರು ಎಲ್ಲವನ್ನೂ ತಿಳಿದುಕೊಳ್ಳಬಲ್ಲನೋ ಅವನು 'ಜಾತವೇದ'; ಎಂದರೆ ಸರ್ವಜ್ಞ (ಸಾ.ಭಾ.). ಪ್ರಾಣಿಗಳ ಹೃದಯದಲ್ಲಿ

ಗಜಲಕ್ಷ್ಮೀ





ಗಜಲಕ್ಷ್ಮೀ ಯಂತ್ರ

ಅಂತರ್ಯಾಮಿಯಾಗಿ ಅಡಗಿರುವ ತತ್ತ್ವಕ್ಕೆ ಅಗ್ನಿಯೆಂದೇ ವ್ಯವಹಾರ, ಇದು ಎಲ್ಲ ಅರಿವಿಗೂ ಆಸರೆ. ಇದನ್ನು ಸಮರ್ಥಿಸುವ ಮಾತು ಹೀಗಿದೆ – 'ಓಂ ಪರೋ ರಜಃ ಸವಿತುರ್ಜಾತವೇದೋ ದೇವಸ್ಯ ಭರ್ಗೋ ಮನಸೇದಂ ಜಜಾನ' (ಮ.ಭಾ. 5.7.14).

(3) ವೇದವೆನ್ನುವ ಮಾತಿಗೆ ಶಾಸ್ತ್ರವೆಂದೂ ಅರ್ಥವಿದೆ; ವಿಧಿ ನಿಷೇಧಗಳನ್ನು ವೇದಮಂತ್ರಗಳು ಸೂಚಿಸುವುದರಿಂದ ಶಾಸ್ತ್ರವೆಂದರೆ ಶಾಸನ ಮಾಡುವುದು, ಅಪ್ಪಣೆ ಮಾಡುವುದು; ವೇದವನ್ನು 'ಪ್ರಭುಸಮ್ಮಿತೆ'ಯೆಂದು ಕರೆಯುವುದು ಈ ಕಾರಣದಿಂದಲೇ. ಎಲ್ಲ ಶಾಸನಗಳಿಗೂ ವೇದವೇ ಮೂಲ; ವೇದವಿರುವುದು ಯಜ್ಞದಲ್ಲಿ; ಯಜ್ಞವಿರುವುದು ಅಗ್ನಿಯಿಂದ. ಹೀಗೆ ಅಗ್ನಿ ಯಜ್ಞ ಪುರುಷನಾಗಿ 'ಶಾಸ್ತ್ರಯೋನಿ' (ಶ.ವೃ.) ಅವನಿಂದ ವೇದ ಪ್ರತೀತಿಯನ್ನು ಪಡೆಯುತ್ತದೆ – ಅವನು ಜಾತವೇದ.

ಲಕ್ಷ್ಮಿಯೆಂದರೆ ಶೋಭೆ, ಸಂಪತ್ತು, ಚೆಲುವು. ಇವೆಲ್ಲವನ್ನೂ ಕವಿ ಹೃದಯದಿಂದ ತಾವರೆ ಹೂವಿನಲ್ಲಿ ಕಂಡುಕೊಂಡು ಲಕ್ಷ್ಮಿಯೆಂದರೆ ಕಮಲ ಎಂದೂ ಅರ್ಥಮಾಡುತ್ತಾರೆ. (ಮ.ಲ.ರ.). ಲಕ್ಷ್ಮಿಗೂ ಕಮಲಕ್ಕೂ ಸಂಬಂಧ ಪ್ರಾಚೀನವಾದುದು. ಅವಳು ಮೈವೆತ್ತಿ ಬಂದಾಗ 'ಅಮಲ ಕಮಲ ಸಂಸ್ಥೆ'; ಕೈಗಳಲ್ಲಿ ಕಮಲಗಳು; ಮೈಬಣ್ಣ ಕೆಂದಾವರೆಯದು. ಅವಳ ಪೂಜೆಯಲ್ಲಿ ಕಮಲದ ಹೂಗಳು ಶ್ರೇಷ್ಠವಾದುವು. ಕಮಲವು ಮಂಡಲಗಳಲ್ಲಿ ಮುಖ್ಯವಾದುದೂ ಹೌದು. ವೃತ್ತಾಕಾರದ ಯಂತ್ರಗಳನ್ನು ಕಮಲದ ಆಕಾರದಲ್ಲಿಯೇ ಕಾಣಿಸುವುದಿದೆ. ಮನುಷ್ಯನ ಷಟ್‌ಚಕ್ರಗಳಲ್ಲಿ ಕೂಡ ಕಮಲದ ದಳಗಳ ವ್ಯವಹಾರವಿದೆ.

ಲಕ್ಷ್ಮಿ ಎನ್ನುವ ಮಾತನ್ನು 'ಲ' ಎಂಬ ಧಾತುವಿನಿಂದಲೂ 'ಕ್ಷಿಪ್' ಎಂಬ ಧಾತುವಿನಿಂದಲೂ ನಿಷ್ಪತ್ತಿ ಮಾಡುವುದು ಉಂಟು. ಮೊದಲನೆಯ ಧಾತುವಿಗೆ ನೀಡು, ಕೊಡು ಎಂದರ್ಥವಾಗುತ್ತದೆ. ('ದಾನೇ'); ಎರಡನೆಯ ಧಾತುವಿಗೆ ಪ್ರೇರಿಸು, ನಿಯೋಜಿಸು ('ಪ್ರೇರಣೆ') ಎಂದರ್ಥವಾಗುತ್ತದೆ. ಹೀಗೆ ಲಕ್ಷ್ಮಿಯೆಂದರೆ ನಮಗೆ ಸಂಪತ್ತನ್ನು ನೀಡುವವಳು, ನಮ್ಮನ್ನು ಪುಣ್ಯದ ಕೆಲಸಗಳಲ್ಲಿ ಪ್ರೇರಿಸುವವಳು (ಶ್ರೀ.ಗು.ರ.)

ಪುರಾಣಗಳಲ್ಲಿ ಲಕ್ಷ್ಮಿಯು ಅಮೃತಮಂಥನ ಕಾಲದಲ್ಲಿ ಕ್ಷೀರಸಮುದ್ರದಿಂದ ಹುಟ್ಟಿದವಳೆಂಬ ಕಥೆಯಿದೆ. ಸಮುದ್ರದಿಂದ ಹೊರಬಂದೊಡನೆ ವಿಷ್ಣುವಿನ ವಕ್ಷಃಸ್ಥಳದಲ್ಲಿ ಸೇರಿಕೊಂಡುಬಿಟ್ಟಳೆಂದೂ, ಇಂದ್ರನೇ ಮುಂತಾಗಿ ದೇವತೆಗಳು ವಿಜಯಕ್ಕಾಗಿ, ಅಮೃತಲಾಭಕ್ಕಾಗಿ ಅವಳ ಮೊರೆಹೊಕ್ಕರೆಂದೂ, ಆಕೆಯ ವರದಿಂದ ಅವರಿಗೆ ಜಯ, ಸಮೃದ್ಧಿ, ಸಾಮರ್ಥ್ಯಗಳು ದೊರೆತುವೆಂದೂ ಒಕ್ಕಣೆಯಿದೆ. ಆದುದರಿಂದ ಮನುಷ್ಯರೂ ಜಯ, ಲಾಭ, ಧನ, ಧಾನ್ಯ, ಜ್ಞಾನಗಳಿಗಾಗಿ ಲಕ್ಷ್ಮಿಯನ್ನು ಒಲಿಸಿಕೊಳ್ಳಲು ಯತ್ನಿಸುತ್ತಾರೆ. ದೇವೀಪುರಾಣದ ಪ್ರಕಾರ, ಲಕ್ಷ್ಮಿಯು ಲಲಿತೆಯನ್ನೂ ಶಾರದೆಯನ್ನೂ ಒಳಗೊಳ್ಳುತ್ತಾಳೆ; ಸಮಸ್ತ ಪುರುಷಾರ್ಥಗಳನ್ನೂ ಈಡೇರಿಸುವ ಮಹಾಶಕ್ತಿ ಅವಳು.

ಮ ಆವಹ – 'ಮ' ಎಂದರೆ ಇಲ್ಲಿ 'ನನಗೆ' ('ಮೇ', 'ಮಹ್ಯಂ'), 'ನನಗಾಗಿ' ('ಮದರ್ಥಂ'), 'ನನ್ನ ಎಲ್ಲ ಬಯಕೆಗಳ ತೀರಿಕೆಗಾಗಿ' ('ಮಮ ಸರ್ವಾಭೀಷ್ಟಸಾಧನಾಯ', ಪೃ.ಭಾ.) ಎಂದರ್ಥ.

'ಆವಹ' ಎಂದರೆ 'ಕರೆ ಕಳುಹಿಸು' '('ಆಕಾರಯ', ಶ್ರೀ. ಭಾ.), 'ಕಳುಹಿಸು' ('ಪ್ರೇಷಯ', ಪೃ.ಭಾ.). ಅಗ್ನಿಯನ್ನು ಕುರಿತ ಬೇಡಿಕೆಯಾದರೂ, ಉದ್ದಿಷ್ಟದೇವತೆ ಲಕ್ಷ್ಮಿಯಾದುದರಿಂದ ಲಕ್ಷ್ಮಿಯನ್ನು ಅಗ್ನಿಯು ಕರೆತರುವುದು ಮುಖ್ಯವಾದ ವಿವರ. ಲಕ್ಷ್ಮಿಯನ್ನು ಕರೆತರುವ (ಅಥವಾ ಕಳುಹಿಸುವ) ಸಾಮರ್ಥ್ಯ, ಅಧಿಕಾರ ಅಗ್ನಿಗಿರುವುದು. ಅವನು ಲಕ್ಷ್ಮಿಯ ಒಡೆಯನೆಂಬ ಕಾರಣದಿಂದ, ಲಕ್ಷ್ಮಿಯನ್ನು ಉಳ್ಳವನೆಂಬ ಕಾರಣದಿಂದ. ಅಗ್ನಿನಾಮಕನಾದ ವಿಷ್ಣುವಿಗೆ ಲಕ್ಷ್ಮಿ 'ನಿತ್ಯಾನಪಾಯಿನೀ'; ಎಂದಿಗೂ ಎಡೆಬಿಡದೆ ಜೊತೆಗಿರುವವಳು.

ಅಗ್ನಿಯು ದೇವತೆಗಳಿಗೆ ಪುರೋಹಿತನಿದ್ದಂತೆ. ಯಾವ ದೇವತೆಯು ಬರಬೇಕಾದರೂ ಅಗ್ನಿಯನ್ನು ಮುಂದೆ ಮಾಡಿಕೊಂಡೇ ಬರಬೇಕು. ಆದ್ದರಿಂದ ಅಗ್ನಿಯೇ ಯಾವ ದೇವತೆಯನ್ನಾದರೂ ಕರೆತರಬೇಕು. ('ದೇವಹೋತೃತ್ವಾತ್ ಆವಾಹನಂ ತದಧೀನಂ ಇತಿ ಭಾವಃ', ಸಾ.ಭಾ.) ಯಾವ ದೇವತೆಯಾಗಲಿ ನಮ್ಮ ಕಡೆಗೆ ಕಣ್ಣು ಹೊರಳಿಸಿ ನೋಡಬೇಕೆಂದರೆ ಅಗ್ನಿ ನಮ್ಮ ಕಡೆ ಆ ದೇವತೆಯ ಗಮನವನ್ನು ಸೆಳೆಯಬೇಕು. ಹೀಗೆ 'ಆವಹ' ಎನ್ನುವುದಕ್ಕೆ 'ಆಕರ್ಷಯ' ಎಂದು ಅರ್ಥಮಾಡುವುದೂ ಉಂಟು (ಶ.ವೃ.).

(4) ವೇದವೆಂದರೆ ಕರ್ಮಗಳನ್ನು ವಿಧಿಸುವ ಶಾಸ್ತ್ರ; ಕರ್ಮವನ್ನು ವಿಧಿಸುವಾಗ ಕರ್ಮದ ಫಲವನ್ನೂ ಕಾಣಿಸಬೇಕು, ಕರ್ಮದ ಫಲಗಳನ್ನು ನೀಡುವ ದೇವತೆಯನ್ನೂ ತೋರಿಸಬೇಕು. ಮನುಷ್ಯರು ಕರ್ಮ ಮಾಡಲು ಒಡಂಬಡುವುದು ಫಲದ ಆಕರ್ಷಣೆಯಿಂದಲೇ. ಫಲವನ್ನು 'ಧನ'ವೆಂದು ಬಣ್ಣಿಸಿದ್ದಾರೆ. ಕರ್ಮದ ಫಲಗಳನ್ನು ಒದಗಿಸುವ ಪ್ರತ್ಯಕ್ಷದೇವತೆ ಅಗ್ನಿಯೇ ಎಂದು ಅವನು 'ಜಾತವೇದ' ('ಜಾತಂ ವೇದೋ ಧನಂ, ಕರ್ಮಫಲಂ, ಯಸ್ಮಾತ್', ಶ್ರೀ.ಟಿ.)

ಅಗ್ನಿಯನ್ನು ಜಾತವೇದನೆಂದು ಕರೆದಿರುವುದಕ್ಕೆ ಇವೆಲ್ಲ ವಿವರಣೆಗಳು. ಯಜ್ಞದ ಸಂದರ್ಭದಲ್ಲಿ ಅಗ್ನಿಯೇ ಎಲ್ಲ ದೇವತೆಗಳ ಪ್ರತಿನಿಧಿ; ಅವನು ವ್ಯಕ್ತದೇವತೆ. ಅವನಿಗೆ ರೂಪವಿರುವುದು ಮಾತ್ರವಲ್ಲ, ಅವನಿಗೆ ಬೆಳವಣಿಗೆಯೂ ಉಂಟು, ಆಹಾರದ ಅಗತ್ಯವೂ ಉಂಟು. ಆದುದರಿಂದ ಅವನೇ ಯಜ್ಞದ ಮೂರ್ತರೂಪ ಎಂಬರ್ಥದಲ್ಲಿ 'ಯಜ್ಞ ಪುರುಷ'. ಅವನ ಶೋಭೆ, ಕಾಂತಿ, ವೈಭವ, ಸಂಪತ್ತು 'ಶ್ರೀ' ಎನಿಸಿಕೊಳ್ಳುತ್ತದೆ. ಯಜ್ಞವನ್ನು ವಿಷ್ಣುವೆಂದು ವೈದಿಕ ಸಾಹಿತ್ಯವೇ ಕರೆದಿದೆ ('ಯಜ್ಞೋ ವೈ ವಿಷ್ಣುಃ' ತೈ.ಸಂ. 1,7,4). ವಿಷ್ಣುವಿನ ಸಂಪತ್ತು ಲಕ್ಷ್ಮಿ. ಹೀಗೆ ಅಗ್ನಿಯನ್ನು ವಿಷ್ಣುವೆಂದೂ, ಅವನ 'ಶ್ರೀ'ಯನ್ನು ಲಕ್ಷ್ಮಿಯೆಂದೂ ಹೇಳಿದ್ದಾರೆ. ಲಕ್ಷ್ಮಿಯನ್ನು ಬರಮಾಡಿಕೊಳ್ಳಲು ವಿಷ್ಣುವಿನಲ್ಲಿ ಬೇಡಿಕೆ ಸಲ್ಲಿಸಲಾಗಿದೆ. (ಶ್ರೀ.ಗು.ರ.)

ಇದೇ ರೀತಿ, ಶೈವ ಸಂಪ್ರದಾಯದಲ್ಲಿ ಯಜ್ಞ ಪುರುಷನಾದ ಅಗ್ನಿಯನ್ನು ಶಿವನೆಂದು ನಿರ್ದೇಶಿಸಿದ್ದಾರೆ ('ಅಗ್ನಿಸ್ತು ರುದ್ರ ಏವ', ಶ್ರೀ.ಭಾ.). ಅವನ ಸಂಪತ್ತು, ಅವನ ಮಡದಿಯೆಂದರೆ ಪಾರ್ವತಿ ('ರುದ್ರೋ ಹಿ ಪುರುಷಃ, ತಸ್ಯ ಪತ್ನೀ ಭಗವತ್ಯುಮಾ ಏವ ಲಕ್ಷ್ಮೀಃ', ಅಲ್ಲಿಯೇ).

ವೇದವಾಙ್ಮಯದಲ್ಲಿ ಉಲ್ಲೇಖಗೊಳ್ಳುವ ದೇವತೆಗಳನ್ನೆಲ್ಲ ಮೂರು ವರ್ಗಗಳಲ್ಲಿ ವಿಂಗಡಿಸುವುದು ಸಂಪ್ರದಾಯ (ಯಾ.ನಿ. 7,5,1 ಮತ್ತು 2): (1) ಭೂಮಿಯ ಮೇಲಿನ ದೇವತೆಗಳು (ಪೃಥ್ವೀ ದೇವತೆಗಳು); (2) ಆಕಾಶದ ಅಥವಾ ಮೇಲಿನ ಬೆಳಗುವ ಲೋಕದ ದೇವತೆಗಳು (ದ್ಯುಃಸ್ಥಾನ ದೇವತೆಗಳು); ಮತ್ತು (3) ಭೂಮಿಗೂ ಈ ಮೇಲಿನ ಲೋಕಕ್ಕೂ ನಡುವಣ ಲೋಕದ ದೇವತೆಗಳು (ಅಂತರಿಕ್ಷ ದೇವತೆಗಳು). ವಾಸ್ತವವಾಗಿ ಒಂದೇ ದೇವತೆಯ ಬೇರೆ ಬೇರೆ ಹಿರಿಮೆಗಳು ಇವೆಲ್ಲ, ಮಹಾತ್ಮ್ಯಗಳು ಎಂಬ ಒಕ್ಕಣೆ ಇದೆ (ಬೃ. 1,69 ಮತ್ತು 70). ಈ ದೇವತೆಗಳಲ್ಲಿ ಅಗ್ನಿಯೇ ಪ್ರಮುಖನಾದವನು; ಪೃಥ್ವೀ ದೇವತೆಯಾದರೂ, ಅಂತರಿಕ್ಷದ ವಾಯುವೂ, ದ್ಯುಃಸ್ಥಾನದ ಸೂರ್ಯನೂ ಅವನೇ.

ಲಕ್ಷ್ಮೀಂ — 'ಲಕ್ಷ್ಮೀ' ಎಂದರೆ 'ಲಕ್ಷ್ಮ'ವನ್ನುಳ್ಳವಳು. 'ಲಕ್ಷ್ಮ'ವೆಂದರೆ ಚಿಹ್ನೆ, ಗುರುತು, ಸೂಚನೆ, ಸಂಕೇತ, ಲಾಂಛನ ಯಾವ ಚಿಹ್ನೆಗಳನ್ನು ಮನುಷ್ಯರು ಸುಖದ ಸೂಚನೆಯೆಂದು ಬಯಸುವರೋ ಅದು ಲಕ್ಷ್ಮಿಯೆಂದು ವಿವರಣೆಯಿದೆ ('ಲಕ್ಷ್ಮೀರ್ಲಕ್ಷ್ಯ-ಲಕ್ಷಣಾದಿತಿ', ಯಾ.ನಿ.). 'ಲಷ್' ಎಂಬ ಧಾತುವಿನಿಂದ 'ಲಷತಿ' (ಪಡೆದುಕೊಳ್ಳುವುದು, 'ಲಾಭಾತ್'); 'ಲಕ್ಷ್' ಎಂದರೆ ಕಾಣುವುದು, ಗುರುತಿಸುವುದು ಎಂಬರ್ಥದಲ್ಲಿ 'ಲಕ್ಷತಿ' ('ಲಕ್ಷಣಾತ್'); 'ಲಪ್ಸ್' ಎಂದರೆ ಪಡೆದುಕೊಳ್ಳುವುದು ('ಲಪ್ಸ್ಯಮಾನಾತ್') ಎಂಬರ್ಥಗಳಲ್ಲಿಯೂ ಲಕ್ಷ್ಮಿಯೆಂಬ ಮಾತನ್ನು ವಿವರಿಸುತ್ತಾರೆ.

ಹಿರಣ್ಯವರ್ಣಾಂ — ಹಿರಣ್ಯವೆಂದರೆ ಬಂಗಾರ. ಆ ಮಾತಿಗೆ ಮೂಲದಲ್ಲಿ 'ಹರ್ಯ' ಎಂದು ಧಾತುವಿದ್ದು ಮುಂದೆ ಸಾಗುವುದು, ಹೊಳೆಯುವುದು, ಎಂಬರ್ಥಗಳಿವೆ ('ಗತಿ ಕಾಂತ್ಯೋಃ'). ಹಿರಣ್ಯವೆಂದರೆ ಹೊಳೆಯುವುದು, ಬೆಳಗುವುದು ('ಹರ್ಯತಿ ದೀಪ್ಯತೇ'). ಇದಕ್ಕೆ ವೈದಿಕ ಸಾಹಿತ್ಯದಲ್ಲಿ ಹೇಮ, ಚಂದ್ರ, ರುಕ್ಮ, ಭರ್ಮ, ಅಮೃತ ಎಂದೆಲ್ಲ ಪರ್ಯಾಯ ಪದಗಳಿವೆ. ಇವಕ್ಕೆಲ್ಲ ತೇಜಸ್ಸಿನಿಂದ ಕಂಗೊಳಿಸುವುದು ಎಂದೇ ಅರ್ಥ. ಈ ಪದಕ್ಕೆ 'ಹೃ' (ಎಂದರೆ ಒಯ್ಯುವುದು, ಸೆಳೆಯುವುದು) ಎಂಬ ಧಾತುವನ್ನೂ ಕಾಣಿಸುತ್ತಾರೆ. ಬಂಗಾರವು ತನ್ನ ಹೊಳಪಿನಿಂದಲೂ ಮೌಲ್ಯದಿಂದಲೂ ಮನಸ್ಸನ್ನು ಸೆಳೆದುಕೊಂಡು ಹೋಗುತ್ತದೆ, ಎಂದರೆ ಆಕರ್ಷಕವಾಗಿರುತ್ತದೆ ('ಹರತಿ ಮನಃ').

ಎಲ್ಲ ಧಾತುಗಳಲ್ಲಿ ಶ್ರೇಷ್ಠವಾದುದು ಬಂಗಾರ. ಅದರಂತೆ ಕಂಗೊಳಿಸಬಲ್ಲ ಧಾತು ಮತ್ತೊಂದಿಲ್ಲ. ಉಳಿದ ಧಾತುಗಳೆಲ್ಲ 'ಪಾರ್ಥಿವ'ವೆಂಬ ವರ್ಗಕ್ಕೆ ಸೇರಿದುವಾದರೆ, ಬಂಗಾರವು 'ತೈಜಸ' (ಎಂದರೆ ತೇಜಸ್ಸಿನಿಂದ ಕೂಡಿದುದು, ಅಗ್ನಿ ಸಂಬಂಧಿಯಾದುದು). ಹಾಗೆಂದೇ ಅದರ

ಮೌಲ್ಯ ಉಳಿದೆಲ್ಲ ಧಾತುಗಳಿಗಿಂತ ಮಿಗಿಲಾದುದು. ದೇವತೆಗಳಲ್ಲೆಲ್ಲ ಅತ್ಯುತ್ತಮಳೆಂಬ ಸೂಚನೆ ಇಲ್ಲಿ ಕಾಣುತ್ತದೆ. ಲಕ್ಷ್ಮಿಯು ಬಂಗಾರದಂತೆ ಬೆಳಗುವವಳು, ಕಾಂತಿಯುಳ್ಳವಳು ಎಂಬರ್ಥದಲ್ಲಿ ಅವಳನ್ನು 'ಹಿರಣ್ಯವರ್ಣೆ', 'ಕನಕಪ್ರಭೆ' ಎಂದು ಬಣ್ಣಿಸುತ್ತಾರೆ.

ಹಿರಣ್ಯವೆನ್ನುವ ಮಾತನ್ನು ವಿಷ್ಣುವಿಗೂ ಬಳಸುವುದುಂಟು; ಸೂರ್ಯನ ಹೊಂಬಣ್ಣ ಅವನದ್ದೆಂಬುವ ಅರ್ಥದಲ್ಲಿ. ವರ್ಣವೆನ್ನುವ ಮಾತಿಗೇ ಶಕ್ತಿಯೆನ್ನುವ ಅರ್ಥವೂ ಇದೆ. ವಿಷ್ಣುವಿನ ವರ್ಣವೆಂದರೆ ವೈಷ್ಣವೀಶಕ್ತಿ ('ಹಿರಣ್ಯಂ ವಿಷ್ಣುರಾಖ್ಯಾತಃ, ತಸ್ಯ ವರ್ಣಸ್ತು ವೈಷ್ಣವಂ', ಶ.ವೃ.). ಅಗ್ನಿಯೂ ಹೊಂಬಣ್ಣದಿಂದ ಬೆಳಗುವ ದೇವತೆಯೇ; ಅಗ್ನಿಯ ಶಕ್ತಿಯಾಗಿ 'ಶ್ರೀ'ಯನ್ನು ಇಲ್ಲಿ ಕರೆದಿದೆ.

ಹಿರಣ್ಯವರ್ಣಾ, ಸುವರ್ಣ ಮೊದಲಾದ ವಿಶೇಷಣಗಳು ಹೊಳೆಯುವವಳು, ಬೆಳಗುವವಳು ಎಂಬರ್ಥದಲ್ಲಿ ಬಂದಿವೆ. ದೇವಿಯ ಹೊಳಪನ್ನು ಕನಸಿನಲ್ಲಿ ಕಾಣುವ ದೃಶ್ಯವೆಂದು ವರ್ಣಿಸಿರುವುದಿದೆ ('ರುಕ್ಮಾಭಾಂ, ಸ್ವಪ್ನ ಧೀಗಮ್ಯಾಂ' ಶ್ರೀ.ತ.).

ಹರಿಣೀಂ – ಲೌಕಿಕ ಸಂಸ್ಕೃತದಲ್ಲಿ ಹರಿಣಿಯೆಂದರೆ ಹೆಣ್ಣು ಜಿಂಕೆ. ಮಾತಿನ ಮೂಲದಲ್ಲಿ ಬೆಳಗುವ, ಮನಸ್ಸನ್ನು ಸೆಳೆಯುವ ಸೂಚನೆಯೇ ಇದೆ. ಹೆಣ್ಣು ಜಿಂಕೆಯ ಮೈಬಣ್ಣ ಆಕರ್ಷಕವಾಗಿರುವುದರಿಂದ, ಕಂಗೊಳಿಸುವುದರಿಂದ ಅದನ್ನು 'ಹರಿಣಿ'ಯೆಂದರು. ಪೌರಾಣಿಕ ಕಥೆಗಳಲ್ಲಿ ಒಮ್ಮೆ ಲಕ್ಷ್ಮಿಯು ಜಿಂಕೆಯ ರೂಪವನ್ನು ಧರಿಸಿ ಕಾಡಿನಲ್ಲಿ ಅಲೆದಾಡುತ್ತಿದ್ದ ವೃತ್ತಾಂತ ಬರುತ್ತದೆ. ('ಶ್ರೀಃ ಧೃತ್ವಾ ಹರಿಣೀರೂಪಂ ಅರಣ್ಯೇ ಸಂಚಚಾರ ಹ', ಸಾ.ಭಾ.). ಜಿಂಕೆಯೆಂದರೆ ಆಕರ್ಷಕವೂ ಹೌದು. ಆದರೆ ಹಿಡಿತಕ್ಕೆ ಸಿಗುವುದು ಕಷ್ಟವೆಂಬುದೂ ಹೌದು. ಜಿಂಕೆಯ ವೇಗ ಮಿಂಚಿನ ವೇಗ. ಲಕ್ಷ್ಮಿಯು ಅಷ್ಟೇ ಚಂಚಲಳಾದವಳು ಎಂಬ ಧ್ವನಿ.

ವೈವರ್ತ ಪುರಾಣದಲ್ಲಿ (ಶ್ರೀ.ಭಾ.ದಲ್ಲಿ ಉದ್ಧೃತ) ಕಥೆಯೊಂದಿದೆ. ದಕ್ಷನ ಯಾಗ ನಡೆದಾಗ ರುದ್ರ-ಶಿವನು ಅದನ್ನು ಧ್ವಂಸ ಮಾಡಿದ ಸಂದರ್ಭ. ಶಿವನ ಕೋಪಕ್ಕೆ ಬೆದರಿ ಯಜ್ಞಪುರುಷನು ('ಯಜ್ಞೋಗ್ನಿಃ') ಜಿಂಕೆಯ ರೂಪವನ್ನು ಧರಿಸಿ ಓಡತೊಡಗಿದನಂತೆ. ಆದರೆ ರುದ್ರನು ಅದನ್ನು ಹಿಡಿದು ತನ್ನ ಕೈಯಲ್ಲಿ ಧರಿಸಿದನಂತೆ. ಯಜ್ಞವೆಂದರೆ ವಿಷ್ಣು; ಯಜ್ಞಪುರುಷನು ಧರಿಸಿದ ಜಿಂಕೆಯ ರೂಪ ವೈಷ್ಣವೀಶಕ್ತಿ ('ಜಗ್ರಾಹ ವೈಷ್ಣವೀಂ').

'ಹರಿಣ'ವೆಂದರೆ ವಿಷ್ಣು (ಮ.ಭಾ. 13,17,119); ಅದರ ಸ್ತ್ರೀಲಿಂಗ ರೂಪ 'ಹರಿಣೆ', ಎಂದರೆ ಲಕ್ಷ್ಮಿ. ಹರಿಯಲ್ಲಿ (ಎಂದರೆ ವಿಷ್ಣುವಿನಲ್ಲಿ) ಎಡೆಬಿಡದೆ ವಾಸಮಾಡುವುದರಿಂದ ಅವಳು ಹರಿಣಿ ('ಹರಿ-ನಿ') ('ಶ್ರೀ.ಗು.ರ.'), ವೈಷ್ಣವಿಯೇ.

'ಹರಿಣಿ'ಯೆನ್ನುವ ಮಾತಿಗೆ ಹಳದಿ ಬಣ್ಣವೆಂದೂ ಅರ್ಥವಿದೆ ('ಹರಿಮ-ವರ್ಣ', ಪ್ರ.ಭಾ.). ಹಳದಿ ಬಣ್ಣ ಬೆಳಗುವಂತೆ ಬೆಳಗುವವಳು ಎಂಬರ್ಥದಲ್ಲಿ ದೇವಿಯನ್ನು 'ಹರಿಣಿ' ಅಥವಾ 'ಹರಿದ್ರಾಭಾ' ಎಂದು ಬಣ್ಣಿಸುತ್ತಾರೆ. ಅಷ್ಟು ಮಾತ್ರವಲ್ಲ, ದೇವೀಪೂಜೆಯಲ್ಲಿ ಹಳದಿ ಅಥವಾ

ಅರಿಶಿನದ ಕೊಂಬಿಗೆ ಪ್ರಾಶಸ್ತ್ಯ ಹೆಚ್ಚು. ಅರಿಶಿನದ ಪುಡಿಯಿಂದ ದೇವಿಯ ಪುತ್ಥಳಿಯನ್ನು ಮಾಡಿ ಪೂಜಿಸುವ ವ್ರತವೊಂದಿದೆ; ಹರಿದ್ರಾಗೌರೀವ್ರತವೆಂದು ಅದರ ಹೆಸರು. ಹೀಗೆ ಮಾಡಿದ ದೇವೀಮೂರ್ತಿಯನ್ನು ಹರಿಣಿಯೆಂದು ಕಲ್ಪಗ್ರಂಥಗಳು ಕರೆದಿವೆ ('ಹರಿಣೀಂ ಪೂಜಯೇದ್ ದುರ್ಗಾಂ ಹರಿದ್ರಾಚೂರ್ಣನಿರ್ಮಿತಾಂ', ಶ್ರೀ.ಭಾ.ದಲ್ಲಿ ಉದ್ಧೃತ).

ಸುವರ್ಣರಜತಸ್ರಜಾಂ – 'ಸ್ರಜ' ಎಂದರೆ ಮಾಲೆ. ಲಕ್ಷ್ಮಿಯು ಕೊರಳಲ್ಲಿ ತೊಟ್ಟ ಮಾಲೆ ಕಮಲದ ಹೂಗಳದ್ದು. 'ಸುವರ್ಣ'ವೆಂದರೆ ಬಂಗಾರ; 'ರಜತ'ವೆಂದರೆ ಬೆಳ್ಳಿ. ನಿಸರ್ಗದಲ್ಲೇ ಕೆಂದಾವರೆಯಲ್ಲಿ ನಸುಗೆಂಪಿನಿಂದ ಕೂಡಿದ ಹಳದಿ ಮತ್ತು ಬಿಳುಪು ಇರುತ್ತದೆ. ಇಲ್ಲಿ ಸೂಚಿತವಾಗಿರುವುದು ಇದೇ. ಆದರೆ ಬಂಗಾರದಿಂದಲೂ ಬೆಳ್ಳಿಯಿಂದಲೂ ಮಾಡಿದ ಕಮಲಪುಷ್ಪಗಳನ್ನು ಪೋಣಿಸಿದ ಮಾಲೆಯನ್ನು ಧರಿಸಿದವಳು ಎಂದೂ ಅಗಬಹುದು ('ಹೇಮ-ರೌಪ್ಯಮಯ ಕಮಲಮಾಲಾಂ', ಪೃ.ಭಾ.).

ಮಾತೃದೇವತೆಯ ಕೊರಳಲ್ಲಿ ಇಳಿಬಿದ್ದ ಮಾಲೆ ಪ್ರಕೃತಿಯ ಪ್ರಸಾರಗಳು. ಆಕರ್ಷಕವಾದ ಲೌಕಿಕ ಭೋಗಗಳು, 'ಸುವರ್ಣ', ಬೆಳಗುವ ಲೌಕಿಕ ಸಾಮಗ್ರಿಗಳು 'ರಜತ'; ದೇವಿಯು ಮೂಲಪ್ರಕೃತಿ ಅಥವಾ ಆದ್ಯಾಶಕ್ತಿ. ಇಡೀ ಜಗತ್ತು ಅವಳ ಲೀಲೆ ಅಥವಾ ಅಲಂಕರಣ.

ಚಂದ್ರಾಂ – ಚಂದ್ರನೆನ್ನುವ ಮಾತು 'ಚದಿ' ಎಂಬ ಧಾತುವಿನಿಂದ ಆದುದು; ಸಂತೋಷಪಡಿಸುವುದು ('ಆಹ್ಲಾದನೇ') ಎಂದರ್ಥ. ಬೆಳಗುವುದು ('ದೀಪ್ಯತೇ ವಾ') ಎಂಬರ್ಥವೂ ಇದೆ. ('ಪ್ರಕಾಶಿಕಂ ವಾ' ಶ್ರೀ.ಭಾ.). ಯಾಸ್ಕರ ನಿರುಕ್ತದಲ್ಲಿ 'ಚಂದ್ರಃ ಚಂದತೇ' (ಕಾಂತಿಕರ್ಮಣಃ) ಎಂದು ಹೇಳಿ ಕಂಗೊಳಿಸುವ ಗುಣವೇ ಚಂದ್ರನಲ್ಲಿ ಮುಖ್ಯವಾದ ವಿವರವೆಂದಿದೆ. ಲಕ್ಷ್ಮಿಯು ಚಂದ್ರನಂತೆ ಕಂಗೊಳಿಸುವವಳು ('ಚಂದ್ರವತ್ ಪ್ರಕಾಶಮಾನಾಂ' ಸಾ.ಭಾ.); ಚಂದ್ರನು ಎಲ್ಲ ಜನರನ್ನೂ ಸಂತೋಷಗೊಳಿಸುವಂತೆ ಲಕ್ಷ್ಮಿಯೂ ಸಂತೋಷಪಡಿಸುವವಳು ('ಸಕಲಜನಾಹ್ಲಾದ ಕಾರಿಣೀಂ' ಪೃ.ಭಾ.).

ಯಾಸ್ಕರ ನಿರುಕ್ತದಲ್ಲೂ (6,10) ರಾಜನಿರ್ಘಂಟದಲ್ಲೂ ಚಂದ್ರವೆನ್ನುವುದು ಬಂಗಾರದ ಹೆಸರುಗಳಲ್ಲಿ ಒಂದೆಂದು ಸೂಚನೆಯಿದೆ ('ಹಿರಣ್ಯನಾಮ').

ಪೂರ್ಣಚಂದ್ರನಿಗೂ ದೇವೀಪೂಜೆಗೂ ನೆಂಟಿರುವುದನ್ನೂ ಗಮನಿಸಬಹುದು. ಚಂದ್ರನ ಹದಿನೈದು ಕಲೆಗಳು ದೇವಿಯ ಪಂಚದಶ ಪ್ರಕಾರಗಳು; ತಿಥಿನಿತ್ಯೆಯರ ಪ್ರಸ್ತಾಪವೂ ಇದೆ. ಶ್ರೀವಿದ್ಯೆಯನ್ನು ಚಾಂದ್ರವಿದ್ಯೆಯೆಂದೇ ಕರೆಯುತ್ತಾರೆ; ಅಲ್ಲಿ ದೇವಿಯನ್ನು ಪಂಚದಶಿ ಮಂತ್ರದಿಂದಲೇ ಪೂಜೆ ಮಾಡುವ ಸಂಪ್ರದಾಯವಿದೆ. ಲಲಿತೆಯನ್ನು ಚಂದ್ರಬಿಂಬದಲ್ಲೇ ಆವಾಹನೆ ಮಾಡಿಕೊಳ್ಳುವ ವಿವರವೂ ಇದೆ ('ಪೌರ್ಣಮಾಸ್ಯಾಂ ಚಂದ್ರಬಿಂಬೇ ಧ್ಯಾತ್ವಾ ಶ್ರೀ ಲಲಿತಾಂಬಿಕಾಂ').

ಹಿರಣ್ಮಯೀಂ – ಹಿರಣ್ಯವೆಂದರೆ ಬಂಗಾರ; ಅದರ ವಿವರಣೆ ಹಿಂದೆಯೇ ಬಂದಿದೆ. ಅದೇ ಧಾತುವಿಗೆ ಮಯಟ್ ಪ್ರತ್ಯಯವನ್ನು ಸೇರಿಸಿ 'ಹಿರಣ್ಮಯಿ'ಯೆನ್ನುವ ಮಾತೂ ಒದಗುತ್ತದೆ. ಮಯಟ್ ಪ್ರತ್ಯಯವು ಪ್ರಾಚುರ್ಯ ಅಥವಾ ವಿಕಾರ ಎಂಬ ಎರಡು ಅರ್ಥಗಳಲ್ಲಿ ಬರುತ್ತದೆ. ಬಂಗಾರದ ಸ್ವಾಭಾವವೇ, ಸ್ವರೂಪವೇ, ಎದ್ದು ಕಾಣುವಂತೆ ಇರುವವಳು ಎನ್ನುವುದು ಪ್ರಾಚುರ್ಯಾರ್ಥ ('ಹಿರಣ್ಯಸ್ವರೂಪಾಂ', ಪೃ.ಭಾ.). ಬಂಗಾರದಿಂದ ಮಾಡಿದ್ದು, ಬಂಗಾರದ ಪುತ್ಥಳಿ ಎನ್ನುವುದು ವಿಕಾರಾರ್ಥ ('ಹಿರಣ್ಯವಿಗ್ರಹಾಂ' ಸಾ.ಭಾ.).

ಹಿರಣ್ಯವೆಂದರೆ ಪವಿತ್ರವಾದುದು ಎಂಬರ್ಥವೂ ಇದೆ ('ಪವಿತ್ರಂ ವೈ ಹಿರಣ್ಯಂ', ಶ್ರೀ.ಭಾ.ದಲ್ಲಿ ಉದ್ಧೃತ). ಎಂದರೆ ಜಗತ್ತಿನ ವಿಕಾರಗಳಿಂದ ದೂರವಾದ ಮೂಲಪ್ರಕೃತಿ ಜಗತ್ತಿಗೆ ಉಪಾದಾನಕಾರಣವೂ ಆಗಿ ಪರಿಣಾಮವನ್ನು ಹೊಂದುತ್ತಾಳೆ; ಪರಿಣಾಮವು ವ್ಯಕ್ತವಾಗಿ ಬೆಳಗುತ್ತಿರುವುದರಿಂದ ಅದನ್ನು ಹಿರಣ್ಯವೆನ್ನುವುದು ಸಂಕೇತಿಸುತ್ತದೆ. ಆದರೆ, ಪರಿಣಾಮ ಪ್ರಕೃತಿಯ ಪ್ರಸಾರಗಳಲ್ಲಷ್ಟೇ ವಿನಾ ಮೂಲಪ್ರಕೃತಿಯಲ್ಲಿ ಯಾವ ವಿಕಾರವೂ ಇಲ್ಲದೆ ಪರಿಶುದ್ಧವಾಗಿರುತ್ತದೆ ('ಮೂಲ ಪ್ರಕೃತೇಃ ಜಗತಃ ಪರಿಣಾಮ್ಯುಪಾದಾನತ್ವೇನ ಏವ ಹಿರಣ್ಯರೂಪೇಣ ಪರಿಣತ ಇತಿ', ಶ್ರೀ.ಭಾ.).

ಶಿವನಿಗೆ ಹಿರಣ್ಯರೇತಸನೆಂದು ಹೆಸರಿದೆ. ಇಲ್ಲಿಯೂ ಹಿರಣ್ಯವೆಂದರೆ ಪ್ರಕೃತಿ ಪರಿಣಾಮವೇ; ಅದಕ್ಕೆ ಬೀಜಭೂತನಾಗಿರುವವನು ಶಿವ. ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ, ಅನುಗ್ರಹ, ತಿರೋಧಾನಗಳಿಗೆ ಕಾರಣನಾಗುವಂತೆ ಇರುವ ಶಿವನ ಶಕ್ತಿಯನ್ನು ಹಿರಣ್ಮಯಿಯೆಂದು ಕಾಳಿಕಾಪುರಾಣ ಕರೆದಿದೆ ('ಹಿರಣ್ಯರೇತಸಃ ಶಂಭೋಃ ಶಕ್ತಿಃ ಪ್ರೋಕ್ತಾ ಹಿರಣ್ಮಯೀ', ಶ್ರೀ.ಭಾ.ದಲ್ಲಿ ಉದ್ಧೃತ).

ಈ ಮಂತ್ರಕ್ಕೆ ಜಾತವೇದ (ಅಗ್ನಿ) ಋಷಿ ; ಮಂತ್ರದ ಛಂದಸ್ಸು ಅನುಷ್ಟುಪ್ ; ಮತ್ತು ದೇವತೆ ಸರ್ವಸೌಭಾಗ್ಯದೇವತೆಯಾದ ಮಹಾಲಕ್ಷ್ಮಿ. ವಿನಿಯೋಗ ಮೂರು ಬಗೆಯಾಗಿ, ವೈದಿಕ ದೇವತೆಗಳಿಗೆ ಆಧಿಭೌತಿಕ, ಅಧಿದೈವಿಕ ಮತ್ತು ಆಧ್ಯಾತ್ಮಿಕ ಎಂದು ಮೂರು ರೂಪಗಳಿವೆ. ಆಧಿಭೌತಿಕವಾಗಿ ಅಗ್ನಿಯು ಭೂಮಿಯ ಮೇಲೆ ಉರಿಯುತ್ತಿರುವ ಬೆಂಕಿ ('ಮರ್ಯಃ'); ಆಧಿದೈವಿಕವಾಗಿ ಪುರುಷಾರ್ಥಗಳನ್ನು ಸಲ್ಲಿಸುವ ಸೂರ್ಯ–ಚಂದ್ರರು ('ಸಾಧು'); ಮತ್ತು ಆಧ್ಯಾತ್ಮಿಕವಾಗಿ ಮನುಷ್ಯನಲ್ಲಿರುವ ಸಂಕಲ್ಪ ('ಕ್ರತು') (ಋ. 1,77,3). ಮೊದಲನೆಯ ರೂಪದಲ್ಲಿ ಭೌತಿಕವಾದ ಅಗ್ನಿಗೆ ಮಂತ್ರವನ್ನು ಹೇಳಿಕೊಂಡು 'ಸ್ವಾಹಾ' ಎಂದು ತುಪ್ಪವನ್ನು ಸಲ್ಲಿಸುವುದು ಒಂದು ವಿನಿಯೋಗ. ಪೂರ್ಣಚಂದ್ರನಲ್ಲಿ ನಾರಾಯಣಿಯನ್ನು ಧ್ಯಾನಿಸಲು ಮಂತ್ರವನ್ನು ಬಳಸುವುದು ಎರಡನೆಯ ವಿನಿಯೋಗ. ಮೂರನೆಯ ವಿನಿಯೋಗದಲ್ಲಿ ಲಕ್ಷ್ಮಿಯ ಬಂಗಾರದ ಪ್ರತಿಮೆಯನ್ನು ಮಾಡಿ, ಅದರಲ್ಲಿ ಶ್ರೀಂ, ಹ್ರೀಂ, ಕ್ಲೀಂ ಎಂಬ ಬೀಜಾಕ್ಷರಗಳನ್ನು ಬರೆದು ಪೂಜಿಸುತ್ತಾರೆ.

ಮಂತ್ರದ ಮೊದಲ ಮಾತುಗಳಾದ 'ಹಿರಣ್ಯವರ್ಣಾಂ' ಎನ್ನುವುದೇ ಬೀಜ; ಮಂತ್ರದ ಕಡೆಯಲ್ಲಿ ಆಹುತಿಯ ಸಂದರ್ಭದಲ್ಲಿ ಹೇಳುವ 'ಸ್ವಾಹಾ' ಎನ್ನುವುದೇ ಶಕ್ತಿ; ಬೀಜಾಕ್ಷರಗಳಾದ ಶ್ರೀಂ, ಹ್ರೀಂ, ಕ್ಲೀಂ ಎನ್ನುವುದು ಕೀಲಕ (ಮ.ಲ.ರ.). ಅಥವಾ ಶ್ರೀಂ ಎನ್ನುವುದು ಬೀಜ, ಹ್ರೀಂ ಎನ್ನುವುದು ಶಕ್ತಿ, ಕ್ಲೀಂ ಎನ್ನುವುದು ಕೀಲಕ (ಶ.ವೃ). ಧ್ಯಾನಕ್ಕಾಗಿ ಮುಂದಿನ ಶ್ಲೋಕವನ್ನು ಬಳಸುತ್ತಾರೆ.

ಕಾಂತ್ಯಾ ಕಾಂಚನಸನ್ನಿಭಾಂ ಹರಗಿರಿಪ್ರಖ್ಯೈಶ್ಚತುರ್ಭಿ-
ರ್ಗಜೈರ್ಹಸ್ತಕ್ಷಿಪ್ತ ಹಿರಣ್ಮಯಾಮೃತಘಟೈರಾಸಿಚ್ಯಮಾನಾಂ ಶ್ರಿಯಮ್ ।
ನಾನಾರತ್ನಸಮುಜ್ಜ್ವಲಾಂ ಕರಲಸತ್ಪದ್ಮಾಂ ಕಿರೀಟೋಜ್ಜ್ವಲಂ ।
ಕ್ಷೌಮಾಬದ್ಧನಿತಂಬಬಿಂಬಲಸಿತಾಂ ವಂದೇಽರವಿಂದಸ್ಥಿತಾಮ್ ॥

ಈ ಶ್ಲೋಕದಲ್ಲಿ ಗಜಲಕ್ಷ್ಮಿಯ ಮೂರ್ತಿವರ್ಣನೆಯಿದೆ. ಧ್ಯಾನಕ್ಕೆ, ಜಪಕ್ಕೆ ಮತ್ತು ಹೋಮಕ್ಕೆ ಬಳಸಬೇಕಾದ ಲಕ್ಷ್ಮಿಯ ನಾಮಗಳಲ್ಲಿ (ಲಕ್ಷ್ಮೀ ನಾಮಾವಳಿ) ಏಳು ಈ ಮಂತ್ರದಿಂದ ಉದ್ಧೃತವಾಗಿದೆ -

(1) ಹಿರಣ್ಯವರ್ಣಾಯೈ ನಮಃ
(2) ಹರಿಣ್ಯೈ ನಮಃ
(3) ಸುವರ್ಣಸ್ರಜಾಯೈ ನಮಃ
(4) ರಜತಸ್ರಜಾಯೈ ನಮಃ
(5) ಚಂದ್ರಾಯೈ ನಮಃ
(6) ಹಿರಣ್ಮಯ್ಯೈ ನಮಃ
(7) ಲಕ್ಷ್ಮ್ಯೈ ನಮಃ

ಮಂತ್ರ 2

ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಂ ।
ಯಸ್ಯಾಂ ಹಿರಣ್ಯಂ ವಿಂದೇಯಂ ಗಾಮಶ್ವಂ ಪುರುಷಾನಹಂ ॥

(ಅಗ್ನಿಯೇ, ಆ ಲಕ್ಷ್ಮಿಯನ್ನು ನನ್ನಿಂದ ಕದಲದಿರುವಂತೆ ನನ್ನೆಡೆಗೆ ಬರಮಾಡು; ಅವಳಿರಲಾಗಿ ಬಂಗಾರವನ್ನೂ ಹಸು-ಕುದುರೆಗಳನ್ನೂ ಮನುಷ್ಯರನ್ನೂ ಹೊಂದುವೆನು.)

'ಜಾತವೇದ, ತಾಂ ಲಕ್ಷ್ಮೀಂ ಮೇ ಆವಹ' ಎನ್ನುವ ಮಾತುಗಳು ಮೊದಲನೆಯ ಮಂತ್ರದಲ್ಲೇ ಬಂದಿವೆ. ಲಕ್ಷ್ಮಿಗೆ ಇಲ್ಲಿ ಇನ್ನೊಂದು ವಿಶೇಷಣವನ್ನು ಸೇರಿಸಿದ್ದಾರೆ. ಅದು 'ಅನಪಗಾಮಿನೀಂ' ಎನ್ನುವುದು. ಇದಕ್ಕೆ ಅರ್ಥ, ನೆಲೆಯಾಗಿ ನಿಲ್ಲುವವಳು; ಹೊರಟುಹೋಗದೆ ಇರುವವಳು ('ಅಪಗಮನ ರಹಿತಾಂ', 'ಅನಪಾಯಿನೀಂ', ಸಾ.ಭಾ.); ಎಂದೆಂದಿಗೂ ಇರುವವಳು. 'ಅನಪ' ಎಂದರೆ ನೀರಲ್ಲದ್ದು; ನೀರು ಹರಿದು ಹೋಗುವ ಸ್ವಭಾವವುಳ್ಳದ್ದು, ಅದಲ್ಲದ್ದು 'ಅನಪಗಾಮಿನಿ'. ಸಾಧಕನನ್ನು ಬಿಟ್ಟು ಹೊರ ಹೊರಡದೆ ಅವನಲ್ಲೇ ಯಾವಾಗಲೂ ನೆಲೆಯಾಗಿ ನಿಲ್ಲಲೆಂದು ಕೋರಿಕೆ ('ಕದಾಚಿದಪಿ ಮಾಂ ತ್ಯಕ್ತ್ವಾ ಅನ್ಯತ್ರ ಗಂತುಂ ಅನುದ್ಯುಕ್ತಾಂ, ಮದೇಕಾಶ್ರಯನಿಷ್ಠಾಂ', ಪೃ.ಭಾ.).

ಬಂಗಾರವೆಂದರೆ ಧನ, ಸ್ಥಾವರ ಸಂಪತ್ತು; ಹಸು-ಕುದುರೆ-ಮನುಷ್ಯರೆಂದರೆ ಜಂಗಮ ಸಂಪತ್ತು. ಮನುಷ್ಯರಲ್ಲಿ ಮಕ್ಕಳು, ಸ್ನೇಹಿತರು, ಸೇವಕರು ಸೇರುತ್ತಾರೆ. ('ಪುತ್ರಮಿತ್ರದಾಸಭೂತಾನ್', ಸಾ.ಭಾ.; 'ಪುತ್ರಾದೀನ್', ಪೃ.ಭಾ.). ಲಕ್ಷ್ಮಿಯ ಪರಿವಾರ ಹಸುಗಳು, ಕುದುರೆಗಳು, ಆನೆಗಳೆಂದು 'ರಾಜ್ಯಲಕ್ಷ್ಮೀಹೃದಯ'ವೆಂಬ ಗ್ರಂಥ ಹೇಳುತ್ತದೆ (ಚಿ.ವೃ.ಯಲ್ಲಿ ಉದ್ಧೃತ). ಲಕ್ಷ್ಮಿಯು ಬರಲಾಗಿ ಅವಳ ಈ ಪರಿವಾರವೂ ಅವಳೊಂದಿಗೆ ಬರುವುದೆಂದು ಭಾವ.

ಮೇಲಿನ ಮಂತ್ರದಲ್ಲಿರುವಂತೆ ಇಲ್ಲಿಯೂ ಜಾತವೇದ (ಅಗ್ನಿ) ಋಷಿ, ಅನುಷ್ಟುಪ್ ಛಂದಸ್ಸು. ಇಲ್ಲಿ ದೇವತೆಯನ್ನು ಶ್ರೀ ರಾಜ್ಯಲಕ್ಷ್ಮಿಯೆಂದು ಹೇಳಿದ್ದಾರೆ. ಅವಳ ಧ್ಯಾನಶ್ಲೋಕ ಹೀಗಿದೆ.

ಚತುರಂಗಬಲೋಪೇತಾಂ ಧನಧಾನ್ಯ ಸುಖೇಶ್ವರೀಮ್ ।
ಅಶ್ವಾರೂಢಾಮಹಂ ವಂದೇ ರಾಜ್ಯಲಕ್ಷ್ಮೀಂ ಹಿರಣ್ಮಯೀಮ್ ॥

ಈ ಮಂತ್ರದಿಂದ ಲಕ್ಷ್ಮೀನಾಮಾವಳಿಯಲ್ಲಿ ಎಂಟನೆಯ ನಾಮ ಹೊರಡುತ್ತದೆ –

1. (8) ಅನಪಗಾಮಿನ್ಯೈ ನಮಃ

ರಾಜ್ಯಲಕ್ಷ್ಮೀ



ರಾಜ್ಯಲಕ್ಷ್ಮೀ ಯಂತ್ರ

ಮಂತ್ರ 3

ಅಶ್ವಪೂರ್ವಾಂ ರಥಮಧ್ಯಾಂ ಹಸ್ತಿನಾದಪ್ರಬೋಧಿನೀಂ ।
ಶ್ರಿಯಂ ದೇವೀಮುಪಹ್ವಯೇ ಶ್ರೀರ್ಮಾ ದೇವೀ ಜುಷತಾಂ ॥

(ಕುದುರೆ ಮೊದಲಾಗಿ, ನಡುವೆ ರಥವಿದ್ದು, (ದೇವಿಯ ಬರುವಿಕೆಯನ್ನು) ಆನೆಯ ಘೀಂಕಾರವು ಸೂಚಿಸಿ ನಮ್ಮನ್ನೆಚ್ಚರಿಸುತ್ತಲಿದೆ. ಶ್ರೀದೇವಿಯು ನನ್ನ ಹತ್ತಿರ ಬರಲೆಂದು ಬೇಡುವೆನು; ತಾಯಿಯಾದ ದೇವಿಯು ಬಳಿಸಾರಲಿ.)

ಈ ಮಂತ್ರದಲ್ಲಿ ಲಕ್ಷ್ಮಿಯು ಸಾಧಕನೆಡೆಗೆ ಸಂಭ್ರಮದಿಂದ ಬರುತ್ತಿರುವ ಚಿತ್ರಣವಿದೆ. ಅವಳ ಮೆರವಣಿಗೆಯಲ್ಲಿ ಕುದುರೆಗಳೇ ಮೊದಲ ಸಾಲು; ಅವುಗಳ ಹಿಂದೆ, ದೇವಿಯ ಮುಂದೆ, ರಥಗಳು. ದೇವಿಯ ಹಿಂಭಾಗದಲ್ಲಿ ಆನೆಗಳು ಗಟ್ಟಿಯಾಗಿ ಘೀಂಕಾರ ಮಾಡುತ್ತ ಮೆರವಣಿಗೆ ಸಾಗುತ್ತಿರುವುದನ್ನು ಸಾರುತ್ತಿದೆ. ಇದನ್ನು ಲಕ್ಷ್ಮಿಯ ಸೇನೆಯೆಂದೂ ಹೇಳಿದ್ದಾರೆ (ಪೃ.ಭಾ.). ಸಾಧಕನು ಲಕ್ಷ್ಮಿಯ ಸಾನ್ನಿಧ್ಯವನ್ನು ಬಯಸಿ ಮೊದಲ ಎರಡು ಮಂತ್ರಗಳಲ್ಲಿ ಅಗ್ನಿಯನ್ನು ಬೇಡಿಕೊಂಡಿದ್ದಾನೆ. ಅಗ್ನಿಯು ಅವನ ಕೋರಿಕೆಗೆ ಓಗೊಟ್ಟು ಲಕ್ಷ್ಮಿಯನ್ನು ಅವನ ಬಳಿ ಕರೆತರುತ್ತಿದ್ದಾನೆ. ಸಾಧಕನಿಗೆ ಇದರ ಅರಿವು ಆಗುವುದನ್ನು ಮೂರನೆಯ ಮಂತ್ರ ಬಣ್ಣಿಸುತ್ತದೆ.

ಸಾಧಕನು ಲಕ್ಷ್ಮಿಯು ಬರುತ್ತಿರುವುದನ್ನು ತಿಳಿದು, ತನ್ನ ಸಮೀಪಕ್ಕೆ ಬರಲೆಂದು ಬೇಡಿಕೊಳ್ಳುತ್ತಾನೆ. 'ಉಪಹ್ವಯೇ' ಎನ್ನುವ ಮಾತಿಗೆ 'ಹತ್ತಿರ ಬಾ ಎಂದು ಕರೆಯುತ್ತೇನೆ' ಎಂದರ್ಥ ('ಮತ್ ಸಮೀಪಂ ಆಗಚ್ಛ ಇತಿ ಆಹ್ವಯೇ', ಪೃ.ಭಾ.). ಇದಾದ ಮೇಲೆ 'ದೇವೀ ಮಾ ಜುಷತಾಂ', ಎಂದರೆ ದೇವಿಯು ನನ್ನನ್ನು ಸೇರಲಿ, ನನ್ನೆಡೆಗೆ ಬರಲಿ ('ಶ್ರೀಃ ದೇವೀ ಮಾಂ ಜುಷತಾಂ') ಎನ್ನುವ ಮಾತಿದೆ. ಇಲ್ಲಿ ಬರುವ 'ಮಾ' ಎಂಬ ಪದವನ್ನು ಹೀಗೆ 'ಮಾಂ' ('ನನ್ನನ್ನು') ಎಂಬುದರ ಛಾಂದಸ ಪ್ರಯೋಗವೆಂದು ಬಗೆಯದೆ, 'ಮಾ' ಎಂದರೆ ತಾಯಿಯೆಂದು ಅರ್ಥಮಾಡುವುದೂ ಸರಿಹೋಗುತ್ತದೆ. ಸಾಧಕನ ಬಳಿಗೆ ಬಂದು ನಿಲ್ಲಲು ದೇವಿಯು ಯಾವುದೊಂದು ನಿರ್ದಿಷ್ಟ ಸಂಬಂಧವನ್ನು ತಳೆಯಬೇಕು, ಯಾವುದಾದರೊಂದು ಮೂರ್ತರೂಪವನ್ನು ಹೊಂದಿರಬೇಕು. ಅದು ತಾಯಿಯದಾದರೆ ಉಚಿತ, ಏಕೆಂದರೆ ಇಲ್ಲಿ ಶ್ರೀದೇವಿಯು ಮೂಲಪ್ರಕೃತಿಯೇ, ಇಡೀ ವಿಶ್ವಕ್ಕೆ ಬೀಜಸ್ವರೂಪಳು.

ಈ ಮಂತ್ರದಲ್ಲಿ ಬರುವ ವಿವರಗಳಿಗೆ ಸಾಂಕೇತಿಕವಾದ ಅರ್ಥವನ್ನೂ ಸೂಚಿಸಿದ್ದಾರೆ. ಮೊದಲಲ್ಲಿ ಹೋಗುವ ಕುದುರೆಗಳು ಸಾಧಕನ ಇಂದ್ರಿಯಗಳು; 'ಇಂದ್ರಿಯಾಣಿ ಹಯಾನ್ ಆಹುಃ' ಎಂಬ ರೂಪಕವಿದೆಯಷ್ಟೆ 'ಅಶ್ವ' ಎನ್ನುವ ಮಾತಿಗೆ ದಾರಿಯನ್ನು ಮಾಡಿಕೊಡುವುದೆಂದು ಮೂಲಾರ್ಥ ('ಅಶ್ನುತೇ ಮಾರ್ಗಂ ಆಪ್ನೋತಿ; ಅಶೂ ವ್ಯಾಪ್ತೌ'). ಇಂದ್ರಿಯಗಳು ವಿಷಯಗಳನ್ನು ವ್ಯಾಪಿಸುತ್ತವೆ; ಮನಸ್ಸು ಇಂದ್ರಿಯಗಳನ್ನು ವ್ಯಾಪಿಸುತ್ತದೆ. ಅವು ಬಹಿರಿಂದ್ರಿಯಗಳು, ಇದು

ಸೌಭಾಗ್ಯಲಕ್ಷ್ಮೀ



ಸೌಭಾಗ್ಯಲಕ್ಷ್ಮೀ ಯಂತ್ರ

ಅಂತರಿಂದ್ರಿಯ. ರಥವೆಂದರೆ ಸಾಧಕನ ಶರೀರವೇ; 'ಶರೀರಂ ರಥಮೇವ ತು'. 'ರಥ' ಎನ್ನುವ ಮಾತಿಗೆ 'ರಮ್' ಎಂದು ಧಾತುವಿದ್ದು ಸಂತೋಷ ಪಡಿಸುವುದೆಂದು ಮೂಲಾರ್ಥ. ರಥಮಧ್ಯದಲ್ಲಿ ಲಕ್ಷ್ಮಿಯಿರುವುದು ಶರೀರದ ಮಧ್ಯವೆನಿಸಿಕೊಳ್ಳುವ ಹೃದಯದಲ್ಲಿ ನೆಲೆಗೊಂಡಿರುವ ಪರಾಶಕ್ತಿಯನ್ನು ಸಂಕೇತಿಸುತ್ತದೆ.

ಆನೆಯ ಘೀಂಕಾರ ಯೋಗಿಗಳು ಅನುಭವಿಸುವ ಸಿದ್ಧಿಗಳಲ್ಲಿ ಒಂದು; ಅವರ ಕುಂಡಲಿನಿಯು ಜಾಗ್ರತವಾಗಿದೆಯೆಂದು ಸೂಚಿಸುವ ನಿಮಿತ್ತ.

ಶ್ರೀದೇವಿಯೆನ್ನುವುದು ('ಶ್ರಿಯಂ ದೇವೀಂ' ವೈದಿಕ ವಾಙ್ಮಯದಲ್ಲಿ ಸಂಪತ್ತಿಗೆ ಅಭಿಮಾನ ದೇವತೆಯಾದ ಲಕ್ಷ್ಮಿಗೆ ಹೆಸರು. 'ಶ್ರೀ' ಎಂದರೆ ಎಲ್ಲರೂ ಯಾರನ್ನು ಆಶ್ರಯಿಸುವರೋ ಅವಳು ('ಶ್ರಯಣೀಯಾ'). ದೇವಿ ಎನ್ನುವ ಮಾತು 'ದಿವ್' ಎಂಬ ಧಾತುವಿನಿಂದ ಒದಗಿಬಂದು 'ಬೆಳಗುವವಳು' ('ದೇವನಶೀಲಾ', 'ದ್ಯೋತನಶೀಲಾ', ಸಾ.ಭಾ.), ಅಥವಾ 'ಕ್ರೀಡಿಸುತ್ತಿರುವವಳು' ('ಕ್ರೀಡಾದಿ ಲಕ್ಷಣಾ', ಪೃ.ಭಾ.) ಎಂದು ಅರ್ಥಗಳಾಗುತ್ತವೆ. ಸಾಧಕನ ಹೃದಯದಲ್ಲಿ ಎಲ್ಲ ಅರಿವಿಗೂ ಮೂಲವಾಗಿ ನೆಲೆಸಿರುವವಳು; ಮತ್ತು ಇಡೀ ಜಗದ್ವ್ಯಾಪಾರ ಅವಳ ಲೀಲೆಯಲ್ಲದೆ ಅವಳಿಗೆ ಅದರಿಂದ ಯಾವ ಪ್ರಯೋಜನವೂ ಇರದು. 'ಲೋಕವತ್ತು ಲೀಲಾ ಕೈವಲ್ಯಂ' ಎಂಬ ಬ್ರಹ್ಮ ಸೂತ್ರವಿದೆ. ವಿಷ್ಣುವಿನ ಜೊತೆ ಕ್ರೀಡಿಸುತ್ತಿರುವವಳು (ಎಂದರೆ ಪುರುಷನೊಂದಿಗೆ ಕೂಡಿಕೊಂಡ ಮೂಲ ಪ್ರಕೃತಿಯಾಗಿರುವವಳು) ಎಂದೂ ಅರ್ಥವಾಗಬಹುದು (ಶ್ರೀ.ಗು.ರ.).

ಈ ಮಂತ್ರಕ್ಕೆ ಋಷಿ ಲಕ್ಷ್ಮಿಯ ಮಾನಸ ಪುತ್ರರಲ್ಲಿ ಒಬ್ಬನಾದ ಆನಂದ; ಛಂದಸ್ಸು ಅನುಷ್ಟುಪ್; ದೇವತೆ ಶ್ರೀಲಕ್ಷ್ಮಿ, 'ಉ' ಎನ್ನುವುದು ಬೀಜ, 'ತ' ಎನ್ನುವುದು ಶಕ್ತಿ, 'ಶ್ರೀಂ' ಎನ್ನುವುದು ಕೀಲಕ. ಈ ಮಂತ್ರದ ಧ್ಯಾನ ಶ್ಲೋಕ ಹೀಗಿದೆ –

ತಡಿದ್ವರ್ಣಪೂರ್ಣಾಂ ಶಶಿತಪನತಾಟಂಕಯುಗಲಾಂ
ದರಸ್ಮೇರಾಧೀರಾಂ ಕರಕಲಿತಪದ್ಮಾಂ ದ್ವಿನಯನಾಮ್ ।
ಲಸದ್ಗ್ರೀವಾಂ ಕ್ಷೌಮಾಂಶುಕವಿಶದನಾಭೀಸರಸಿಜಾಂ
ಭಜಾಮಿ ತ್ವಾಂ ದೇವೀಂ ಪ್ರಣತಜನಸೌಭಾಗ್ಯಜನನೀಮ್ ॥

ಈ ಮಂತ್ರದ ಒಕ್ಕಣೆಯಿಂದ ಲಕ್ಷ್ಮೀನಾಮಾವಳಿಯಲ್ಲಿ ಮುಂದಿನ ನಾಮಗಳು ಹೊರಡುತ್ತವೆ.

1 (9) ಅಶ್ವಪೂರ್ವಾಯ್ಯೆ ನಮಃ
2 (10) ರಥಮಧ್ಯಾಯ್ಯೆ ನಮಃ
3 (11) ಹಸ್ತಿನಾದಪ್ರಬೋಧಿನ್ಯೈ ನಮಃ
4 (12) ಶ್ರಿಯ್ಯೆ ನಮಃ
5 (13) ಮಾಯ್ಯೆ ನಮಃ
6 (14) ದೈವ್ಯೈ ನಮಃ

ಮಂತ್ರ 4

ಕಾಂ ಸೋಸ್ಮಿತಾಂ ಹಿರಣ್ಯಪ್ರಾಕಾರಾಂ ಆರ್ದ್ರಾಂ
ಜ್ವಲಂತೀಂ ತೃಪ್ತಾಂ ತರ್ಪಯಂತೀಂ ।
ಪದ್ಮೇ ಸ್ಥಿತಾಂ ಪದ್ಮವರ್ಣಾಂ
ತಾಂ ಇಹೋಪಹ್ವಯೇ ಶ್ರಿಯಂ ॥

(ಬ್ರಹ್ಮಸ್ವರೂಪಳೂ, ಕಿರುನಗೆಯುಳ್ಳವಳೂ, ಬಂಗಾರದ ರೂಪವುಳ್ಳವಳೂ, ದಯಾಮಯಿಯೂ, ಕಂಗೊಳಿಸುತ್ತಿರುವವಳೂ, ತೃಪ್ತಳೂ, ತೃಪ್ತಿಪಡಿಸುವವಳೂ, ತಾವರೆ ಹೂವಿನಲ್ಲಿ ನೆಲೆಗೊಂಡವಳೂ, ಕೆಂದಾವರೆ ಬಣ್ಣದವಳೂ ಆದ ಲಕ್ಷ್ಮಿಯನ್ನು ಇಲ್ಲಿಗೆ ಕರೆಯುವೆನು.)

ಕಾಂ – 'ಕ' ಎನ್ನುವುದು ಬ್ರಹ್ಮನ ಹೆಸರು ('ಕ ಇತಿ ಬ್ರಹ್ಮಣೋ ನಾಮ'). ಲಕ್ಷ್ಮಿಯನ್ನು ಇಲ್ಲಿ ಬ್ರಹ್ಮನೆಂದು ಕರೆದಿರುವುದರ ಸ್ವಾರಸ್ಯ ಮಾತಿಗೂ ಮನಸ್ಸಿಗೂ ಮೀರಿದ ತತ್ತ್ವವೆಂದು ಹೇಳುವುದು ('ವಾಙ್ಮನಸೋರಗೋಚರಂ', ಸಾ.ಭಾ.); ಯಾವ ಒಕ್ಕಣೆಯಿಂದಲೂ ಆಕೆಯ ಸ್ವರೂಪವನ್ನು ಹಿಡಿದಿಡುವುದು ಸಾಧ್ಯವಿಲ್ಲವೆಂದು ಹೇಳುವುದು ('ದುರ್ನಿರೂಪ ಸ್ವರೂಪಾಂ'). ಶ್ರೀವಿದ್ಯೆಯಲ್ಲಿ ಬಳಕೆಯಲ್ಲಿರುವ ಪಂಚದಶೀ ಮಂತ್ರದ ಮೊದಲನೆಯ ಅಕ್ಷರವೂ 'ಕ' ಎಂಬುದೇ.

ಸೋಸ್ಮಿತಾಂ – ಈ ಮಾತನ್ನು ಒಡೆದರೆ, ಸ, ಉ, ಸ್ಮಿತಾಂ ಎಂದಾಗುತ್ತದೆ. 'ಸ' ಎಂದರೆ ಸಹಿತ; ಕೂಡಿಕೊಂಡಿರುವುದು. 'ಉ' ಎಂದರೆ ಹೊರ ಹೊಮ್ಮಿದುದು; ಉದ್ಗತ. 'ಸ್ಮಿತ'ವೆಂದರೆ ಕಿರುನಗೆ. ಒಟ್ಟು ಅರ್ಥ, ಹೊರ ಹೊಮ್ಮುವ ಕಿರುನಗೆಯಿಂದ ಕೂಡಿದ ಮುಖವುಳ್ಳವಳು (ಸಾ.ಭಾ.) 'ಉ' ಎಂದರೆ ಉತ್ಕೃಷ್ಟವೆನ್ನುವುದರ ಸಂಗ್ರಹಾಕ್ಷರವೆಂದೂ ಹೇಳುವುದಿದೆ; ಉತ್ಕೃಷ್ಟವಾದ ಕಿರುನಗೆಯುಳ್ಳವಳು ('ಉತ್ಕೃಷ್ಟಸ್ಮಿ ತೇನ ಸಹಿತಾಂ', ಪೃ.ಭಾ.). ಪ್ರಾಕೃತನಗೆಯೆಂದರೆ ಸಂದರ್ಭಕ್ಕೆ ತಕ್ಕಂತೆ ಸುಖವನ್ನು, ಹರ್ಷವನ್ನು ತೋರಿಸುವುದು. ದೇವಿಯ ನಗೆ ಬ್ರಹ್ಮದ ಆನಂದ ಸ್ವಭಾವವನ್ನು ಸೂಚಿಸುವಂಥದು ; ಇಡೀ ವಿಶ್ವವು ಹೊರಹೊಮ್ಮುವುದಕ್ಕೆ ಆ ನಗೆಯೇ ನಿಮಿತ್ತ ಕಾರಣ. ಹಾಗೆಂದೇ 'ಕಾಂ ಸೋಸ್ಮಿತಾಂ' ಎಂಬ ಮಾತುಗಳನ್ನು ಕ್ರಮವಾಗಿ ಸೇರಿಸಿದ್ದಾರೆ.

ಹಿರಣ್ಯ ಪ್ರಾಕಾರಾಂ – ಪ್ರಕಾರವೆಂದರೆ ಬಗೆ, ಆಕಾರ, ರೂಪ, ಬಣ್ಣ ('ಪ್ರಕಾರೋ ವರ್ಣಃ', ಸಾ.ಭಾ.). 'ದೇವಿಯ ಆಕಾರ ಅಥವಾ ಬಣ್ಣ ಬಂಗಾರದ್ದು' ; ಎಂದರೆ ಶ್ರೇಷ್ಠವಾದ, ಆಕರ್ಷಕವಾದ ರೂಪ ಅವಳದ್ದು ('ಪ್ರಕೃಷ್ಟಾಕೃತಿಃ', ಸಾ.ಭಾ.). ಪ್ರಕಾರವೆನ್ನುವುದೇ ಛಾಂದಸ ಪ್ರಯೋಗದಲ್ಲಿ ಪ್ರಾಕಾರವೆಂದಾಗಿದೆ.

ಅಥವಾ ಪ್ರಾಕಾರವೆಂಬ ಮಾತಿನ ಅರ್ಥವನ್ನೇ ಹಿಡಿಯಬಹುದು. ಪ್ರಾಕಾರವೆಂದರೆ ಸುತ್ತುವರಿದು ಬರುವ ಗೋಡೆ, ಕೋಟೆ ; ಒಳಗಿರುವುದನ್ನು ಮುಚ್ಚಿಡುವ, ಕಾಪಿಡುವ ಸಾಧನ.

ಗಜಲಕ್ಷ್ಮೀ



ಗಜಲಕ್ಷ್ಮೀ ಯಂತ್ರ

ಎಂದರೆ ಲಕ್ಷ್ಮಿಯು ಬಂಗಾರದಲ್ಲಿ ಅಡಗಿದ್ದಾಳೆ; ಬಂಗಾರವು ಅವಳನ್ನು ಮುಚ್ಚಿದೆ ('ಸುವರ್ಣಾವರಣಾಂ', ಪೃ.ಭಾ.). ಈಶಾವಾಸ್ಯೋಪನಿಷತ್ತಿನಲ್ಲಿ ಬ್ರಹ್ಮದ ಸ್ವರೂಪವನ್ನು ಬಂಗಾರದ ಹೊದಿಕೆ ಮುಚ್ಚಿದೆಯೆಂದು ಹೇಳಿರುವುದನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬೇಕು ('ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ').

ಆರ್ದ್ರಾಂ – ಆರ್ದ್ರವೆಂದರೆ ಒದ್ದೆಯಾಗಿರುವುದು; ನೀರಿನಿಂದ ಕೂಡಿರುವುದು ('ಕ್ಲಿನ್ನಾಂ' ಸಾ.ಭಾ.), ಎಂದರೆ ತಣ್ಣಗಿರುವುದು ('ಶೀತಲಗುಣಾಂ', ಪೃ.ಭಾ.). ರೂಢಿಯಲ್ಲಿ ಈ ಮಾತನ್ನು ಕರುಣಾರ್ದ್ರಹೃದಯ ಎಂಬರ್ಥದಲ್ಲೇ ಬಳಸುತ್ತಾರೆ. ದೇವಿಯ ಪ್ರಧಾನವಾದ ಗುಣ ದಯೆ. ವೇಂಕಟೇಶ್ವರನ ದಯೆಯೇ ಮೈವೆತ್ತಿ ಬಂದಂತೆ ಇರುವವಳು ಶ್ರೀದೇವಿಯೆಂದು ವೇದಾಂತದೇಶಿಕರ 'ದಯಾಶತಕ'ವು ಬಣ್ಣಿಸುತ್ತದೆ.

ಆರ್ದ್ರಾ ಎಂದರೆ ಒದ್ದೆಯಾಗಿರುವವಳು ಎಂಬ ಯೌಗಿಕಾರ್ಥವನ್ನೇ ಹಿಡಿದು ಅಮೃತಮಂಥನ ಸಂದರ್ಭದಲ್ಲಿ ಕ್ಷೀರಸಮುದ್ರದಿಂದ ಹೊರಬಂದುದನ್ನು ಸೂಚಿಸುವುದೆಂದೂ ಹೇಳುವುದುಂಟು ('ಕ್ಷೀರೋದಧೇಃ ಉತ್ಪನ್ನ ತ್ವಾತ್', ಸಾ.ಭಾ.). ಲಕ್ಷ್ಮಿಯು ಸಮುದ್ರದಿಂದ ಮೇಲೆದ್ದು ಬಂದಾಗ ಆರ್ದ್ರಾ ನಕ್ಷತ್ರವಿದ್ದಿತೆಂದೂ, ಆ ನಕ್ಷತ್ರವು ರುದ್ರ-ಶಿವನಿಗೆ ಪ್ರಿಯವಾದುದೆಂದೂ ಒಂದು ವಿವರಣೆಯಿದೆ. ('ಆರ್ದ್ರಾನಕ್ಷತ್ರೋತ್ಪನ್ನಾಂ ರುದ್ರರೂಪಾಂ ವಾ', ಸಾ.ಭಾ.).

ಜ್ವಲಂತೀಂ – ಉರಿಯು ಬೆಳಗುವಂತೆ ಕಂಗೊಳಿಸುವವಳು ಎಂಬರ್ಥದಲ್ಲಿ 'ಜ್ವಲಂತೀ' ('ಪ್ರಕಾಶಮಾನಾಂ', ಸಾ.ಭಾ.; 'ಜ್ಯೋತಿಃ ಸ್ವರೂಪಾಂ', ಪೃ.ಭಾ.). ಎಲ್ಲ ಪ್ರಾಣಿಗಳ ಅಂತರಾಳದಲ್ಲಿ ಸರ್ವದಾ ಬೆಳಗುತ್ತಿರುವವಳು ಮೂಲ ಪ್ರಕೃತಿಯೇ ತಾನೇ? ಸಾಧಕರು ಹೊರಗಣ ಸೂರ್ಯನಂತೆ ಈಕೆಯನ್ನು ಒಳಗೇ ಕಾಣುವರು. ಒಳಗಿನ ಈ ಬೆಳಕಿನಿಂದಲೇ ಉಳಿದೆಲ್ಲ ಬೆಳಕುಗಳು ಎಂದು ಉಪನಿಷತ್ತು ಹೇಳುವುದನ್ನು ನೆನಪಿಗೆ ತಂದುಕೊಳ್ಳಬೇಕು ('ತಸ್ಯ ಭಾಸಾ ಸರ್ವಂ ಇದಂ ವಿಭಾತಿ'). ಸೂರ್ಯ, ಚಂದ್ರ, ಗ್ರಹ, ತಾರಕೆಗಳೆಲ್ಲವೂ ಮೂಲ ಪ್ರಕೃತಿಯ ಪ್ರಸಾರಗಳೇ; ಪ್ರಾಣಿಗಳ ಅರಿವೂ, ಮನಸ್ಸೂ, ಇಂದ್ರಿಯ ವೃತ್ತಿಗಳೂ ಅದರ ಪ್ರಸಾರಗಳೇ.

ತೃಪ್ತಾಂ, ತರ್ಪಯಂತೀಂ – ದೇವಿಯು ತಾನು ತೃಪ್ತಳು, ಆದುದರಿಂದಲೇ ಉಳಿದೆಲ್ಲ ಪ್ರಾಣಿಗಳನ್ನೂ ತೃಪ್ತಿಗೊಳಿಸುವಳು. ಬ್ರಹ್ಮನಿಗೆ ನಿತ್ಯತೃಪ್ತ, ಅಕಾಮ, ಆಪ್ತಕಾಮ ಎಂಬ ವರ್ಣನೆಗಳಿವೆಯಷ್ಟೆ? ಆನಂದ ಸ್ವರೂಪನಾದ ಬ್ರಹ್ಮನಿಗೆ (ಎಂದರೆ ವಿಷ್ಣುವಿಗೆ) ನಿತ್ಯಾವಿಯೋಗಿನಿಯಾಗಿರುವುದರಿಂದ ಅವಳನ್ನು 'ಪೂರ್ಣಕಾಮ'ಳೆಂದು ಕರೆದಿದ್ದಾರೆ (ಸಾ.ಭಾ.). ಭಕ್ತರು ಸಲ್ಲಿಸುವ ಪ್ರಾರ್ಥನಾದಿಗಳಿಂದ ತೃಪ್ತಿಪಟ್ಟಿದ್ದಾಳೆಂದು ಆಗಬಹುದು ('ಭಕ್ತ ಪುಜಾದಿಭಿರಿತಿ ಯಾವತ್', ಪೃ.ಭಾ.).

ಭಕ್ತರೇನು ಅಕಾಮರಲ್ಲ, ಆಪ್ತಕಾಮರಲ್ಲ. ಜೀವರಿಗೆ ಸಹಜವಾದ ಬಯಕೆಗಳಿಂದ ಕೂಡಿದವರು. ಬಯಕೆಗಳನ್ನು ತೀರಿಸಿಕೊಳ್ಳುವ ಉದ್ದೇಶದಿಂದಲೇ ದೇವರಲ್ಲಿ ಮೊರೆಹೋಗುವುದು. ಶ್ರೀದೇವಿಗೆ ಅವರ ಐಹಿಕ-ಆಮುಷ್ಮಿಕ ಬಯಕೆಗಳನ್ನೆಲ್ಲ ತೀರಿಸಿ, ಅವರನ್ನು ತೃಪ್ತಿಗೊಳಿಸುವ ಸಾಮರ್ಥ್ಯವಿದೆಯೆಂದು 'ತರ್ಪಯಂತೀಂ' ಎಂಬ ವಿಶೇಷಣ. ('ವರ-ಪ್ರಸಾದ-ಅನುಗ್ರಹ-ವಿಶೇಷೈಃ ಸ್ವಭಕ್ತಾನಾಂ ವಾಂಛಾಪೂರ್ತಿಕಾರಿಣೀಂ', ಪೃ.ಭಾ.).

ಪದ್ಮೇ ಸ್ಥಿತಾಂ, ಪದ್ಮವರ್ಣಾಂ – ಲಕ್ಷ್ಮಿಯ ಮೂರ್ತಿಕಲ್ಪನೆಯಲ್ಲಿ ಆಕೆಯು ಸರಸ್ಸಿನಲ್ಲಿ ಅರಳಿದ ತಾವರೆ ಹೂ ಮೇಲೆ ಕುಳಿತಿರುವಂತೆ, ಕೆಂದಾವರೆಯ ಬಣ್ಣ ಅವಳ ಮೈಮೇಲೆ ಬಿದ್ದು ಅವಳ ಮೈ ಬಣ್ಣವೂ ಅದೇ ಎಂದು ಕಾಣಿಸುವಂತೆ ವಿವರಗಳಿವೆ. ಅವಳು 'ಕಮಲಾಸೀನೆ' (ಸಾ.ಭಾ.), 'ಪದ್ಮಾಧಿಷ್ಠಿತೆ' (ಪೃ.ಭಾ.), 'ಕಮಲವದ್ ಭಾಸಮಾನೆ' (ಪೃ.ಭಾ.).

ತಾವರೆಯು ಲಕ್ಷ್ಮೀಪೂಜೆಯಲ್ಲಿ ಪ್ರಶಸ್ತವಾದ ಹೂ. ಆ ಹೂವು ಲಕ್ಷ್ಮಿಯ ಪ್ರತೀಕವೆಂದೇ ನಂಬಿಕೆಯಿದೆ. ಹಾಗೆಂದೇ ಲಕ್ಷ್ಮಿಗೆ 'ಕಮಲ', 'ಪದ್ಮ' ಎಂಬ ಹೆಸರುಗಳು. ತಾವರೆಯು ಪರಿಶುದ್ಧಿಗೆ, ಸಮೃದ್ಧಿಗೆ, ಕಾಂತಿಗೆ ಸಂಕೇತವಾದುದರಿಂದ ಲಕ್ಷ್ಮಿಯೊಡನೆ ಅದರ ಸಂಬಂಧ. ಮತ್ತು ಭಕ್ತನ ಹೃದಯವೂ ತಾವರೆಯೇ, ಅಲ್ಲಿ ನೆಲೆಗೊಂಡಿರುವವಳೆಂದೂ ಅವಳು 'ಪದ್ಮಸ್ಥಿತೆ', 'ಹೃತ್ಕಮಲನಿವಾಸಿನಿ'.

ಮಂತ್ರದಲ್ಲಿರುವ ಉಳಿದ ಪದಗಳಿಗೆ ವಿವರಣೆ ಆಗಲೇ ಬಂದಿದೆ.

ಈ ಮಂತ್ರದಲ್ಲಿ ಲಕ್ಷ್ಮಿಯೇ ಪರಬ್ರಹ್ಮಸ್ವರೂಪವೆಂಬ ಸೂಚನೆಯಿದೆ. ಭಕ್ತರ ಒಡಲು ಬಯಕೆಗಳಿಲ್ಲದೆ ನೆಮ್ಮದಿಯಿಂದಿರುವಾಗ, ಭಕ್ತಿಯಿಂದ ಪರಿಶುದ್ಧವಾಗಿರುವಾಗ, ಯೋಗಸಾಧನೆಯಿಂದ ಸಮೃದ್ಧವಾಗಿರುವಾಗ ಬ್ರಹ್ಮ ಅಲ್ಲಿಯೇ ಬೆಳಗುವ ತತ್ತ್ವ. ನಿತ್ಯವಾಸವಾಗಿರುವ ಬ್ರಹ್ಮತತ್ತ್ವ ಜ್ವಲಿಸುವುದು ಈ ಅರಿವಿದ್ದಾಗ. ಹೃದ್ದೇಶದಲ್ಲೇ ನೆಲೆಗೊಂಡಿರುವ ಬ್ರಹ್ಮ ಸಾಧಕನ ಅರಿವಿಗೆ ಬರುವುದು ಸಾಧಕನು ತೃಪ್ತನಾಗಿದ್ದಾಗಲೇ; ಭಕ್ತನು ತೃಪ್ತನಾಗಿರುವುದು ಸಚ್ಚಿದಾನಂದ ಸ್ವರೂಪನಾದ ಬ್ರಹ್ಮನೊಂದಿಗೆ ಸಾರೂಪ್ಯಧರ್ಮ. ತೃಪ್ತಿಯಿಂದಲೇ ತರ್ಪಣ. ಎರಡೂ ಕ್ರಿಯೆಗಳಲ್ಲಿ ಆನಂದ ಸಮಾನವಾದುದು.

'ಆರ್ದ್ರಾಂ ಜ್ವಲಂತೀಂ' ಎಂಬ ವಿಶೇಷಣಗಳು ಪರಸ್ಪರ ವಿರುದ್ಧವಾದುವೆಂದು ತೋರಬಹುದು. ಒದ್ದೆಯಾಗಿರುವುದು, ಉರಿಯುವುದು ಪ್ರಾಕೃತನೆಲೆಯಲ್ಲಿ ವಿರುದ್ಧವಾದ ವ್ಯಾಪಾರಗಳೇ. ಅದರೆ ದೇವಿಯ ದಯೆಯಿರುವುದರಿಂದಲೇ ಆಕೆ ಬೆಳಗುವುದು; ದೇವಿಯ ಕಾರುಣ್ಯವೇ ಭಕ್ತರಿಗೆ ಬೆಳಕು. ಬೆಳಗುವುದು ಆಕೆಯ ಸ್ವಭಾವ ; ದಯೆತೋರುವುದು ಭಕ್ತರ ಆಭಿಮುಖ್ಯವಿರುವಾಗ.

ಈ ಮಂತ್ರದ ಋಷಿ ಆನಂದ; ಛಂದಸ್ಸು ಬೃಹತೀ ; ದೇವತೆಯು ಶ್ರೀಲಕ್ಷ್ಮಿ. 'ಕಾಂ' ಎನ್ನುವುದು ಮಂತ್ರದ ಬೀಜ; 'ಹ್ರೀಂ' ಎನ್ನುವುದು ಶಕ್ತಿ; 'ಶ್ರೀಂ' ಎನ್ನುವುದು ಕೀಲಕ. ಮಂತ್ರಕ್ಕೆ ಧ್ಯಾನಶ್ಲೋಕ ಇದು –

ವರದಾಭಯಶುಕಪುಸ್ತಕಕರಕಲಿತಾಂ ಕಮಲಮಧ್ಯಗಾಂ ಕಲಯೇ ।
ಕಮಲಾಂ ಸಸ್ಮಿತವದನಾಂ ಕನಕಾವರಣಸ್ಥಿತಾಂ ಕಾಂಚಿತ್ ॥

ಈ ಮಂತ್ರದಿಂದ ಹೊರಡುವ ಮುಂದಿನ ಹೆಸರುಗಳು ಲಕ್ಷ್ಮೀನಾಮಾವಳಿಯಲ್ಲಿ ಸೇರಿವೆ.

1. (15) ಕಾಯೈ ನಮಃ
2. (16) ಸೋಸ್ಮಿತಾಯೈ ನಮಃ
3. (17) ಹಿರಣ್ಯಪ್ರಾಕಾರಾಯೈ ನಮಃ
4. (18) ಆರ್ದ್ರಾಯೈ ನಮಃ
5. (19) ಜ್ವಲಂತ್ಯೈ ನಮಃ
6. (20) ತೃಪ್ತಾಯೈ ನಮಃ
7. (21) ತರ್ಪಯಂತ್ಯೈ ನಮಃ
8. (22) ಪದ್ಮಸ್ಥಿತಾಯೈ ನಮಃ
9. (23) ಪದ್ಮವರ್ಣಾಯೈ ನಮಃ

ಮಂತ್ರ 5

ಚಂದ್ರಾಂ ಪ್ರಭಾಸಾಂ ಯಶಸಾ ಜ್ವಲಂತೀಂ
ಶ್ರಿಯಂ ಲೋಕೇ ದೇವಜುಷ್ಟಾಮುದಾರಾಂ ।
ತಾಂ ಪದ್ಮನೇಮೀಂ ಶರಣಂ (ಅಹಂ) ಪ್ರಪದ್ಯೇ
ಅಲಕ್ಷ್ಮೀರ್ಮೇ ನಶ್ಯತಾಂ ತ್ವಾಂ ವೃಣೇ ॥

(ಚಂದ್ರನಂತೆ ಕಂಗೊಳಿಸುವವಳೂ, ಪ್ರಸಿದ್ಧಳಾಗಿ ಲೋಕದಲ್ಲಿ ಬೆಳಗುವ ಸಂಪತ್ತಾದವಳೂ, ದೇವತೆಗಳಲ್ಲಿ ಸೇರಿಕೊಂಡು, ಔದಾರ್ಯವುಳ್ಳವಳೂ ತಾವರೆ ಹೂಗಳಿಂದ ಸುತ್ತುವರಿದವಳೂ ಆದ ದೇವಿಯಲ್ಲಿ ನಾನು ಮೊರೆಹೋಗುವೆನು; ನನ್ನ ದೌರ್ಭಾಗ್ಯ ತೊಲಗಲೆಂದು ನಿನ್ನನ್ನು ಬಯಸಿಬಂದೆನು.)

ಚಂದ್ರಾಂ, ಪ್ರಭಾಸಾಂ – ಲಕ್ಷ್ಮಿಗೆ ಚಂದ್ರನೆಂಬ ವಿಶೇಷಣವಿರುವುದರ ವಿವರಣೆ ಮೊದಲ ಮಂತ್ರದಲ್ಲೇ ಬಂದಿದೆ, ಅಮೃತವನ್ನು ಬಯಸಿ ದೇವತೆಗಳೂ, ದೈತ್ಯರೂ ಕ್ಷೀರಸಮುದ್ರವನ್ನು ಕಡೆದ ಕಥೆಯಲ್ಲಿ, ಮೊದಲು ಸಮುದ್ರದಿಂದ ಹೊರಬಂದು ಕಾಣಿಸಿಕೊಂಡವಳು ಲಕ್ಷ್ಮಿ. ಅವಳ ಚೆಲುವನ್ನೂ, ಸಿರಿಯನ್ನೂ, ಬೆಳಕನ್ನೂ, ಕಂಡು ದೈತ್ಯ-ದೇವತೆಗಳೆಲ್ಲರ ಹೃದಯವೂ ತಣಿಯಿತು, ಅವರೆಲ್ಲ ಸಂತೋಷಗೊಂಡರು. ಅನಂತರ ಆಕೆಯ ಚೆಲುವಿನ, ಸಿರಿಯ, ಬೆಳಕಿನ ಒಂದು ಖಂಡವಾಗಿ ಚಂದ್ರನು ಸಮುದ್ರದಿಂದ ಹೊರಹೊಮ್ಮಿ ತೋರಿಕೊಂಡನು. ಹೀಗೆ ಚಂದ್ರನು ಲಕ್ಷ್ಮಿಯ ಒಂದು ಅಂಶವೇ. ಲಕ್ಷ್ಮಿಯಾದರೋ 'ಕೋಟಿ ಚಂದ್ರಪ್ರಕಾಶೆ'. ಇಲ್ಲಿ ಲಕ್ಷ್ಮಿಯನ್ನು ಚಂದ್ರನೆಂದು ಕರೆದಿರುವುದು ಚಂದ್ರನಂತೆ ಚೆಲುವಾದವಳು, ಬೆಳಗುವವಳು, ತಂಪನ್ನು ತರುವವಳು ಎಂಬರ್ಥದಲ್ಲಿ ('ಚಂದ್ರಾಮ್ ಪ್ರಕಾಶಮಾನಾಂ', ಸಾ.ಭಾ.; 'ಚಂದ್ರವತ್ ಸಂತೋಷಕಾರಿಣೀಂ', ಪೃ.ಭಾ.).

'ಚಂದ್ರಾಂ' ಎನ್ನುವ ಮಾತನ್ನೂ 'ಪ್ರಭಾಸಾಂ' ಎನ್ನುವ ಮುಂದಿನ ಮಾತನ್ನೂ ಒಟ್ಟಿಗೆ ಗ್ರಹಿಸುವುದೂ ಸರಿಯಾಗುತ್ತದೆ. ಚಂದ್ರನಲ್ಲಿರುವ ಪ್ರಕೃಷ್ಟವಾದ ಬೆಳಕನ್ನು ಇಲ್ಲಿ ಗುರುತಿಸಿ ಚಂದ್ರನಂತೆ ಬೆಳಗುವವಳು ಎಂದರ್ಥವಾಗುತ್ತದೆ ('ಅಕ್ಷೀಣ ಭಾಸಾಂ ಚಂದ್ರಾಖ್ಯಾಂ', ಭಾ.ಭೂ.). 'ಪ್ರಭಾಸ' ಎಂದರೆ ಹೆಚ್ಚಾಗಿ ಅಥವಾ ಚೆನ್ನಾಗಿ ಬೆಳಕು ಯಾರಲ್ಲಿದೆಯೋ ಅವಳು ('ಪ್ರಕೃಷ್ಟಾ ಭಾಃ ಕಾಂತಿಃ ಯಸ್ಯಾಃ', ಸಾ.ಭಾ.; 'ಪ್ರಕರ್ಷೇಣ ಭಾಸ್ವತೀಂ', ಪೃ.ಭಾ.).

ಯಶಸಾ, ಜ್ವಲಂತೀಂ – ಯಶಸ್ಸಿನಿಂದ ಕಂಗೊಳಿಸುತ್ತಿರುವವಳು ('ಕೀರ್ತ್ಯಾ ಪ್ರಕಾಶಮಾನಾಂ', ಸಾ.ಭಾ.) ಎಂದು ದೇವಿಯನ್ನು ಕರೆದಿರುವುದು 'ಶ್ರೀ' ಎಂಬ ಮಾತಿನ ಮೂಲಾರ್ಥದ ಆಧಾರದ ಮೇಲೆ. ಎಲ್ಲರೂ ಅವಳನ್ನು ಬಯಸುವವರೆಂದೇ ಅವಳು ಶ್ರೀದೇವಿ

ಶ್ರೀಲಕ್ಷ್ಮೀ



ಶ್ರೀಲಕ್ಷ್ಮೀ ಯಂತ್ರ

ಶ್ರೀಲಕ್ಷ್ಮೀ



ಶ್ರೀಲಕ್ಷ್ಮೀ ಯಂತ್ರ

('ಸರ್ವೈಃ ಶ್ರಿಯತೇ'). ಅವಳನ್ನು ಅರಿಯದವರು ಯಾರೂ ಇಲ್ಲ; ಅವಳಿಂದ ವಿಮುಖರಾದವರೂ ಯಾರೂ ಇರರು. ಜಗತ್ತಿನ ಮೇಲೆ ಅವಳ ಒಡೆತನ (ಐಶ್ವರ್ಯ), ಜಗತ್ತಿನ ಎಲ್ಲ ಬಯಕೆಗಳನ್ನೂ ಈಡೇರಿಸುವ ಶಕ್ತಿ (ಸಂಪತ್ತು), ಮತ್ತು ಭಕ್ತರಿಗೆ ಸುಲಭವಾಗಿ ಒಲಿಯುವ ಗುಣ (ಔದಾರ್ಯ) ಇವು ಅವಳ ಯಶಸ್ಸು. ಈ ಯಶಸ್ಸೇ ಭಕ್ತರೆದುರು ಕಂಗೊಳಿಸುತ್ತ ನಿಂತು, ಅವರನ್ನು ಆಕರ್ಷಿಸುವುದು.

ಲೋಕೇ, ಶ್ರಿಯಂ — ಈ ಜಗತ್ತಿನಲ್ಲಿ ('ಇಹ ಲೋಕೇ', ಸಾ.ಭಾ.) ಅಥವಾ ಈರೇಳು ಎಂದರೆ ಹದಿನಾಲ್ಕು ಲೋಕಗಳಲ್ಲೂ ('ಲೋಕೇಷು ಚತುರ್ದಶಸು', ಪೃ.ಭಾ.) ಅವಳು 'ಶ್ರೀ', ಎಂದರೆ ಎಲ್ಲ ಪ್ರಾಣಿಗಳಿಗೂ ಬೇಕಾದವಳು, ಎಲ್ಲರಿಂದಲೂ ಸೇವೆಗೊಳ್ಳುವವಳು ('ಸರ್ವಸಮಾಶ್ರಯಾ'). ಅವಳು ಎಲ್ಲ ಪ್ರಾಣಿಗಳಿಗೂ ಆಸರೆ, ಆಸೆ; ನೆಲೆ, ನೆರವು. ಪಡೆಯಬೇಕಾದ ಗುರಿಯೂ ಅವಳೇ (ಪ್ರಾಪ್ಯ) ಮತ್ತು ಹಿಡಿಯಬೇಕಾದ ದಾರಿಯೂ ಅವಳೇ (ಪ್ರಾಪಕ). ಸಾಧನ-ಸಿದ್ಧಿಗಳೆರಡರಲ್ಲೂ ಅವಳು ಸಿರಿಸ್ವರೂಪದವಳು.

ಲೋಕವೆಂದರೆ 'ಪ್ರಕೃತಿಮಂಡಲ'ವೆಂದೂ ಅರ್ಥಮಾಡಿರುವುದಿದೆ (ಶ್ರೀ.ಗು.ರ.). ಪ್ರಕೃತಿ ಮಂಡಲವೆಂದರೆ ಮೂಲ ಪ್ರಕೃತಿಯಿಂದ ಹೊರಹೊಮ್ಮಿ ಪರಿಣತವಾದ ಪ್ರಸಾರಗಳು, ಸಾಂಖ್ಯರು ಹೇಳುವ ಮೂರು ಗುಣಗಳು ಮತ್ತು ಇಪ್ಪತ್ತನಾಲ್ಕು ತತ್ತ್ವಗಳು (ಮಹತ್, ಅಹಂಕಾರ, ಮನಸ್ಸು, ಭೂತಗಳು, ಇಂದ್ರಿಯಗಳು, ವಿಷಯಗಳು) ಈ ಮಂಡಲದಲ್ಲಿರುವ ಪ್ರಸಾರಗಳು. ಆದರೆ ಇವೆಲ್ಲ ಜಡವಾದುದರಿಂದ ಪರತಂತ್ರವಾದುವು. ಇವುಗಳ ಇರವೂ ಸಾಮರ್ಥ್ಯವೂ ಮೂಲಪ್ರಕೃತಿಯಿಂದಲೇ ಒದಗಿಬರಬೇಕು. ಮೂಲಪ್ರಕೃತಿಯನ್ನೇ ಇಲ್ಲಿ ಶ್ರೀದೇವಿಯೆಂದು ಕರೆದಿದೆ.

ದೇವಜುಷ್ಟಾಂ, ಉದಾರಾಂ — ಕ್ಷೀರಸಮುದ್ರದಿಂದ ಲಕ್ಷ್ಮಿಯು ಮೇಲೆದ್ದು ಕಾಣಿಸಿಕೊಂಡೊಡನೆ ದೇವೇಂದ್ರನೇ ಮೊದಲಾದ ಎಲ್ಲ ದೇವತೆಗಳೂ ಅವಳಿಂದ ಆಕರ್ಷಿತರಾದರು, ಅವಳನ್ನು ಪಡೆದುಕೊಳ್ಳಲು ಹಾತೊರೆದರು. ಅವಳನ್ನು ಸೇವಿಸಿ ಅವಳನ್ನು ತಮ್ಮೊಳಗೆ ಬರಮಾಡಿಕೊಂಡು ಸಿರಿಯನ್ನೂ ಸುಖವನ್ನೂ ಹೊಂದಿದರು. ದೇವತೆಗಳಿಂದ ಸೇವಿಸಲ್ಪಟ್ಟವಳು ('ದೇವೇಂದ್ರಾದ್ಯೈಃ ಸೇವಿತಾಂ', ಸಾ.ಭಾ.; ಪೃ.ಭಾ.); ದೇವತೆಗಳು ಮಾಡಿದ ಸೇವೆಯನ್ನು ಮೆಚ್ಚಿಕೊಂಡಳೆಂದೂ ಅವಳು 'ದೇವಜುಷ್ಟೆ' ('ಪ್ರೀತಾಂ ವಾ', ಪೃ.ಭಾ.).

ಲಕ್ಷ್ಮಿಯು ಸಮುದ್ರದಿಂದ ಹೊರಹೊಮ್ಮಿ ಕಾಣಿಸಿಕೊಂಡೊಡನೆ ದೇವ ದೇವನಾದ ವಿಷ್ಣುವಿನ ವಕ್ಷಃಸ್ಥಲದಲ್ಲಿ ಸೇರಿಕೊಂಡುಬಿಟ್ಟಳು; ಈ ಕಾರಣಕ್ಕಾಗಿಯೂ ಅವಳು 'ದೇವಜುಷ್ಟೆ' ('ದೇವೇನ ಹರಿಣಾ ಜುಷ್ಟಾ', ಶ್ರೀ.ಗು.ರ.).

ದೇವತೆಗಳೆಂದರೆ ಅಗ್ನಿ, ಇಂದ್ರ, ವರುಣ ಮೊದಲಾದವರು. ಇವರೆಲ್ಲ ಮನುಷ್ಯರಿಗೆ ನೆರವಾಗುವುದು ತಂತಮ್ಮ ವಿಶೇಷ ಸಾಮರ್ಥ್ಯಗಳಿಂದ. ನೆರವನ್ನು ಬಯಸಿಯೇ ಮನುಷ್ಯರು ಅವರನ್ನು ಸೇವಿಸುವರು (ಎಂದರೆ ಪ್ರಾರ್ಥನೆ, ಪೂಜೆ, ಬಲಿ ಮೊದಲಾದುವನ್ನು ಸಲ್ಲಿಸುವರು).

ಆದರೆ ಈ ದೇವತೆಗಳು ತಮ್ಮ ಸಾಮರ್ಥ್ಯಪ್ರಾಪ್ತಿಗಾಗಿ ಶ್ರೀದೇವಿಯನ್ನು ಸೇವಿಸುವರು, ಅಥವಾ ದೇವತೆಗಳಲ್ಲಿ ಶ್ರೀದೇವಿಯು ಸೇರಿಕೊಂಡಿದ್ದರೆ ದೇವತೆಗಳು ಬೆಳಗಬಲ್ಲರು, ನೆರವನ್ನು ನೀಡಬಲ್ಲರು.

ಎಲ್ಲ ದೇವತೆಗಳಲ್ಲೂ ಸೇರಿಕೊಂಡು ಬಂದಳಾಗಿ ಅವಳದ್ದು ಔದಾರ್ಯ. ಔದಾರ್ಯವೆಂದರೆ ಕೊಡುಗೈ ಎಂದು ಮಾತ್ರ ಅರ್ಥವಲ್ಲ; ಹಿರಿಮೆಯುಳ್ಳವಳೆಂದೂ ('ಪ್ರಗಲ್ಭಾಂ', ಸಾ.ಭಾ.) ಹರಡಿಕೊಂಡವಳೆಂದೂ ('ವಿಸ್ತಾರಾಂ', ಪೃ.ಭಾ.) ಅರ್ಥವಾಗುತ್ತದೆ. ಯಾವ ದೇವತೆಯನ್ನು ಸೇವಿಸಿದರೂ, ದಿಟವಾಗಿ ಶ್ರೀದೇವಿಯನ್ನು ಸೇವಿಸಿದಂತೆಯೇ. ಅವಳು ನೀಡುವ ನೆರವಿನಲ್ಲಿ ಯಾವ ಕೊರತೆಯೂ ಇರದು, ಯಾವ ಹಿಡಿತವೂ ತಡೆಯೂ ಇರದು. ಪ್ರಾಪಂಚಿಕ ಸಂಪತ್ತನ್ನು ಬಯಸಿದವರಿಗೆ ಈ ಸಂಪತ್ತಿನ ಜೊತೆಗೆ ಪಾರಮಾರ್ಥಿಕ ಸೌಲಭ್ಯವನ್ನೂ ಒದಗಿಸುವಳು; ಪಾರಮಾರ್ಥಿಕವಾದ ನಿಃಶ್ರೇಯಸವನ್ನು (ಎಂದರೆ ಮುಕ್ತಿಯನ್ನು) ಬಯಸಿದವರಿಗೆ ಲೌಕಿಕವಾದ ಅಭ್ಯುದಯವನ್ನೂ ಒದಗಿಸುವಳು. ಇದು ಅವಳ ಔದಾರ್ಯ.

ಪದ್ಮನೇಮೀಂ – 'ನೇಮಿ' ಎನ್ನುವ ಮಾತಿಗೆ ಬಂಡಿಯ ಗಾಲಿಯ ಬಳೆಯೆಂದು ಅರ್ಥ. ಚಕ್ರದಲ್ಲಿ ಇದು ಅತಿ ಮುಖ್ಯವಾದ ಭಾಗ. ಏಕೆಂದರೆ ಇದು ಸರಿಯಾಗಿದ್ದರೇ ಗಾಲಿ ಸುಲಭವಾಗಿ ತಿರುಗುವುದು. 'ಪದ್ಮ'ವೆಂದರೆ ಇಲ್ಲಿ ಪ್ರಪಂಚ. 'ಪದ್' ಎನ್ನುವ ಧಾತುವಿಗೆ 'ನಡೆಯುವುದು', 'ಸಾಗುವುದು' ಎಂಬರ್ಥವಿದೆ. ಎಡೆಬಿಡದೆ ಸಾಗುತ್ತಿರುವುದು ಜಗತ್ತಿನ ಧರ್ಮ; ಜಗತ್ತೆಂಬ ಮಾತಿಗೂ ಅದೇ ಅರ್ಥ. ತಾವರೆ ಹೂವನ್ನು ಪದ್ಮವೆಂದು ಕರೆದಿರುವುದು ಅದಕ್ಕೂ ಜಗತ್ತಿಗೂ ಇರುವ ಸಾದೃಶ್ಯದಿಂದಲೇ; ಪದ್ಮಕ್ಕೂ ಚಕ್ರಕ್ಕೂ ಇರುವ ಸಂಬಂಧವೂ ಇದೇ ಚೌಕಟ್ಟಿನಲ್ಲಿಯೇ. ಜಗದ್ವ್ಯಾಪಾರಕ್ಕೆ ಮೂಲ ಪ್ರಕೃತಿಯ ವ್ಯಾಪಕವಾದ ಪ್ರಭಾವ ಅನಿವಾರ್ಯವಾದುದು. ಹೀಗೆಂದು ದೇವಿಯನ್ನು 'ಪದ್ಮನೇಮಿ'ಯೆಂದು ಕರೆದಿದ್ದಾರೆ.

'ನೇಮಿ'ಯೆಂದರೆ ಸುತ್ತರಿಯುವುದು ಎಂದೂ ಅರ್ಥ. ಗಾಲಿಯ ಬಳೆ ಗಾಲಿಯನ್ನು ಸುತ್ತರಿದು ಇರುವುದಲ್ಲವೆ? ಲಕ್ಷ್ಮಿಯು ಪದ್ಮಸರಸ್ಸಿನಲ್ಲಿ ಪದ್ಮದ ಮೇಲೆ ನೆಲೆಗೊಂಡಿರುವಾಗ, ಅವಳನ್ನು ಸುತ್ತರಿದು ಪದ್ಮಗಳಿರುವ ಕಲ್ಪನೆಯನ್ನೂ ಇಲ್ಲಿ ಕಾಣಬಹುದು. 'ಪದ್ಮ'ವೆನ್ನುವ ಪದ ಪರಿಶುದ್ಧತೆಗೆ, ಚೆಲುವಿಗೆ, ಸಮೃದ್ಧಿಗೆ ಸಂಕೇತವೆಂದು ಹಿಂದೆಯೇ ಹೇಳಿದೆವಷ್ಟೆ? ಪದ್ಮಗಳಿಂದ ಸುತ್ತರಿದವಳೆಂದರೆ ಮೂಲಪ್ರಕೃತಿಯು ಕೇಂದ್ರವಾಗಿ ಎಲ್ಲೆಡೆಗಳಲ್ಲೂ ಈ ಗುಣಗಳು ಹೊರಹೊರಟಿವೆ. ಇಡೀ ಜಗತ್ತಿಗೆ ಅವಳು ನಾಭಿ; ಜಗತ್ತು ಅವಳನ್ನು ಮೀರಿ ಹೋಗದಿರುವುದರಿಂದ ಅವಳು ನೇಮಿಯೂ ಹೌದು.

'ಪದ್ಮನೇಮೀಂ' ಎಂಬ ಮಾತಿಗೆ ಪಾಠಾಂತರವಾಗಿ 'ಪದ್ಮನೀಂ ಈಂ' ಎಂಬುದನ್ನು ಕೆಲವರು ಗ್ರಹಿಸಿದ್ದಾರೆ. (ಸಾ.ಭಾ.; ಪೃ.ಭಾ.). ಪದ್ಮಿನಿಯೆಂದರೆ ತಾವರೆ ಹೂಗಳಿರುವ ಸರಸ್ಸು ('ಪದ್ಮಾಕರ', ಸಾ.ಭಾ.) ತಾವರೆ ಹೂವಿಗೂ ಅದೇ ಹೆಸರಿದೆ. ತಾವರೆ ಹೂಗಳ ಕೊಳವೇ ಲಕ್ಷ್ಮಿಯ

ವಾಸಸ್ಥಾನವಾದುದರಿಂದ ಅವಳು ಪದ್ಮಿನಿ ; ತಾವರೆ ಹೂವಿನಂತೆ ಚೆಲುವೆ, ಸಮೃದ್ಧಳು. ಆದುದರಿಂದ ಅವಳೇ ಪದ್ಮಿನಿ. ಪದ್ಮವೆಂದರೆ ಜಗತ್ತು, ಪದ್ಮಿನಿಯೆಂದರೆ ಅದರ ತೊಟ್ಟು ('ಪದ್ಮಲತಾಂ', ಸಾ.ಭಾ.); ಮೂಲಪ್ರಕೃತಿಯೆನ್ನುವ ಅರ್ಥದಲ್ಲಿ ಕೈಗಳಲ್ಲಿ ಪದ್ಮವನ್ನು ಹಿಡಿದಿರುವವಳೂ ಪದ್ಮಿನಿಯೇ ('ಕರಧೃತ ಕಮಲಾಂ' ಪೃ.ಭಾ.).

'ಈಂ' ಎನ್ನುವುದನ್ನು ಯಾಸ್ಕರು ಅರ್ಥವಿಲ್ಲದ ನಿಪಾತವೆಂದು ಪರಿಗಣಿಸುತ್ತಾರೆ. ಆದರೆ ತಾಂತ್ರಿಕ ಸಂಪ್ರದಾಯದಲ್ಲಿ 'ಈಂ' ಎನ್ನುವುದು ದೇವಿಯ ಬೀಜಮಂತ್ರ. ಪಂಚದಶೀಮಂತ್ರದಲ್ಲಿ 'ಈ' ಎನ್ನುವ ಅಕ್ಷರವೂ ಇದೆ; ದೇವಿಯನ್ನು 'ಈಕಾರವಾಚ್ಯೆ'ಯೆಂದು ಕರೆದಿರುವುದೂ ಇದೆ (ಸಾ.ಭಾ.;ಪೃ.ಭಾ.).

ತಾಂ - 'ತಾಂ ಪದ್ಮನೇಮೀಂ' ಎಂದಿರುವಾಗ 'ಆ ಪದ್ಮನೇಮಿಯನ್ನು' ಎಂದರ್ಥ ಮಾಡುವುದು ವಾಡಿಕೆ. ಆದರೆ 'ತಾಂ' ಎಂಬುದನ್ನು ಸ್ವತಂತ್ರವಾದ ವಿಶೇಷಣವೆಂದು ಬಗೆಯುವುದೂ ಉಂಟು. 'ತ' ಎನ್ನುವ ಏಕಾಕ್ಷರ ಪದಕ್ಕೆ ತಂತ್ರಶಾಸ್ತ್ರದಲ್ಲಿ ಪರಾಶಕ್ತಿ, ಕುಂಡಲಿನಿಯೆಂಬರ್ಥವಿದೆ (ಕಾಮಧೇನು ತಂತ್ರ), ಮತ್ತು ಬ್ರಹ್ಮ-ವಿಷ್ಣು-ರುದ್ರರೆಂಬ ಮೂರೂ ಶಕ್ತಿಗಳನ್ನೊಳಗೊಂಡ ತತ್ತ್ವವೆಂದು ಬಣ್ಣಿಸುವುದಿದೆ (ವರ್ಣೋದ್ಧಾರ ತಂತ್ರ). 'ತಾಯೆ' ಎನ್ನುವ ಮಾತಿಗೆ ಸೃಜನ ಸಂಕಲ್ಪವೆಂದು ಅರ್ಥ, ಪ್ರಪಂಚದ ಮೂಲ ಕಾರಣವಾದ ಇಚ್ಛಾಶಕ್ತಿ.

ಶರಣಂ (ಅಹಂ) ಪ್ರಪದ್ಯೇ — ಲಕ್ಷ್ಮಿಯನ್ನು ಮೊರೆಹೊಕ್ಕು, ದೌರ್ಭಾಗ್ಯಗಳನ್ನು ದೂರ ಮಾಡುವ ಉದ್ದೇಶದಿಂದ ಈ ಪ್ರಪದನ ನಿರೂಪಿತವಾಗಿದೆ. ಶರಣವೆಂಬ ಮಾತಿನಲ್ಲಿ ತನ್ನನ್ನು ತಪ್ಪದೆ ಕಾಪಿಡುವವಳು ಎಂಬ ತಾತ್ಪರ್ಯವಿದೆ ('ರಕ್ಷಿತ್ರೀಂ', ಸಾ.ಭಾ.); ತನಗೆ ಲಕ್ಷ್ಮಿಯು ರಕ್ಷಕಿಯಾಗಲಿ ಎಂದು ಬೇಡಿಕೆ (ರಕ್ಷಕೀ ಭವ ಇತಿ ವ್ರಜಾಮಿ', ಪೃ.ಭಾ.).

'ಶರಣಂ' ಮತ್ತು 'ಪ್ರಪದ್ಯೇ' ಎಂಬ ಮಾತುಗಳ ನಡುವೆ ಕೆಲವರು ಸೇರಿಸುವ (ನಾನು ಎಂಬರ್ಥದ) 'ಅಹಂ' ಶಬ್ದವು ಸರಿಯಾದುದಲ್ಲವೆಂದು ಸಾಯಣರು ಹೇಳುತ್ತಾರೆ. ('ಅತ್ರ ಅಹಂಶಬ್ದಪ್ರಕ್ಷೇಪಃ ಪ್ರಮಾದಿಕಃ'). ಪೃಥ್ವೀಧರರೂ ಇದು ದಾಕ್ಷಿಣಾತ್ಯ ಪಾಠದಲ್ಲಿಲ್ಲವೆಂದೂ ಇದನ್ನು ಔತ್ತರೇಯ ಪಾಠವೆಂದೂ ಪರಿಗಣಿಸಿದ್ದಾರೆ ('ನಾತ್ರ ಅಹಂಶಬ್ದಃ ಪ್ರಕ್ಷಿಪ್ತಃ; ಸಾರ್ವದೇಶಿಕ ಶಿಷ್ಟಪಾಠ ಸಂಪ್ರತಿಪತ್ತೇಃ ಇತಿ ಔತ್ತರೇಯಾಃ, ದಾಕ್ಷಿಣಾತ್ಯ ಪಾಠೇ ತದರ್ಶ ನಾತ್ ಪ್ರಕ್ಷಿಪ್ತ ಏವ').

ಅಲಕ್ಷ್ಮೀಃ ಮೇ ನಶ್ಯತಾಂ, ತ್ವಾಂ ವೃಣೇ — ಅಲಕ್ಷ್ಮಿಯು ಲಕ್ಷ್ಮಿಯಲ್ಲದ್ದು. ಲಕ್ಷ್ಮಿಯು ಚೆಲುವಿಗೆ, ಸಮೃದ್ಧಿಗೆ, ಔದಾರ್ಯಕ್ಕೆ ಸಂಕೇತವಾದರೆ, ಅಲಕ್ಷ್ಮಿಯು ಕುರೂಪಕ್ಕೆ, ಕ್ಷಾಮಕ್ಕೆ, ಕಾರ್ಪಣ್ಯಕ್ಕೆ ಸಂಕೇತ. ಇದನ್ನು 'ಅಶ್ರೀಃ' ಎಂದು ಕರೆದಿದ್ದಾರೆ (ಸಾ.ಭಾ.). ಪೌರಾಣಿಕ ಯುಗದಲ್ಲಿ ಅಲಕ್ಷ್ಮಿಯನ್ನು ಒಂದು ದೇವತೆಯೆಂದು ನಿರ್ದೇಶಿಸಿದೆ. ಬಡತನಕ್ಕೆ, ಕಷ್ಟಗಳಿಗೆ, ದೌರ್ಭಾಗ್ಯಕ್ಕೆ ಅಧಿ ದೇವತೆಯಾದ ಈಕೆ ಅಮೃತಮಂಥನ ಸಂದರ್ಭದಲ್ಲಿ ಲಕ್ಷ್ಮಿಗಿಂತ ಮೊದಲೇ ಹೊರಬಂದಳಂತೆ. ಆದುದರಿಂದ ಅವಳನ್ನು 'ಜ್ಯೇಷ್ಠಾ ಲಕ್ಷ್ಮಿ' ಎಂದು ಕರೆಯುವುದೂ ಉಂಟು. ಇವಳು ಕಾಣಿಸಿಕೊಳ್ಳುವ

ಮೊದಲು ಕ್ಷೀರ ಸಮುದ್ರದಿಂದ ಹಾಲಾಹಲ ವಿಷವು ಹೊರಬಂದಿತ್ತೆಂದೂ, ಇವಳು ಹೊರಬಂದೊಡನೆ ಕೆಟ್ಟತನಕ್ಕೆ ಪ್ರತೀಕವಾದ ಕಲ್ಕಿಯನ್ನು ವರಿಸಿದಳೆಂದೂ, ಹೀಗೆ 'ಕಲಿವಲ್ಲಭೆ' ಯಾದಳೆಂದೂ ಕಥೆಯಿದೆ. (ಪದ್ಮಪುರಾಣ, ಉತ್ತರಖಂಡ). ಕಲಿಯುಗದ ಎಲ್ಲ ಕಷ್ಟ ಕಾರ್ಪಣ್ಯಗಳಿಗೂ, ರೋಗರುಜಿನಗಳಿಗೂ ಕಲಹ, ಕೋಲಾಹಲಗಳಿಗೂ ಇವಳೇ ಕಾರಣಳಂತೆ.

ಲಕ್ಷ್ಮಿಯು ಇದ್ದಲ್ಲಿ ಅಲಕ್ಷ್ಮಿಯು ಇರಲಾರಳು. ಹಾಗೆಂದೇ ಲಕ್ಷ್ಮಿಯನ್ನು ಬರಮಾಡಿಕೊಳ್ಳುವ ಕಾತರ ಸೂಕ್ತದ್ರಷ್ಟಾರನಿಗೆ. ಲಕ್ಷ್ಮಿಯು ಬಂದೊಡನೆ ಅಲಕ್ಷ್ಮಿಯು ತೊಲಗುವಳು ('ತ್ವತ್ ಪ್ರಸಾದೇನ ಮಮ ಅಲಕ್ಷ್ಮೀಃ ವಿನಶ್ಯತು', ಭಾ.ಭೂ.). ಹೀಗೆಂದು ಲಕ್ಷ್ಮಿಯಲ್ಲಿ ಶರಣು ಹೊಕ್ಕಿದ್ದಾನೆ ('ಶರಣ್ಯೇನ ಕುರ್ವೇ', ಸಾ.ಭಾ.). ತನ್ನಲ್ಲಿ ಇರುವ ಅಲಕ್ಷ್ಮಿಯನ್ನು ತೊಲಗಿಸೆಂದು ಬೇಡಿಕೊಳ್ಳುತ್ತಾನೆ ('ಮದಾಶ್ರಿತ-ಜ್ಯೇಷ್ಠಾ-ನಿಃಸಾರಣಾಯ ತ್ವಾಂ ಪ್ರತಿವರಣಂ ಕರಿಷ್ಯೆ', ಪೃ.ಭಾ.). ಲಕ್ಷ್ಮಿ-ಅಲಕ್ಷ್ಮಿಯರಲ್ಲಿ ಮೇಲಾಟವಿರುವಾಗ ಸಾಧಕನು ಲಕ್ಷ್ಮಿಯನ್ನೇ ತನಗೆ ಹಿತವೆಂದು ಆರಿಸಿಕೊಂಡಿದ್ದಾನೆ. ಇದು ವರಣ, ಆಯ್ಕೆ ('ತ್ವಾಂ ವೃಣೇ'). ಸಾಧಕನ ಸಂಕಲ್ಪವನ್ನು ಸೂಚಿಸುವ ಮಾತು ಇದು.

ಅಲಕ್ಷ್ಮಿಯೆನ್ನುವುದು ದಿಟವಾಗಿ ಮನುಷ್ಯನಲ್ಲೇ ಮನೆಮಾಡಿರುವ ಕಲಿಸ್ವಭಾವ; ಆಲಸಿಕೆ, ಆಸೆ, ಕಲಹಪ್ರೀತಿ, ಕ್ರೌರ್ಯ, ಕಾರ್ಪಣ್ಯ ದ್ಯೂತ, ಪಾನ, ಧರ್ಮಪರಾಙ್ಮುಖತೆ ಮೊದಲಾದ ಗುಣಗಳು ಜ್ಯೇಷ್ಠಾಲಕ್ಷ್ಮಿಯ ಪರಿವಾರವೆಂದು ಪುರಾಣದ ಒಕ್ಕಣೆ. ಶ್ರೀಕಾಮನಾದವನು ಈ ದುರ್ಗುಣಗಳನ್ನೆಲ್ಲ ಬಿಡಬೇಕೆಂದು ಹೇಳುವುದೇ ಇಲ್ಲಿ 'ವರಣ'ದ ತಾತ್ಪರ್ಯ. ಮೇಲೆ ಕಾಣಿಸಿದ ಗುಣಗಳಿಗೆ ವಿರುದ್ಧವಾಗಿ ಉತ್ಸಾಹ, ಶಮೆ, ಶಾಂತಿ, ಕಾರುಣ್ಯ, ಔದಾರ್ಯ, ನಿಯಮ, ಧರ್ಮಪ್ರೀತಿ ಮೊದಲಾದ ಗುಣಗಳನ್ನು ಮೈಗೂಡಿಸಿಕೊಳ್ಳುವುದು ಲಕ್ಷ್ಮಿಯ ಆಗಮನಕ್ಕೆ ಸಿದ್ಧತೆ.

ಈ ಮಂತ್ರದ ಋಷಿ ಆನಂದ; ಛಂದಸ್ಸು ತ್ರಿಷ್ಟುಭ್; ದೇವತೆ ಸರ್ವೈಶ್ವರ್ಯಪ್ರದಾಯಿನಿಯಾದ ಲಕ್ಷ್ಮಿ. 'ಚಂ' ಎನ್ನುವುದು ಮಂತ್ರದ ಬೀಜ; 'ಣಂ' ಶಕ್ತಿ; 'ಶ್ರೀಂ' ಕೀಲಕ. ಧ್ಯಾನಶ್ಲೋಕ ಇದು –

ತೇಜೋಮಂಡಲಮಧ್ಯಗಾಂ ದ್ವಿನಯನಾಂ ದಿವ್ಯಾಂಬರಾಲಂಕೃತಾಂ
ದೇವೀಂ ಪದ್ಮವರಾಭಯಾಂ ಕರತಲೈಶ್ಚಿಂತಾಮಣಿಂ ಬಿಭ್ರತೀಮ್ ।
ನಾನಾ ದಿವ್ಯವಿಭೂಷಣಾಂ ಚ ಭಜತಾಂ ದೌರ್ಭಾಗ್ಯಸಂಹಾರಿಣೀಂ
ನಾನಾಭೀಷ್ಟವರಪ್ರದಾನನಿರತಾಂ ವಂದೇ ಪರಾಂ ದೇವತಾಮ್ ॥

ಇನ್ನೊಂದು ಧ್ಯಾನಶ್ಲೋಕವನ್ನೂ ಬಳಸುವುದಿದೆ (ಭಾ.ಭೂ.) –

ಆಕಾಶಪದ್ಮಾಕರಚಂದ್ರಬಿಂಬಪ್ಲವೋಲ್ಲಸಂತೀಂ ಪರಿಪೂರ್ಣಕಾಂತೀಮ್ ।
ಪದ್ಮಸ್ಥಿತಾಂ ಪದ್ಮಕರಾಂ ಪ್ರಪದ್ಯೇ ಲಕ್ಷ್ಮೀಮಲಕ್ಷ್ಮೀವಿನಿವೃತ್ತಯೇऽ ನ್ವಹಮ್ ॥

ಈ ಮಂತ್ರದಿಂದ ಹೊರಹೊರಟು ಲಕ್ಷ್ಮೀನಾಮಾವಳಿಯಲ್ಲಿ ಸೇರಿರುವ ಹೆಸರುಗಳು –

1 (24) ಚಂದ್ರಾಯೈ ನಮಃ

2 (25) ಪ್ರಭಾಸಾಯೈ ನಮಃ

3 (26) ಯಶಸಾಯೈ ನಮಃ

4 (27) ಜ್ವಲಂತ್ಯೈ ನಮಃ

5 (28) ದೇವಜುಷ್ಟಾಯೈ ನಮಃ

6 (29) ಉದಾರಾಯೈ ನಮಃ

7 (30) ತಾಯೈ ನಮಃ

8 (31) ಪದ್ಮನೇಮಿನ್ಯೈ ನಮಃ

ಮಂತ್ರ 6

ಆದಿತ್ಯವರ್ಣೇ ತಪಸೋऽಧಿಜಾತೋ
ವನಸ್ಪತಿಸ್ತವ ವೃಕ್ಷೋऽಥ ಬಿಲ್ವಃ ।
ತಸ್ಯ ಫಲಾನಿ ತಪಸಾ ನುದಂತು
ಮಾ ಯಾಂತರಾಯಾಶ್ಚ ಬಾಹ್ಯಾ ಅಲಕ್ಷ್ಮೀಃ ॥

(ಸೂರ್ಯನಂತೆ ಬೆಳಗುವವಳೇ, ನಿನ್ನ ತಪಸ್ಸಿನಿಂದ ಬಿಲ್ವವೃಕ್ಷವೂ ಒದಗಿ ಬಂದಿತು; ಅದರ ಫಲವಾಗಿ ನನ್ನ ಒಳಗೂ ಹೊರಗೂ ಇರುವ ದೌರ್ಭಾಗ್ಯಗಳು ನಿನ್ನ ತಪಸ್ಸಿನಿಂದಾಗಿ ತೊಲಗಲಿ !)

ಆದಿತ್ಯವರ್ಣೇ – ಅದಿತಿಯ ಮಗ ಆದಿತ್ಯ, ಸೂರ್ಯ; ಅವನ ವರ್ಣವೆಂದರೆ ಕಾಂತಿ. ಲಕ್ಷ್ಮಿಯ ಆಕೃತಿಯು ಹೀಗೆ ಹೊಳೆಯುತ್ತಿದ್ದಿತೆಂದು ಕಲ್ಪನೆ. ಅಥವಾ ಪೂರ್ವದಲ್ಲಿ ತೋರಿಕೊಳ್ಳುತ್ತಿರುವ ಸೂರ್ಯನಂತೆ ನಸುಗೆಂಪಿನ ಮೈಬಣ್ಣ ಅವಳದ್ದು ('ಸೂರ್ಯಸಮಾನ-ಕಾಂತೇ', ಪೃ.ಭಾ.; 'ತರುಣಾರುಣವದ್ ಅರುಣವರ್ಣೇ', ಸೌ.ಸಂ.). ಈ ಪದದಿಂದ ದೇವಿಯ ಬಾಲಾರೂಪವು ಸೂಚಿತವಾಗಿದೆಯೆಂದೂ ಮತ್ತು ಪಂಚದಶೀಮಂತ್ರದ 'ಹ' ಎಂಬ ಅಕ್ಷರವು ಇಲ್ಲಿ ಪ್ರಸಕ್ತವಾದುದೆಂದೂ ಹೇಳುತ್ತಾರೆ. 'ತನುಮಧ್ಯಾಂ ಮಹಾಲಕ್ಷ್ಮೀಂ ಬಾಲಾಂ ತ್ರಿಪುರಸುಂದರೀಂ', ಸೌ.ಸಂ.). ಐಂ, ಕ್ಲೀಂ, ಸೌಃ, ಶ್ರೀಂ, ಹ್ರೀಂ ಎಂಬ ಐದು ಬೀಜಾಕ್ಷರಗಳು ಈ ವಿಶೇಷಣದಲ್ಲಿ ಧ್ವನಿತವಾಗುವುವೆಂದೂ ಹೇಳುವರು.

ತವ ತಪಸೋऽಧಿಜಾತಃ ವನಸ್ಪತಿಃ ಬಿಲ್ವಃ – ಇಲ್ಲಿ ಲಕ್ಷ್ಮಿಯ ತಪಸ್ಸು ಮುಖ್ಯವಾದ ವಿವರ. ತಪಸ್ಸೆಂದರೆ ಯಾವುದಾದರೂ ಉದ್ದೇಶದಿಂದ ಕಷ್ಟಕರವಾದ ಕೆಲಸವನ್ನು ಕೈಗೊಳ್ಳುವುದು. ಈ ಮಾತಿಗೆ ಮೂಲ 'ತಪ್' ಎನ್ನುವ ಧಾತು; ಎಂದರೆ ಉರಿಯುವುದು (ತಪತಿ, ತಪಯತಿ); ಮೈ ಮನಸ್ಸುಗಳಲ್ಲಿ ಕಾವನ್ನು ಒದಗಿಸಿಕೊಳ್ಳುವುದು ('ವಿವಿಧ-ಕ್ಲೇಶ-ಜನಕಂ ಕರ್ಮ'). ತಪಸ್ಸೆಂದರೆ ಬ್ರಹ್ಮನ ಸಂಕಲ್ಪವೂ ಆಗುತ್ತದೆ.

ಲಕ್ಷ್ಮಿಯು ತಪಸ್ಸು ಮಾಡಿದ ಮತ್ತು ಅದರಿಂದ ಬಿಲ್ವವೃಕ್ಷ ತೋರಿಕೊಂಡ ಸಂದರ್ಭ ಯೋಗಿನೀತಂತ್ರದ ಪ್ರಕಾರ (1,5) ಇದು. ವಿಷ್ಣುವಿಗೆ ಇಬ್ಬರು ಪತ್ನಿಯರು, ಲಕ್ಷ್ಮೀ ಮತ್ತು ಸರಸ್ವತಿ. ವಿಷ್ಣುವಿಗೆ ಸರಸ್ವತಿಯಲ್ಲೇ ಹೆಚ್ಚಿನ ಪ್ರೀತಿ. ಇದನ್ನು ಕಂಡು ಅಸೂಯೆಯಿಂದ ಲಕ್ಷ್ಮಿಯು ಶ್ರೀಶೈಲಕ್ಕೆ ಹೋಗಿ ಅಲ್ಲಿ ಶಿವನನ್ನು ಕುರಿತು ತಪಸ್ಸು ಮಾಡಿದಳು. ಅವಳ ತಪಸ್ಸಿಗೆ ಮೆಚ್ಚಿ, ಶಿವನು ವಿಷ್ಣುವಿನ ವಕ್ಷಃಸ್ಥಳದಲ್ಲಿ ಅವಳಿಗೆ ನಿತ್ಯವಾಸವನ್ನು ಅನುಗ್ರಹಿಸಿದನು. ಲಕ್ಷ್ಮಿಯು ಬಹು ಕಾಲ ನಿಂತಲ್ಲಿಯೇ ನಿಂತು ತಪಸ್ಸು ಮಾಡುತ್ತಿದ್ದುದರಿಂದ ಒಂದು ಮರವಾಗಿ ಪರಿಣಮಿಸಿದಳು; ಅದೇ ಬಿಲ್ವವೃಕ್ಷ. ಶಿವನಿಗೂ ಲಕ್ಷ್ಮಿಗೂ ಪ್ರಿಯವಾದ ವೃಕ್ಷವಾಯಿತು. ವಾಮನ ಪುರಾಣದ ಒಕ್ಕಣೆ



ಶ್ರೀ ಯಂತ್ರ

ಇನ್ನೊಂದು ಬಗೆಯಾಗಿದೆ. ಕಾಂಚೀಮಂಡಲದಲ್ಲಿ ನೀಲಾ ನದಿಯ ದಡದ ಮೇಲೆ ಲಕ್ಷ್ಮಿಯು ಲೋಕಹಿತಾರ್ಥವಾಗಿ ಉಗ್ರವಾದ ತಪಸ್ಸನ್ನು ಮಾಡಿದಳು; ಅವಳ ಬಲಗೈಯಿಂದ ಬಿಲ್ವವೃಕ್ಷ ಬೆಳೆದುಬಂದಿತು.

ಬೃಹದ್ಧರ್ಮ ಪುರಾಣದ ಪ್ರಕಾರ, ಲಕ್ಷ್ಮಿಯು ಕಪಾಲಮೋಚನ ಕ್ಷೇತ್ರದಲ್ಲಿ ಶಿವನನ್ನು ಕುರಿತು ತಪಸ್ಸು ಮಾಡಿದಳು. ಶಿವನು ಅವಳ ತಪಸ್ಸಿಗೆ ಮೆಚ್ಚಿ, ತನಗೆ ಪ್ರಿಯವಾದ ಬಿಲ್ವವೃಕ್ಷವನ್ನೇ ಅವಳಿಗೆ ಕೊಟ್ಟುಬಿಟ್ಟನು. ವಹ್ನಿ ಪುರಾಣದಲ್ಲಿರುವ ಕಥೆ, ಲಕ್ಷ್ಮಿಯು ಹಸುವಿನ ರೂಪ ಧರಿಸಿ ಅಡ್ಡಾಡುತ್ತಿರುವಾಗ, ಅವಳಿಂದ ಬಿದ್ದ ಸೆಗಣಿಯ ಮೇಲೆ ಬಿಲ್ವವೃಕ್ಷವು ಹುಟ್ಟಿತೆಂದು. ಆದರೆ ಕಾಲಿಕಾಪುರಾಣ, ಬ್ರಹ್ಮಾಂಡಪುರಾಣ, ಸ್ಕಂದಪುರಾಣಗಳು ಲಕ್ಷ್ಮಿಯು ಬಿಲ್ವವೃಕ್ಷಗಳ ವನದಲ್ಲಿ ತಪಸ್ಸು ಮಾಡಿದಳೆಂದು ಅಷ್ಟೇ ಹೇಳುತ್ತವೆ.

ಬಿಲ್ವವೃಕ್ಷವೇನೋ ಲಕ್ಷ್ಮಿಗೆ ಪ್ರಿಯವಾದುದೆಂದು ಪ್ರತೀತಿ. ಹೀಗೆಂದು ಅದರ ಕಾಯನ್ನು 'ಶ್ರೀಫಲ', 'ಲಕ್ಷ್ಮೀಫಲ' ಎಂದು ಕರೆಯುತ್ತಾರೆ. ಅದು ಲಕ್ಷ್ಮಿಯ ವಿಶೇಷವಾದ ಸಾನ್ನಿಧ್ಯವಿರುವ ಮರವೆಂದೂ ನಂಬಿಕೆ; ತುಲಸೀ ಗಿಡದಲ್ಲಿ ಪಾರ್ವತಿಯಿರುವಂತೆ, ನೆಲ್ಲಿಯ ಮರದಲ್ಲಿ ಸರಸ್ವತಿಯಿರುವಂತೆ. ಬಿಲ್ವಪತ್ರೆಯಲ್ಲಿ ಮೂರು ಎಲೆಗಳು ಕೂಡಿಕೊಂಡಿರುವುವಷ್ಟೆ. ಮೇಲಿನ ಎಲೆ ರುದ್ರನ ಪ್ರತೀಕವೆಂದೂ, ಎಡಭಾಗದ ಎಲೆ ವಿಷ್ಣುವಿನ ಪ್ರತೀಕವೆಂದೂ, ಬಲಭಾಗದ ಎಲೆ ಬ್ರಹ್ಮನ ಪ್ರತೀಕವೆಂದೂ ಹೇಳುತ್ತಾರೆ; ಅದರ ತೊಟ್ಟು ಆದಿಶಕ್ತಿಯ ರೂಪವಂತೆ (ಜ್ಞಾನಭೈರವತಂತ್ರ, 6ನೆಯ ಪಟಲ). ವೈಶಾಖ ಮಾಸದ ಶುಕ್ಲಪಕ್ಷದ ತದಿಗೆಯೆಂದು ಬಿಲ್ವವೃಕ್ಷ ಮೈದಳೆಯಿತೆಂಬ ನಂಬಿಕೆಯೂ ಇದೆ.

ಬಿಲ್ವವನ್ನು ಇಲ್ಲಿ ವನಸ್ಪತಿಯೆಂದೂ ಕರೆಯಲಾಗಿದೆ. ಗಿಡಮರಗಳ ವರ್ಗೀಕರಣದಲ್ಲಿ ವನಸ್ಪತಿಯೆಂದರೆ ಹೂವಿಲ್ಲದೆ ಬರಿಯ ಕಾಯಿಯಿರುವ ಮರ ('ಅಪುಷ್ಪಾಃ ಫಲವಂತಃ'). ಶಿವಪೂಜೆಯಲ್ಲಿ ಇದರ ಎಲೆಗಳನ್ನು ವಿಶೇಷವಾಗಿ ಬಳಸುತ್ತಾರೆ. ಕಾಯಿಗಳು, ಒಳಗಿನ ತಿರುಳು, ಔಷಧಕ್ಕೆ ಬರುತ್ತವೆ. ಲಕ್ಷ್ಮಿಯ ತಪಸ್ಸಿನಿಂದಲೇ ಈ ಮರದ ಕಾಯಿಗಳಿಗೆ ರೋಗನಾಶಕ ಶಕ್ತಿಯು ಒದಗಿತೆಂದೂ ಹೇಳುತ್ತಾರೆ ('ತ್ವತ್ತಪಸಾ ಸಶಕ್ತಿಕಾನಿ', ಸೌ.ಸಂ.).

ತಪಸಾ ತಸ್ಯ ಫಲಾನಿ ಮಾ ಯಾ ಅಂತರಾ ಯಾಃ ಬಾಹ್ಯಾಃ ಚ ಅಲಕ್ಷ್ಮೀಃ ನುದಂತು – ಎರಡನೆಯ ಬಾರಿ ಲಕ್ಷ್ಮಿಯ ತಪಸ್ಸಿನ ಉಲ್ಲೇಖ ಬಂದಾಗ ಅವಳ ಸಂಕಲ್ಪ ಅಥವಾ ಅನುಗ್ರಹವೆಂದು ಅರ್ಥ ('ತ್ವದನುಗ್ರಹೇಣ ಇತ್ಯರ್ಥಃ', ಸಾ.ಭಾ.). ಅಥವಾ ತಪಸ್ಸೆಂದರೆ ಆರಾಧನೆ, ಪೂಜೆಯೆಂದೂ, ಲಕ್ಷ್ಮಿಯ ಪೂಜೆಯಿಂದ ಸಂಸ್ಕೃತವಾದ ಬಿಲ್ವಫಲಗಳು ದೌರ್ಭಾಗ್ಯವನ್ನು ತೊಲಗಿಸಲಿ ಎಂದೂ ಅರ್ಥ ಮಾಡುತ್ತಾರೆ (ಶ್ರೀ.ಸೂ.ಭಾ.).

ಅಲಕ್ಷ್ಮಿಯೆಂಬ ಮಾತಿಗೆ ವಿವರಣೆ ಮೇಲೆ ಬಂದಿದೆ. ಇಲ್ಲಿ 'ಅಶ್ರಿಯಃ' (ಸಾ.ಭಾ.), 'ದುರ್ಗತಿಃ' (ಪೃ.ಭಾ.) ಎಂದು ಅರ್ಥ ಮಾಡಿದ್ದಾರೆ. ಎರಡು ಬಗೆಯಾದ ಅಲಕ್ಷ್ಮಿಯನ್ನು ಇಲ್ಲಿ

ಸೂಚಿಸಿದ್ದಾರೆ – ಒಳಗಿನ (ಎಂದರೆ ಮನಸ್ಸಿಗೆ, ಅಹಂಕಾರಕ್ಕೆ, ಬುದ್ಧಿಗೆ ಸಂಬಂಧಪಟ್ಟ) ದೌರ್ಭಾಗ್ಯಗಳು ಮತ್ತು ಹೊರಗಿನ (ಇಂದ್ರಿಯಗಳು, ದೇಹ, ಹೊರ ಆವರಣ ಇವುಗಳಿಗೆ ಸಂಬಂಧಪಟ್ಟ) ದೌರ್ಭಾಗ್ಯಗಳು. 'ಅಂತರಾಃ' ಎಂದರೆ ಒಳಗಣ ('ಅಂತರ್ಗತಾಃ'), ಅಜ್ಞಾನ, ಪಾಪ ಮೊದಲಾದುವು ('ಹೃದ್ಗತಾಜ್ಞಾನಪಾಪಾದಿರೂಪಿಣ್ಯಃ', ಸೌ.ಸಂ.) 'ಬಾಹ್ಯಾಃ' ಎಂದರೆ ಹೊರಗಣ ('ಬಹಿರಿಂದ್ರಿಯಸಂಬಂಧಿನ್ಯಃ'); ಬಡತನ, ರೋಗ ಮೊದಲಾದುವು ('ದಾರಿದ್ರ್ಯಾದಿರೂಪಿಣ್ಯಃ' ಸೌ.ಸಂ.).

ಮೇಲೆ ಮಾಡಿಕೊಂಡ ಅನ್ವಯ 'ಯಾಃ ಅಂತರಾಃ ಅಲಕ್ಷ್ಮೀಃ, ಯಾಃ ಬಾಹ್ಯಾಃ ಅಲಕ್ಷ್ಮೀಃ ಚ' ಎಂದು. ಯಾವ ಒಳಗಣ ದೌರ್ಭಾಗ್ಯಗಳಿವೆಯೋ ಯಾವ ಹೊರಗಣ ದೌರ್ಭಾಗ್ಯಗಳಿವೆಯೋ ಅವೆಲ್ಲವನ್ನೂ ಲಕ್ಷ್ಮಿಯ ಅನುಗ್ರಹವು ತೊಲಗಿಸಲಿ ಎಂದು ತಾತ್ಪರ್ಯ. ಇಲ್ಲಿ 'ಮಾ' ಎಂಬ ಮಾತನ್ನು ಬೇರೆಯಾಗಿರಿಸಿಕೊಂಡು, 'ಮಾಂ' (ಮಾಂ ಪ್ರತಿ), 'ನನ್ನ ವಿಷಯವಾಗಿ' ಅಥವಾ 'ಮಯಿ' (ನನ್ನಲ್ಲಿ) ಎಂದು ಗ್ರಹಿಸುತ್ತಾರೆ; ಎಂದರೆ ನನ್ನಲ್ಲಿರುವ ದೌರ್ಭಾಗ್ಯಗಳು ಎಂದರ್ಥ (ಪೃ.ಭಾ.; ಸೌ.ಸಂ.).

ಆದರೆ 'ಮಾಯಾಂತರಾಯಾಶ್ಚ ಬಾಹ್ಯಾ ಅಲಕ್ಷ್ಮೀಃ' ಎಂಬುದನ್ನು ಇನ್ನೊಂದು ಬಗೆಯಾಗಿಯೂ ಬಿಡಿಸುವುದುಂಟು. 'ಮಾಯಾ+ಅಂತರಾಯಾಃ ಚ ಬಾಹ್ಯಾಃ ಅಲಕ್ಷ್ಮೀಃ', ಇಲ್ಲಿ ಮಾಯಾ ಎಂದರೆ ಅಜ್ಞಾನ, ಮತ್ತು 'ಅಂತರಾಯಾಃ' ಎಂದರೆ ಅದರಿಂದ ಒದಗಿದ ಅಡ್ಡಿ-ಆತಂಕಗಳು. ಇವು ತೊಲಗಲಿ ('ನುದಂತು' ಎನ್ನುವುದರ ಜೊತೆಗೆ ಸೇರಿಸಿಕೊಂಡು) ಮತ್ತು ಅಲಕ್ಷ್ಮಿಯು (ಎಂದರೆ ದೌರ್ಭಾಗ್ಯವು) ನನ್ನಿಂದ ಹೊರಗಿರಲಿ ('ಬಾಹ್ಯಾ'). ಇನ್ನೂ ಒಂದು ಬಗೆಯಾಗಿ ಪದಗಳನ್ನು ಬಿಡಿಸುತ್ತಾರೆ. 'ಮಾಯಾ', 'ಅಂತರಾಃ' 'ಯಾಃ', ಎಂದರೆ ಯಾವ ಮಾಯೆಯೂ (ಅಜ್ಞಾನವೂ) ಮತ್ತು ಅದರ ಫಲವಾಗಿ ಒಳಗೆ (ಎಂದರೆ ಮನಸ್ಸಿನಲ್ಲಿ) ಕೂಡಿಕೊಂಡ ಕೊಳೆಗಳೂ ಇರುವುವೋ ಅವು ('ಅಜ್ಞಾನಂ ಚ ತತ್ಕಾರ್ಯಾಣಿ ಚ ಅಂತರಿಂದ್ರಿಯ ಸಂಬಂಧಿನ್ಯಃ'; ಸಾ.ಭಾ.), ಇವೆಲ್ಲವೂ ತೊಲಗಲಿ ('ನುದಂತು' 'ನಿರಾಸಯಂತು', ಸೌ.ಸಂ.; 'ಅಪನುದಂತು', 'ನಿವಾರಯಂತು', ಸಾ.ಭಾ.).

ಈ ಮಂತ್ರದ ಋಷಿ ಆನಂದ; ಛಂದಸ್ಸು ತ್ರಿಷ್ಟುಭ್; ದೇವತೆಯು ಮಹಾಲಕ್ಷ್ಮಿ. 'ಅಂ' ಎಂಬುದು ಮಂತ್ರದ ಬೀಜ; 'ಶ್ರೀಂ' ಎಂಬುದು ಶಕ್ತಿ, 'ಹ್ರೀಂ' ಎಂಬುದು ಕೀಲಕ. ಧ್ಯಾನಶ್ಲೋಕ ಇದು –

ಉದ್ಯದಾದಿತ್ಯಸಂಕಾಶಾಂ ಬಿಲ್ವಕಾನನಮಧ್ಯಗಾಮ್ ।
ತನುಮಧ್ಯಾಂ ಶ್ರಿಯಂ ಧ್ಯಾಯೇದಲಕ್ಷ್ಮೀಪರಿಹಾರಿಣೀಮ್ ॥

ಈ ಮಂತ್ರದಿಂದ ಲಕ್ಷ್ಮೀನಾಮಾವಳಿಗೆ ಸೇರಿರುವ ನಾಮ ಒಂದೇ –

1. (32) ಆದಿತ್ಯವರ್ಣಾಯೈ ನಮಃ

ಮಂತ್ರ 7

ಉಪೈತು ಮಾಂ ದೇವಸಖಃ ಕೀರ್ತಿಶ್ಚ ಮಣಿನಾ ಸಹ ।
ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್ ಕೀರ್ತಿಂವೃದ್ಧಿಂ ದದಾತು ಮೇ ॥

(ದೇವನ ಸ್ನೇಹಿತನೂ, ಕೀರ್ತಿಯೂ ಮಣಿಯೊಂದಿಗೆ ನನ್ನನ್ನು ಸೇರಲಿ. ಈ ರಾಜ್ಯದಲ್ಲಿ ತೋರಿಕೊಂಡಿದ್ದೇನೆ; ನನಗೆ ಯಶಸ್ಸನ್ನೂ ಸಮೃದ್ಧಿಯನ್ನೂ ಕೊಡಲಿ.)

ದೇವಸಖಃ – ದೇವನ (ಎಂದರೆ ಶಿವನ) ಸ್ನೇಹಿತನಾದ ಕುಬೇರ ಇಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ. ದೇವ ಅಥವಾ ಮಹಾದೇವ ಎಂಬುದು ಸಾಮಾನ್ಯವಾಗಿ ಶಿವನನ್ನು ಸೂಚಿಸುತ್ತದೆ ; ಕುಬೇರನು ಅವನ ಮಿತ್ರನೆಂಬುದೂ ಪ್ರಸಿದ್ಧವಾದ ವಿವರವೇ ('ದೇವಶಬ್ದೋ ಮಹಾದೇವೇ ರೂಢಃ', 'ಕುಬೇರಃ ತ್ರ್ಯಂಬಕಸಖಃ', ಅಂ.ವ್ಯಾ.). ಕುಬೇರನು ವಿಶ್ವವಸ್ ಮತ್ತು ಇಳವಿಲ ಎಂಬ ದಂಪತಿಗಳ ಮಗನಾಗಿ, ಶಿವನನ್ನು ಕುರಿತು ತಪಸ್ಸು ಮಾಡಿ, ನವನಿಧಿಗಳ ಒಡೆಯನಾದನೆಂದು ಕಥೆ. ಅವನ ತಪಸ್ಸಿಗೆ ಮೆಚ್ಚಿದ ಶಿವನು ಅವನನ್ನು ಉತ್ತರ ದಿಕ್ಕಿಗೆ ಅಧಿಪತಿಯನ್ನಾಗಿ ಮಾಡಿದನೆಂದೂ ತನ್ನ ಸ್ನೇಹಿತನೆಂದು ಗೌರವಿಸಿದನೆಂದೂ ಈಶಾನಸಂಹಿತೆಯಲ್ಲಿದೆ. ಅವನ ಮೂರ್ತಿ ಲಕ್ಷಣದಲ್ಲಿ ಡೊಳ್ಳು ಹೊಟ್ಟೆಯ ಕುಬ್ಜ, ಮೂರು ಕಾಲುಗಳು (ತ್ರಿಪಾತ್), ಎಂಟು ಹಲ್ಲುಗಳು (ಅಷ್ಟದಂತ), ಕುಡಿದು ಕೆಂಪಡರಿದ ಕಣ್ಣುಗಳು (ಕೇಕರಲೋಚನ) ಎಂಬ ವಿವರಗಳಿವೆ. ಯಕ್ಷರ ರಾಜನೆಂದು ಇವನ ಖ್ಯಾತಿಯಿದೆ. ಶಿವನ ಆದೇಶದಿಂದ ಲಕ್ಷ್ಮಿಯು ಇವನ ವಶಳಾದಳಂತೆ, ಆದ್ದರಿಂದ ಕುಬೇರನು ಸಂಪತ್ತನ್ನು ಜನರಿಗೆ ನೀಡುವ ಅಧಿಕಾರವನ್ನು ಪಡೆದುಕೊಂಡನಂತೆ ('ಶಿವಾರ್ಥಂ ತು ಮಹಾಲಕ್ಷ್ಮೀಃ ಕುಬೇರಸ್ಯ ವಶೇ ಸ್ಥಿತಾ', 'ಲಕ್ಷ್ಮೀಪ್ರದಾನಾಯ ಅಧಿಕೃತಃ' ಈಶಾನಸಂಹಿತೆ.).

ಕೀರ್ತಿಃ – ಕೀರ್ತಿಯೆಂದರೆ ಇಲ್ಲಿ ಯಶಸ್ಸಿನ ಅಭಿಮಾನದೇವತೆ ('ಕೀರ್ತ್ಯಭಿಮಾನಿನೀ ತದಾಖ್ಯಾ', ಸಾ.ಭಾ.; 'ಯಶೋಭಿಮಾನಿದೇವತಾ', ಪೃ.ಭಾ.). ಪುರಾಣಗಳಲ್ಲಿ ದಕ್ಷಪ್ರಜಾಪತಿಯ ಮಗಳೆಂದೂ, ಯಮಧರ್ಮನ ಹೆಂಡತಿಯೆಂದೂ, ಮಾತೃಕೆಯರಲ್ಲಿ ಒಬ್ಬಳೆಂದೂ, ದೇವತಾಶಕ್ತಿಗೆ ಪ್ರತೀಕವೆಂದೂ ನಿರ್ದೇಶನವಿದೆ. ಇವಳು ಲಕ್ಷ್ಮಿಯ ಪರಿವಾರದಲ್ಲಿ ಒಬ್ಬಳೆಂದೂ ಪ್ರತೀತಿ; ಇವಳೊಂದಿಗೆ ಇತರ ಕಿಂಕರಿಯರು ಮತಿ (ಎಂದರೆ ಬುದ್ಧಿ), ದ್ಯುತಿ (ಕಾಂತಿ), ಪುಷ್ಟಿ (ಬೆಳವಣಿಗೆಗೆ ಕಾರಣ), ಸಮೃದ್ಧಿ, ತುಷ್ಟಿ, ಆರೋಗ್ಯ, ಜಯ, ಶ್ರದ್ಧಾ ಮೊದಲಾದವರು (ಭಾರ್ಗವಸಂಹಿತೆ, ಅಂ.ವ್ಯಾ.ದಲ್ಲಿ ಉದ್ಧೃತ).

ಮಣಿನಾ ಸಹ – ಮಣಿಯೆಂದರೆ, ಯಾವುದನ್ನು ಮೈಮೇಲೆ ಧರಿಸಿಕೊಂಡರೆ ಪಾಪವೂ, ದೌರ್ಭಾಗ್ಯವೂ ತೊಲಗುವುದೋ ಅದು ('ಧಾರಣಾತ್ ಪಾಪಾಲಕ್ಷ್ಮೀವಿನಾಶಕಂ', ರಾಜವಲ್ಲಭ). ಇಲ್ಲಿ ಚಿಂತಾಮಣಿ (ಮನಸ್ಸಿನ ಬಯಕೆಗಳನ್ನೆಲ್ಲ ಈಡೇರಿಸುವ ಸಾಮರ್ಥ್ಯವುಳ್ಳ ಮಣಿ);

ಅಮೃತಮಂಥನ ಸಂದರ್ಭದಲ್ಲಿ ಲಕ್ಷ್ಮಿಯೊಂದಿಗೆ, ಲಕ್ಷ್ಮಿಯ ಅಂಶವಾಗಿ ಸಮುದ್ರದಿಂದ ಹೊರಬಂದ ಅನರ್ಘ್ಯ ಪದಾರ್ಥಗಳಲ್ಲೊಂದು. ಹಾಗೇ ಅದೇ ಸಂದರ್ಭದಲ್ಲಿ ಒದಗಿ ಬಂದ ಕಾಮಧೇನು (ಸ್ವರ್ಗಲೋಕದ ಹಸು), ಕಲ್ಪವೃಕ್ಷ (ಸ್ವರ್ಗಲೋಕದ ಮರ), ಸುಧೆ, ಐರಾವತ (ದೇವೇಂದ್ರನ ಆನೆ), ಉಚ್ಚೈಃಶ್ರವಸ್ಸು (ದೇವೇಂದ್ರನ ಕುದುರೆ), ಅಪ್ಸರೆಯರು, ಕೌಸ್ತುಭ (ವಿಷ್ಣುವಿನ ಎದೆಯ ಮೇಲಣ ಆಭರಣ) ಮತ್ತು ಚಂದ್ರ ಇವೆಲ್ಲವೂ ಲಕ್ಷ್ಮಿಯ ಅಂಶಗಳೆಂದೇ ಪ್ರತೀತಿ (ಸೌರಸಂಹಿತೆ).



ಮಣಿಮಾಲಿನೀ ಲಕ್ಷ್ಮೀ ಯಂತ್ರ

ಕುಬೇರನೊಂದಿಗೆ 'ಮಣಿ'ಯನ್ನು ಉಲ್ಲೇಖಿಸಿರುವುದರಿಂದ ಇಲ್ಲಿ 'ಮಣಿ'ಯೆಂದರೆ ಮಣಿಭದ್ರನೆಂಬ ಯಕ್ಷನೆಂದೂ ಒಂದು ವಿವರಣೆಯಿದೆ (ಸಾ.ಭಾ.). ಮಣಿಭದ್ರಯಕ್ಷನು ಕುಬೇರನ ಕೋಶಾಧ್ಯಕ್ಷನೆಂದೂ, ನೀರಿನ ಒಡೆಯನೆಂದೂ (ಜಲೇಂದ್ರ), ಪ್ರವಾಸಿಗಳಾದ ವಣಿಗ್ಜನರ ರಕ್ಷಕನೆಂದೂ ಪ್ರಸಿದ್ಧನಾಗಿದ್ದಾನೆ. ಅವನನ್ನು ತ್ರಿಕಾಂಡಶೇಷವು ಜಂಭಲನೆಂದೂ ಹೆಸರಿಸಿದೆ. ಮಹಾಭಾರತದಲ್ಲಿ ಅವನು ಕಾಡುಮೇಡುಗಳ, ಗಿರಿಸರೋವರಗಳ, ಅಭಿಮಾನಿ ದೇವತೆ. ಯಕ್ಷರ ಒಡೆಯನೆಂದೂ ಅವನನ್ನು ಕರೆದು ಅವನ ಅನುಗ್ರಹವನ್ನು ಜನರು ಬಯಸುತ್ತಿದ್ದರು ('ತಥಾ ನೋ ಯಕ್ಷರಾಡ್ ಅದ್ಯ ಮಣಿಭದ್ರಃ ಪ್ರಸೀದತು', ಮ.ಭಾ. 3,64,127).

ಉಪೈತು, ಉಪ + ಏತು — ಲಕ್ಷ್ಮಿಯ ಸಾನ್ನಿಧ್ಯವನ್ನು ಬಯಸಿ ಮಾಡಿರುವ ಸ್ತುತಿಯಲ್ಲಿ ಕುಬೇರನೂ, ಕೀರ್ತಿಯೂ, ಮಣಿಭದ್ರನೂ ಅವಳ ಪರಿವಾರದಲ್ಲಿ ಸೇರಿಬರಲೆಂದು ಪ್ರಾರ್ಥಿಸಿರುವುದು ಸಹಜವೇ.

ಪ್ರಾದುರ್ಭೂತಃ ಅಸ್ಮಿ ಅಸ್ಮಿನ್ ರಾಷ್ಟ್ರೇ — ಈ ರಾಜ್ಯದಲ್ಲಿ ಹುಟ್ಟಿದ್ದೇನೆ, ತೋರಿ ಕೊಂಡಿದ್ದೇನೆ; ಎಂದರೆ ಸಾಧಕನು ವಾಸಮಾಡುವ ಜನಪದವಾದರೂ ಆಗಬಹುದು (ಸಾ.ಭಾ.), ಮರ್ತ್ಯಲೋಕವೂ ಆಗಬಹುದು (ಪೃ.ಭಾ.) ಭೂಮಂಡಲವೂ ಆಗಬಹುದು (ಶ್ರೀ.ಗು.ರ.). ಪ್ರಾದುರ್ಭೂತನೆಂದರೆ 'ಉತ್ಪನ್ನ' (ಸಾ.ಭಾ.), 'ಜಾತ' (ಪೃ.ಭಾ.).

ಕೀರ್ತಿಂ ಋದ್ಧಿಂ ಮೇ ದದಾತು — ಕೀರ್ತಿಯೆಂದರೆ ದಿಗಂತವಿಶ್ರಾಂತವಾದ ಯಶಸ್ಸು (ಪೃ.ಭಾ.; ಸಾ.ಭಾ.). ಋದ್ಧಿಯೆಂದರೆ ಸಮೃದ್ಧಿ ('ಸರ್ವಭೋಗ್ಯ ಸಮೃದ್ಧಿ', ಸಾ.ಭಾ.), ಎಲ್ಲ ಪ್ರಾಪಂಚಿಕ ಭೋಗಗಳನ್ನೂ ಅನುಭವಿಸುವ ಸೌಲಭ್ಯ. ಋದ್ಧಿಯೆಂದರೆ ಅಣಿಮಾ, ಮಹಿಮಾ ಮೊದಲಾದ ಎಂಟು ಸಿದ್ಧಿಗಳೆಂದೂ ಹೇಳುತ್ತಾರೆ ('ಅಷ್ಟೈಶ್ವರ್ಯಸಮೃದ್ಧಿ', ಪೃ.ಭಾ.). ಕೀರ್ತಿಯನ್ನು ದೇವತೆಯೆಂದು ಬಗೆದಂತೆಯೇ, ಋದ್ಧಿಯನ್ನೂ ಕುಬೇರನ ಹೆಂಡತಿಯೆಂದು ಮಹಾಭಾರತ ಮತ್ತು ಹರಿವಂಶಗಳಲ್ಲಿ ಹೇಳಿದೆ.

ಈ ಮಂತ್ರವು ಲಕ್ಷ್ಮಿಯನ್ನು ಉದ್ದೇಶಿಸಿಯೇ ಹೇಳಿದೆ ('ಹೇ ಶ್ರೀಃ', ಸಾ.ಭಾ.; ಅಂ.ವ್ಯಾ.). ಮನುಷ್ಯಲೋಕದಲ್ಲಿ ಹುಟ್ಟಿರುವ ಸಾಧಕನಿಗೆ ಮನುಷ್ಯಸಾಧ್ಯವಾದ ಎಲ್ಲ ಸಿದ್ಧಿ, ಸಮೃದ್ಧಿ, ಪ್ರಸಿದ್ಧಿ, ಸೌಖ್ಯ, ಸೌಭಾಗ್ಯಗಳು ಒದಗಿ ಬರಲೆಂಬುದು ಮಂತ್ರದ ತಾತ್ಪರ್ಯ. ಕುಬೇರನು ಸಮೃದ್ಧಿಯನ್ನೂ, ಕೀರ್ತಿಯು ಪ್ರಸಿದ್ಧಿಯನ್ನೂ, ಮಣಿಯು ಸೌಖ್ಯವನ್ನೂ ಪ್ರತಿನಿಧಿಸುವ ತತ್ತ್ವಗಳು. ಇವೆಲ್ಲವೂ ಲಕ್ಷ್ಮಿಯ ಅನುಗ್ರಹದಿಂದಲೇ ಉಂಟಾಗುವುವೆಂದು, ಲಕ್ಷ್ಮಿಯನ್ನು ಬೇಡಿಕೊಂಡಿರುವ ಭಾವ ಇದು.

ಈ ಮಂತ್ರದ ಋಷಿ ಕುಬೇರ; ಛಂದಸ್ಸು ಅನುಷ್ಟುಪ್; ದೇವತೆಯು ಮಣಿಮಾಲಿನೀ-ಮಹಾಲಕ್ಷ್ಮಿ. 'ಓಂ' ಮತ್ತು 'ಶ್ರೀಂ' ಎಂಬುವು ಬೀಜಗಳು ; 'ಮಂ' ಮತ್ತು 'ಬ್ಲೂಂ' ಎಂಬುವು ಶಕ್ತಿ; 'ಶ್ರೀಂ' ಎಂಬುದು ಕೀಲಕ. ಧ್ಯಾನಶ್ಲೋಕ ಹೀಗಿದೆ —

ರಾಜರಾಜೇಶ್ವರೀಂ ಲಕ್ಷ್ಮೀಂ ವರದಾಂ ಮಣಿಮಾಲಿನೀಮ್ ।
ದೇವೀಂ ದೇವಪ್ರಿಯಾಂ ಕೀರ್ತಿಂ ವಂದೇ ಕಾಮ್ಯಾರ್ಥಸಿದ್ಧಯೇ ॥

ಈ ಮಂತ್ರದಿಂದ ಹೊರಹೊರಟ ಎರಡು ಹೆಸರುಗಳು ಲಕ್ಷ್ಮೀನಾಮಾವಳಿಯಲ್ಲಿ ಸೇರಿವೆ.

1. (33) ಕೀರ್ತ್ಯೈ ನಮಃ
2. (34) ಋದ್ಧ್ಯೈ ನಮಃ

ಮಂತ್ರ 8

ಕ್ಷುತ್‌ಪಿಪಾಸಾಮಲಾಂ ಜ್ಯೇಷ್ಠಾಂ ಅಲಕ್ಷ್ಮೀಂ ನಾಶಯಾಮ್ಯಹಮ್ ।
ಅಭೂತಿಮಸಮೃದ್ಧಿಂ ಚ ಸರ್ವಾಂ ನಿರ್ಣುದ ಮೇ ಗೃಹಾತ್ ॥

(ಹಸಿವು, ಬಾಯಾರಿಕೆಗಳೇ ಮೊದಲಾದ ಕಷ್ಟಗಳನ್ನೂ ದೌರ್ಭಾಗ್ಯವನ್ನೂ (ನಿನ್ನ ಅನುಗ್ರಹದಿಂದ) ತೊಲಗಿಸಿಕೊಳ್ಳುವೆನು; ನೋವನ್ನೂ ಬಡತನವನ್ನೂ ನನ್ನ ಮನೆಯಿಂದ ಹೊರಗಟ್ಟು!)

ಹಸಿವು, ಬಾಯಾರಿಕೆಗಳನ್ನು ದೈಹಿಕವಾದ ಎಲ್ಲ ಕಷ್ಟಗಳಿಗೂ ಉಪಲಕ್ಷಣವಾಗಿ ಹೇಳಿದ್ದಾರೆ. ಉಳಿದಂತೆ ಮನುಷ್ಯನನ್ನು ಕಾಡುವ ಕಷ್ಟಕಾರ್ಪಣ್ಯ, ದೌರ್ಭಾಗ್ಯ, ದೌರ್ಮನಸ್ಯಗಳೆಲ್ಲವನ್ನೂ ಜ್ಯೇಷ್ಠಾಲಕ್ಷ್ಮೀಯೆಂದು ಕರೆದಿದ್ದಾರೆ. ಹಿಂದೆ ಒಂದು ಮಂತ್ರದಲ್ಲಿ ಇದನ್ನೇ ಅಲಕ್ಷ್ಮೀಯೆಂದು ಒಕ್ಕಣಿಸಿದ್ದರು. ಅಮೃತಮಂಥನ ಸಂದರ್ಭದಲ್ಲಿ ಲಕ್ಷ್ಮೀಗಿಂತ ಮೊದಲೇ ಈ ದೇವತೆ ಕಾಣಿಸಿಕೊಂಡಿದ್ದರಿಂದ ಇವಳನ್ನು ಅಕ್ಕನೆಂದು ('ಜ್ಯೇಷ್ಠಾ') ಕರೆದರು. ('ಶ್ರಿಯಃ ಪ್ರಾಗ್ ಉತ್ಪನ್ನಾಂ', ಸಾ.ಭಾ.; 'ಶ್ರಿಯಃ ಅಗ್ರಜಾಂ', ಪೃ.ಭಾ.).

ಜ್ಯೇಷ್ಠಾಲಕ್ಷ್ಮೀಯ ವಿಚಾರ ಹಿಂದೆಯೇ ಬಂದಿದೆ. ಪದ್ಮಪುರಾಣದ ಉತ್ತರ ಖಂಡದಲ್ಲಿ ಇವಳು ಅತ್ಯಂತ ಕುರೂಪಿಯಾಗಿ, ಕೃಶಳಾಗಿ, ಘೋರವಾಗಿ ಕಾಣಿಸಿಕೊಂಡವಳು; ಕೆಂಪು ಬಟ್ಟೆಯುಟ್ಟು, ಕೆಂಪು ಹೂಗಳನ್ನು ತೊಟ್ಟು ಇವಳು ಸಮುದ್ರದಿಂದ ಹೊರಬಂದೊಡನೆ, ಅಲ್ಲಿ ನೆರೆದಿದ್ದ ದೇವತೆಗಳನ್ನು ತನಗೆ ವಾಸಸ್ಥಳವನ್ನೊದಗಿಸಿಕೊಂಡಿರೆಂದು ಕೇಳಿದಳು. ದೇವತೆಗಳು ಅವಳಿಗೆ ಸೂಚಿಸಿದ ಎಡೆ, ಯಾವ ಮನೆಗಳಲ್ಲಿ ದಿನವೂ ಜಗಳ ನಡೆಯುವುದೋ, ಕಸ-ಕೊಳೆ ಯಥೇಚ್ಛವಾಗಿ ಇರುವುದೋ, ಕೆಟ್ಟ ಜನರು ವಾಸಮಾಡುವರೋ, ಕೆಟ್ಟ ಕೆಲಸಗಳು ಜರುಗುವುವೋ ಅಂಥ ಮನೆಗಳು! ಈ ಜ್ಯೇಷ್ಠಾಲಕ್ಷ್ಮೀಯಿಂದ ಬಡತನ ಹೆಚ್ಚುವುದಂತೆ; ಆದುದರಿಂದ ಇವಳು 'ದಾರಿದ್ರ್ಯ-ದಾ'. ಅವಳು ಇದ್ದಲ್ಲಿ ಕದನ, ಕಲಹ, ಕೆಟ್ಟತನ ; ಹಾಗೆ ಇವಳು 'ಕಲಿವಲ್ಲಭಾ'. ಇವಳು ಇದ್ದಲ್ಲಿ ಹೊಗೆ ಕಾಡುವುದರಿಂದ 'ಧೂಮಾವತಿ'. ಲಕ್ಷ್ಮೀಗೆ ಅತ್ಯಂತ ವಿರುದ್ಧವಾದ ದೇವತೆ ಜ್ಯೇಷ್ಠಾಲಕ್ಷ್ಮೀ. ಲಕ್ಷ್ಮೀಯು ಒಡೆತನ ಮಾಡುವ ನಕ್ಷತ್ರ ರೋಹಿಣಿ ; ಜ್ಯೇಷ್ಠಾಲಕ್ಷ್ಮೀಯ ಒಡೆತನದಲ್ಲಿರುವ ನಕ್ಷತ್ರ ಜ್ಯೇಷ್ಠಾ. ರೋಹಿಣಿ ನಕ್ಷತ್ರದಿಂದ ಶುಭ; ಜ್ಯೇಷ್ಠಾ ನಕ್ಷತ್ರದಿಂದ ಅಶುಭ. ಈ ನಕ್ಷತ್ರದ ಹೆಸರಿನಿಂದಲೇ ಅಲಕ್ಷ್ಮೀಗೆ ಜ್ಯೇಷ್ಠಾಲಕ್ಷ್ಮೀಯೆಂಬ ಹೆಸರು ಬಂದಿತೆಂದು ತೋರುತ್ತದೆ.

ಸರ್ವ ಐಶ್ವರ್ಯಕರಲಕ್ಷ್ಮೀ



ಸರ್ವ ಐಶ್ವರ್ಯಕರಲಕ್ಷ್ಮೀ ಯಂತ್ರ

ಅಭೂತಿಯೆಂದರೆ 'ಅನೈಶ್ವರ್ಯ' (ಪೃ.ಭಾ.), ಬಡತನ. ಅದನ್ನು 'ಅಸಂಭೂತಿ' ಯೆಂದೂ ನಿರ್ದೇಶಿಸಿದ್ದಾರೆ (ಸಾ.ಭಾ.); ಅಸಂಭೂತಿಯೆಂದರೆ ವಿನಾಶ, ಸೋಲು. ಅಸಮೃದ್ಧಿಯೆಂದರೆ ಏಳಿಗೆ ಇಲ್ಲದಿರುವುದು ('ವೃದ್ಧಿರಾಹಿತ್ಯ', ಪೃ.ಭಾ.). ಇವನ್ನು ತನ್ನ ಮನೆಯಿಂದ ಹೊಡೆದಟ್ಟೆಂದು ಸಾಧಕನು ಲಕ್ಷ್ಮೀಯನ್ನು ಬೇಡಿಕೊಳ್ಳುತ್ತಿದ್ದಾನೆ. 'ನಿರ್ಣುದ' ಎಂದರೆ 'ನಿಃಸಾರಯ', 'ಉಚ್ಚಾಟಯ', 'ನಿರಾಸಯ' (ಹೊರಗೆ ತಳ್ಳು, ಹೊಡೆದೋಡಿಸು, ತೊಲಗಿಸು).

ಈ ಮಂತ್ರದ ಋಷಿ ಮಹಾವಿಷ್ಣು; ಛಂದಸ್ಸು ಅನುಷ್ಟುಪ್ ; ದೇವತೆಯು ಸರ್ವೈಶ್ವರ್ಯಕಾರಿಣಿಯಾದ ಮಹಾಲಕ್ಷ್ಮೀ. 'ಕ್ಷುಂ' ಎನ್ನುವುದು ಬೀಜ ; 'ಹಂ' ಶಕ್ತಿ; 'ಶ್ರೀಂ' ಕೀಲಕ. ಧ್ಯಾನಶ್ಲೋಕವು ಹೀಗಿದೆ (ಲ.ಯಾ.) –

ಅಜ್ಞಾನಪಾತಕತಮಃಸ್ಥಿತಿಸೂರ್ಯರಶ್ಮಿಂ
ದೌರ್ಭಾಗ್ಯಭೂಧರವಿದಾರಣವಜ್ರಮೀಡೇ ।
ರೋಗಾರ್ತಿಘೋರಫಣಿಮರ್ದನಪಕ್ಷಿರಾಜಂ
ಲಕ್ಷ್ಮೀ ಪದದ್ವಯಮನರ್ಥಹರಂ ಸುಖಾರ್ಥೀ ॥

ಈ ಮಂತ್ರದಿಂದ ಯಾವ ಹೆಸರೂ ಲಕ್ಷ್ಮೀನಾಮಾವಳಿಗೆ ಸೇರಿಲ್ಲ.

ಮಂತ್ರ 9

ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಂ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥

(ಭೂಮಿಯೂ, ಸಹನಶೀಲಳೂ, ಸದಾ ಸಮೃದ್ಧಳೂ, ಪಶುಗಳಿಂದ ಕೂಡಿದವಳೂ, ಎಲ್ಲ ಪ್ರಾಣಿಗಳ ಒಡತಿಯೂ ಆದ ಲಕ್ಷ್ಮಿಯನ್ನು ಇಲ್ಲಿಗೆ ಬರಮಾಡಿಕೊಳ್ಳುವೆನು.)

ಗಂಧದ್ವಾರಾಂ, ದುರಾಧರ್ಷಾಂ – ಮೂಗಿನಿಂದ ಗ್ರಹಿಸಬಹುದಾದ ವಾಸನೆ ಪೃಥ್ವೀತತ್ತ್ವದ ಗುಣವಿಶೇಷ ('ಘ್ರಾಣಗ್ರಾಹ್ಯೋಗುಣಃ ಗಂಧಃ' ಸಾ.ಭಾ.). ಇದು ಗಂಧ; ಇದಕ್ಕೆ ಬಾಗಿಲಿನಂತಿರುವವಳು, ಎಂದರೆ 'ಗಂಧವತಿಯಾದ ಪೃಥ್ವೀ' (ಪೃ.ಭಾ.) ಭೂದೇವಿಯು ಲಕ್ಷ್ಮಿಯ ರೂಪಗಳಲ್ಲೊಂದು.

ಭೂಮಿಯ ವೈಶಿಷ್ಟ್ಯವೆಂದರೆ ಕ್ಷಮೆ, ತಾಳ್ಮೆ, ಸಹನೆ. ತನಗೆ ಪ್ರಾಣಿಗಳು ನಡೆಸುವ ಎಲ್ಲ ಅಪರಾಧಗಳನ್ನೂ ತಾಳಿಕೊಂಡು, ಸಜ್ಜನರು ದುರ್ಜನರೆಂಬ ಭೇದವಿಲ್ಲದೆ ಎಲ್ಲರಿಗೂ ಆಸರೆಯನ್ನಿತ್ತು ಸಲಹುವವಳು ಭೂಮಿತಾಯಿ. ಅವಳ ತಾಳ್ಮೆಯನ್ನು ಕೆಡಿಸುವುದು ಯಾರಿಂದಲೂ ಸಾಧ್ಯವಿಲ್ಲವೆಂಬ ಕಾರಣದಿಂದ ಅವಳು 'ದುರಾಧರ್ಷೆ' ('ಕೇನಾಪಿ ಧರ್ಷಿತುಂ ಅಶಕ್ಯಂ', ಸಾ.ಭಾ.). ಈ ಮಾತಿಗೆ ಇನ್ನೊಂದು ಅರ್ಥವನ್ನೂ ಹೇಳುತ್ತಾರೆ. ಯಾವ ಪ್ರಾಣಿಯಾಗಲಿ ಭೂಮಿಯನ್ನು ಮೀರಿ ಬದುಕುವಂತಿಲ್ಲ; ಯಾವ ಸಾಹಸವಾಗಲಿ ಭೂಮಿಗೆ ಎದುರಾಗಿ ನಡೆಯುವಂತಿಲ್ಲ ('ದುಃಸಾಹಂ', ಪೃ.ಭಾ.).

ಭಕ್ತರಲ್ಲದವರು ದೇವತೆಯನ್ನು ಪಡೆಯಲಾರರೆಂಬ ಅರ್ಥದಲ್ಲಿಯೂ ಅವಳು 'ದುರಾಧರ್ಷೆ' (ಶ್ರೀ.ಗು.ರ.), ಎಂದರೆ ಭಕ್ತಿಯಿಂದ ಮಾತ್ರ ಲಭ್ಯಳು. ಯಾವ ಬಗೆಯ ಬಲಾತ್ಕಾರದಿಂದಲೂ ಆಕೆ ವಶವಾಗುವವಳಲ್ಲ.

ನಿತ್ಯಪುಷ್ಟಾಂ, ಕರೀಷಿಣೀಂ – ಪುಷ್ಟಿಯೆಂದರೆ ಬೆಳೆಯುವುದು, ಬಲಗೊಳ್ಳುವುದು; ಪೋಷಣೆ, ಪಾಲನೆ, ವೃದ್ಧಿ. ಇದಕ್ಕೆ ಬೇಕಾಗುವ ಸಾಮಗ್ರಿ ಭೂಮಿಯಲ್ಲಲ್ಲದೆ ಮತ್ತೆಲ್ಲಿ ದೊರೆಯಬೇಕು? ಮತ್ತು ಲೆಕ್ಕವಿಲ್ಲದಷ್ಟು ಕಾಲದಿಂದ ಭೂಮಿಯ ಮೇಲೆ ಕಾಣಿಸಿಕೊಂಡ ಎಲ್ಲ ಪ್ರಾಣಿಗಳಿಗೂ ಭೂಮಿಯಿಂದ ಆಸರೆ, ಪೋಷಣೆ ದೊರೆಯುತ್ತಲೇ ಇದೆ, ಭೂಮಿಯ ಶಕ್ತಿ ಎಷ್ಟು ಮಾತ್ರಕ್ಕೂ ಕುಂದಿಲ್ಲ. ಆದುದರಿಂದಲೇ ಭೂಮಿ 'ನಿತ್ಯಪುಷ್ಟೆ'. ಇಲ್ಲಿ ಈ ಮಾತು ಪ್ರಧಾನವಾಗಿ ಭೂಮಿಯ ಮೇಲಿರುವ ಸಸ್ಯ ಸಂಪತ್ತನ್ನು ಸೂಚಿಸುತ್ತದೆ. ('ನಿತ್ಯಂ ಸದಾ ಸಸ್ಯಾದಿಭಿಃ ಸಮೃದ್ಧಾಂ', ಸಾ.ಭಾ.). ಪ್ರಾಣಿಗಳಿಗೆ ಮುಖ್ಯವಾದ ಆಹಾರ, ನೇರವಾಗಿಯೋ ಬಳಸಾಗಿಯೋ, ಸಸ್ಯವೇ. ಅಷ್ಟು ಮಾತ್ರವಲ್ಲದೆ,ಜೀವನಕ್ಕೆ ಬೇಕಾದ ವಾತಾವರಣದ ವ್ಯವಸ್ಥೆಯೂ ಗಿಡ ಮರಗಳಿಂದಲೇ ಆಗುವುದು.

ಮಹಾಲಕ್ಷ್ಮೀ



ಮಹಾಲಕ್ಷ್ಮೀ ಯಂತ್ರ

ಭೂಮಿಯು ಪ್ರಾಣಿಗಳನ್ನು ಕಾಪಿಡುವುದು ಸಸ್ಯ ಸಮೃದ್ಧಿಯಿಂದಲೇ ('ಸಸ್ಯಾದಿಭಿಃ ಪೋಷಣಶೀಲಾಂ', ಪೃ.ಭಾ.).

ಈ ಮಾತಿಗೆ ಇನ್ನೂ ಒಂದು ಅರ್ಥವನ್ನು ಸೂಚಿಸಿದ್ದಾರೆ. ಭೂಮಿಯ ಮೇಲೆ ಎಲ್ಲೆಲ್ಲೂ ಎಂದೂ ಬಗೆಬಗೆಯ ಪ್ರಾಣಿಗಳು ಬದುಕುತ್ತಲೇ ಇವೆ, ಭೂಮಿಯ ಸತ್ತ್ವ ಹೀಗೆ ಸಂಪೂರ್ಣವಾಗಿದೆ ('ಪೂರ್ಣಾಂ ಸರ್ವದೇಶಕಾಲಾವಸ್ಥಾಸು'). ಭೂಮಿಗೆ ಪ್ರಾಣಿಕೋಟಿ ಯಿಂದ ಪೋಷಣೆ ಸಾಗುತ್ತಲೇ ಬಂದಿದೆ.

'ಕರೀಷ'ವೆಂದರೆ ಸೆಗಣಿ, ಬೆರಣಿ ('ಶುಷ್ಕಗೋಮಯಾದಿಃ' ಸಾ.ಭಾ.). ನಮ್ಮ ದೇಶದಲ್ಲಿ ಬೆರಣಿಯನ್ನು ಒಲೆ ಹಚ್ಚಲು ಬಳಸುವುದಲ್ಲದೆ, ಅಗ್ನಿಕಾರ್ಯಗಳಲ್ಲಿಯೂ ಬಳಸುತ್ತಾರೆ. ಇದರಿಂದ 'ಕರೀಷಾಗ್ನಿ' ಎನ್ನುವ ನಿರ್ದೇಶನ ವಾಡಿಕೆಯಲ್ಲಿದೆ. ಇಲ್ಲಿ ಭೂಮಿಯನ್ನು 'ಕರೀಷಿಣಿ' ಎಂದು ಕರೆದಿರುವುದು ಭೂಮಿಯ ಮೇಲೆ ಸೆಗಣಿ-ಬೆರಣಿಗಳಿಗೆ ಕಾರಣವಾಗುವ ಬಗೆಬಗೆಯ ಪಶುಗಳು ಸಮೃದ್ಧವಾಗಿರುವುದನ್ನು ಸೂಚಿಸುತ್ತದೆ ('ಗವಾಶ್ವಾದಿ ಬಹುಪಶು ಸಮೃದ್ಧಾಂ', ಸಾ.ಭಾ.; 'ಅನೇನ ಪೃಥಿವ್ಯಾಂ ಅಸಂಖ್ಯಾತ-ಪಶುಮತ್ತ್ವಂ ವ್ಯಜ್ಯತೇ', ಪೃ.ಭಾ.). ಸಸ್ಯ ಸಮೃದ್ಧಿಯಂತೆಯೇ ಪಶುಸಮೃದ್ಧಿಯೂ ಭೂಮಿಯ ವೈಶಿಷ್ಟ್ಯ.

ಕರೀಷಿಣಿಯೆಂದರೆ ಭೂಮಿಯ ಹೆಸರೆಂದೂ ಒಂದು ವಿವರಣೆಯಿದೆ. 'ಕರ್ಷ'ವೆಂದರೆ ಮಣ್ಣು, 'ಕರ್ಷವತಿ' ಎಂದರೆ 'ಮೃದ್ವತಿ', ಮಣ್ಣನ್ನು ಹೊಂದಿರುವವಳು (ಶ್ರೀ. ಸೂ.ಭಾ.). ಇಲ್ಲಿ ಮಣ್ಣು ಶುಭಸೂಚಕವಾಗಿ, ಕರೀಷಿಣಿಯೆಂದರೆ ಶುಭವನ್ನು ನೀಡುವವಳು, ಭೂದೇವಿ ಎಂಬರ್ಥವಿದೆ ('ಮಂಗಲ ಪ್ರದಾತ್ರೀಂ').

ಸರ್ವಭೂತಾನಾಂ ಈಶ್ವರೀಂ — ಎಲ್ಲ ಪ್ರಾಣಿಗಳಿಗೂ ನಿಯಾಮಕಳು ಭೂದೇವಿ. ಭೂಮಿಯಿಂದಲೇ ಪ್ರಾಣಿಗಳ ಹುಟ್ಟು, ಭೂಮಿಯಿಂದಲೇ ಪ್ರಾಣಿಗಳ ಪೋಷಣೆ, ಪ್ರಾಣಧಾರಣೆ. ಭೂಮಿಯೇ ಆಸರ, ಬಲ ('ಅಧಿಷ್ಠಾತ್ರೀಂ ಆಧಾರಭೂತಾಂ ಸಮಸ್ತಪ್ರಾಣಿನಾಂ', ಸಾ.ಭಾ.; 'ನಿಯಾಮಿಕಾಂ', ಪೃ.ಭಾ.). ಭೂಮಿಯನ್ನು ಈಶ್ವರಿಯೆಂದು ಕರೆದಿರುವುದು ಈ ಅರ್ಥದಲ್ಲಿ. ಈಶ್ವರನೆಂದರೆ ವಿಷ್ಣು; ವಿಷ್ಣುವಿನ ಈ ಗುಣದಲ್ಲಿ ಅವನ ಮಡದಿಯಾದ ಲಕ್ಷ್ಮಿಯು ಪಾಲ್ಗೊಳ್ಳುವಳು ; ಅವಳದ್ದು 'ಸಮಸ್ವಾತಂತ್ರ್ಯ' (ಶ್ರೀ.ಗು.ರ.).

ಇಹ ಉಪಹ್ವಯೇ — ಸಾಧಕನು ತಾನಿರುವ ಎಡೆಗೆ, ತನ್ನ ಬದುಕಿನಲ್ಲೇ, ಸರ್ವಸಮೃದ್ಧಿಯನ್ನೂ ಸಕಲ ಸಂತೋಷವನ್ನೂ ಪಡೆದುಕೊಳ್ಳಲು, ಲಕ್ಷ್ಮಿಯನ್ನು ಬರಮಾಡಿಕೊಳ್ಳುವನು ('ಮತ್ಸಮೀಪಂ ಪ್ರತ್ಯಾಗಚ್ಛ ಇತಿ ಆಹ್ವಾನಂ ಕರೋಮಿ', ಪೃ.ಭಾ.).

ಈ ಮಂತ್ರವು ಭೂದೇವಿಯನ್ನು ಉದ್ದೇಶಿಸಿದ್ದು. ಭೂಮಿಯು ಲಕ್ಷ್ಮಿಯ ಸಾಕ್ಷಾತ್ ಪ್ರತೀಕ, ಪ್ರತ್ಯಕ್ಷದೇವತೆ. 'ಶ್ರೀರಹಸ್ಯ'ವೆಂಬ ಗ್ರಂಥದಲ್ಲಿ ಭೂಮಿ ಶ್ರೀ (ಸಂಪತ್ತು), ದುರ್ಗೆ, ನೀಲಾ, ತುಲಸಿ ಇವೆಲ್ಲ ಲಕ್ಷ್ಮಿಯ ಅಂಶಾವತಾರಗಳೆಂದು ಹೇಳಿದೆ. ಇವರಲ್ಲಿ ಭೂಮಿಯು ವಿಶಿಷ್ಟವಾದ ಸಾಮರ್ಥ್ಯವನ್ನು ಹೊಂದಿರುವುದರಿಂದ ವಿಭೂತಿನಾಯಿಕೆ; ಮೇಲೆ ಕಾಣಿಸಿದ ನಿತ್ಯಪುಷ್ಟೆ ಕರೀಷಿಣಿ ಮೊದಲಾದ ಗುಣಗಳು ಭೂಮಿಯಲ್ಲಿ ಇರುವುದರಿಂದ 'ಕಲ್ಯಾಣಗುಣ' ಸ್ಪಷ್ಟವಾಗುತ್ತದೆ (ಶ್ರೀ.ಗು.ರ.).

ತೈತ್ತಿರೀಯ ಶಾಖೆಗೆ ಸೇರಿದ 'ಮಹಾನಾರಾಯಣೀಯ'ದಲ್ಲಿ ಭೂಮಿಯನ್ನೇ ಕುರಿತಾದ ಮಂತ್ರವೊಂದಿರುವುದು ಲಕ್ಷ್ಮಿಯ ಈ ಅಂಶಾವತಾರದ ಹಿರಿಮೆಯನ್ನು ತೋರಿಸುತ್ತದೆ. 'ಲಲಿತಾ-ಅಷ್ಟೋತ್ತರ-ಶತ-ನಾಮಾವಳಿ'ಯಲ್ಲಿ ಮೊದಲ ಹೆಸರೇ ದೇವಿಯು ಎಲ್ಲ ಪ್ರಾಣಿಗಳಿಗೂ ಎಲ್ಲ ಪದಾರ್ಥಗಳಿಗೂ ಆಧಾರವಾಗಿರಲೆಂದು ಭೂಮಿಯಾಗಿ ಕೋರಿಕೊಂಡುದನ್ನು ಹೇಳುತ್ತದೆ; 'ಭೂ-ರೂಪ-ಸಕಲಾಧಾರಾಯೈ ನಮಃ'.

ಈ ಮಂತ್ರವನ್ನು ಅಗ್ನಿ ಪರವಾಗಿಯೂ ವಿವರಿಸುವ ವಾಡಿಕೆಯುಂಟು (ಪೃ.ಭಾ.). ಭೂಮಿಗೆ ಹೇಳಿದ ಗುಣ-ಧರ್ಮಗಳೆಲ್ಲ ಅಗ್ನಿಗೂ ಅನ್ವಯಿಸುತ್ತವೆ. ಆದರೆ ಮೊದಲ ಮಂತ್ರಗಳಲ್ಲಿ ಪುರುಷರೂಪದಿಂದ ಗ್ರಹಿಸಿದ ಅಗ್ನಿಯನ್ನು ಇಲ್ಲಿ ಸ್ತ್ರೀರೂಪದಿಂದ ಗ್ರಹಿಸಬೇಕು. ಇಡೀ ಸೂಕ್ತದ ದೇವತೆಯನ್ನು 'ಶ್ರ್ಯಗ್ನೀ' ಎಂದು ಶ್ರೀ ಮತ್ತು ಅಗ್ನಿ ಇಬ್ಬರನ್ನೂ ಕೂಡಿಸಿಯೇ ಹೇಳಿದೆಯಷ್ಟೆ?

ಈ ಮಂತ್ರದ ಋಷಿ ಮಹಾವಿಷ್ಣು; ಛಂದಸ್ಸು ಅನುಷ್ಟುಪ್ ; ದೇವತೆ ಶ್ರೀಮಹಾಲಕ್ಷ್ಮಿ. 'ಗಂ' ಎಂಬುದು ಬೀಜ; 'ಹ್ರೀಂ' ಎಂಬುದು ಶಕ್ತಿ; 'ಶ್ರೀಂ' ಎಂಬುದು ಕೀಲಕ. ಧ್ಯಾನಶ್ಲೋಕ -

ಕಲ್ಪದ್ರೋಃಪಾದಮೂಲೇ ಧೃತಕನಕನಿಭಾಂ ಚಾರುಸಿಂಹಾಸನಸ್ಥಾಂ
ಹಸ್ತೈಃ ಪದ್ಮೌ ವರದಮಭಯಂ ಧಾರಯಂತೀಂ ಚ ಮಾಲಾಮ್ ।
ನಾನಾಭೂಷಾಂ ಸುವೇಷಾಂ ಮಣಿಮಕುಟಧರಾಂ ದಿವ್ಯಗಂಧಾನುಲೇಪಾಂ
ಧ್ಯಾಯೇತ್ಸಂಪೂರ್ಣಕಾಮಪ್ರದಕರಕಮಲಾಂ ಕಂಬುಕಂಠೀಂ ಹೃದಬ್ಜೇ ॥

ಇನ್ನೊಂದು ಧ್ಯಾನಶ್ಲೋಕ 'ವೈಖಾನಸವಿದ್ಯೆ'ಯೆಂಬ ಗ್ರಂಥದಲ್ಲಿದೆ. ಇದು ಶ್ರೀಸೂಕ್ತದ ಮಂತ್ರಕ್ಕೆ ಸರಳಾನುವಾದವಿದ್ದಂತೆಯೇ ಇದೆ. ಈ ಶ್ಲೋಕದ ಫಲ ಕೃಷಿಯಲ್ಲಿ ಯಶಸ್ಸು, ಧನಧಾನ್ಯಪಶುಸಮೃದ್ಧಿ, ಮಹತ್ವ (ಹೆಗ್ಗಳಿಕೆ) ಮತ್ತು ಪ್ರಭುತ್ವ (ಒಡೆತನ) ಎಂದು ಹೇಳಿದೆ. ಈ ಶ್ಲೋಕ ಇದು —

ಗೋವೃಂದಾನುಗತಾಂ ಧ್ಯಾತ್ವಾ ಸುರಭಿಂ ಸಸ್ಯಮಾಲಿನೀಮ್ ।
ಪೃಥುಲಾಂ ಪ್ರಾಣಿನಾಮೀಶಾಂ ದುರ್ಧರ್ಷಾಂ ಶ್ರೀಯಮರ್ಚಯೇತ್ ॥

ಈ ಮಂತ್ರದಿಂದ ಲಕ್ಷ್ಮೀನಾಮಾವಳಿಗೆ ಸೇರಿರುವ ನಾಮಗಳು ಐದು –

1. (35) ಗಂಧದ್ವಾರಾಯೈ ನಮಃ
2. (36) ದುರಾಧರ್ಷಾಯೈ ನಮಃ
3. (37) ನಿತ್ಯಪುಷ್ಟಾಯೈ ನಮಃ
4. (38) ಕರೀಷಿಣ್ಯೈ ನಮಃ
5. (39) ಈಶ್ವರ್ಯೈ ನಮಃ

ಮಂತ್ರ 10

ಮನಸಃ ಕಾಮಮಾಕೂತಿಂ ವಾಚಃ ಸತ್ಯಮಶೀಮಹಿ ।
ಪಶೂನಾಂ ರೂಪಮನ್ನಸ್ಯ ಮಯಿ ಶ್ರೀಃ ಶ್ರಯತಾಂ ಯಶಃ ॥

(ಮನಸ್ಸಿನ ಬಯಕೆಗಳೆಲ್ಲ (ನಿನ್ನ ಅನುಗ್ರಹದಿಂದ) ಈಡೇರಲಿ, ಸಂಕಲ್ಪವು ಕೈಗೂಡಲಿ, ಮಾತಿನಲ್ಲಿ ದಿಟವು ಒಡಗೂಡಿಬರಲಿ, ಪಶುಸಮೃದ್ಧಿ-ಅನ್ನ ಸಮೃದ್ಧಿಗಳು ಒದಗಲಿ, ನನ್ನಲ್ಲಿ ಸಂಪತ್ತೂ ಯಶಸ್ಸೂ ನೆಲೆಗೊಳ್ಳಲಿ.)

ಮನಸಃ ಕಾಮಂ — 'ಕಾಮ'ವೆಂದರೆ ಬಯಕೆ, ಆಸೆ, ಭೋಗ, ಪ್ರೀತಿ. ಮನಸ್ಸಿನ ಕಾಮವೆಂದರೆ 'ಮನೋರಥ' ಎಂದರ್ಥ (ಸಾ.ಭಾ.); ಮನಸ್ಸಿಗೆ ಹಿತವಾದ ಕಾಮನೆಗಳು; ಬದುಕಿನ ಸ್ವಾರಸ್ಯವೂ ಸಾರ್ಥಕ್ಯವೂ ಮನೋರಥಗಳನ್ನೇ ಅವಲಂಬಿಸಿವೆಯಾಗಿ, ಇವುಗಳ ಪೂರೈಕೆ ಮನುಷ್ಯ ಮಾತ್ರದವನಿಂದಲೇ ಸಾಧ್ಯವಿಲ್ಲವಾಗಿ, ಶ್ರೀದೇವಿಯ ನೆರವನ್ನು ಸಾಧಕನು ಕೋರುತ್ತಿದ್ದಾನೆ.

ಆಕೂತಿಂ — ವೈದಿಕ ವಾಙ್ಮಯದಲ್ಲಿ 'ಆಕೂತಿ'ಯೆನ್ನುವ ಮಾತನ್ನು ಸಂಕಲ್ಪವೆಂಬ ಅರ್ಥದಲ್ಲಿ ಬಳಸಿದ್ದಾರೆ. 'ಕೂ' ಎನ್ನುವ ಧಾತುವಿಗೆ ನಿಶ್ಚಯ ಮಾಡುವುದು, ಯಾವುದಾದರೊಂದು ಕೆಲಸವನ್ನು ಮಾಡಲು ನಿರ್ಧರಿಸುವುದು ಎಂದರ್ಥವಿದೆ; ಅದಕ್ಕೆ 'ಆ' ಎಂಬ ಉಪಸರ್ಗವನ್ನು ಸೇರಿಸಿದ್ದಾರೆ; ಈ ಉಪಸರ್ಗದ ಧ್ವನಿ ಎಲ್ಲ ಕಡೆಗಳಿಂದಲೂ, ಎಲ್ಲ ಬಗೆಗಳಲ್ಲಿಯೂ ('ಸಮಂತಾತ್') ಎಂದು. ಹೀಗಾಗಿ, ಆಕೂತಿಯೆಂದರೆ ಎಲ್ಲ ವಿವರಗಳನ್ನೂ ಗಮನಿಸಿ ನಿರ್ಧಾರವನ್ನು ಕೈಗೊಳ್ಳುವುದು, ಎಂದರೆ ಸಂಕಲ್ಪ. ಮುಂದೆ ಈ ಮಾತಿಗೆ ಬರಿಯ ಬಯಕೆ, ಸಂತೋಷ ಎಂಬರ್ಥಗಳೂ ಒದಗಿಬಂದವು. ಕಾಮವನ್ನು ಬ್ರಹ್ಮನ ಮಾನಸಪುತ್ರ, ರತಿಯ ಗಂಡ ಎಂದು ಹೇಳಿ ಪುರುಷಕಲ್ಪನೆಯನ್ನು ಮಾಡಿಕೊಂಡಂತೆಯೇ ಆಕೂತಿಯನ್ನು ಮನು-ಸ್ವಾಯಂಭುವರ ಮತ್ತು ಶತರೂಪೆಯ ಮಗಳು, ಪೃಥುಶೇಣನ ಹೆಂಡತಿ ಎಂದು ಕಲ್ಪಿಸಿಕೊಂಡಿದ್ದಾರೆ (ಅ.ವೇ. 6,131,2).

ವಾಚಃ ಸತ್ಯಂ — ಇದ್ದುದನ್ನು ಇದ್ದಂತೆಯೇ ಹೇಳುವುದು 'ಮಾತಿನ ಸತ್ಯ' ('ವಾಗಿಂದ್ರಿಯಸ್ಯ ಯಾಥಾರ್ಥ್ಯಂ', ಸಾ.ಭಾ.; 'ವಚಸಾ ಯಾಥಾರ್ಥ್ಯಂ', ಪೃ.ಭಾ.). ಇಲ್ಲಿ ಸತ್ಯವೆಂದರೆ ಫಲಕಾರಿಯಾದುದು, ಪ್ರಭಾವಶಾಲಿಯಾದುದು. ಮಾತು ದಿಟವಾಗಿ ಕೈಗೂಡುವುದು ಸತ್ಯವೆನಿಸಿಕೊಳ್ಳುತ್ತದೆ. ಮನಸ್ಸಿನ ಭಾವನೆ-ಬಯಕೆಗಳನ್ನು ಮಾತಿನಲ್ಲಿ ಮೂಡಿಸಿದಾಗ ಭಾವನೆಗಳಿಗೆ ಮೂರ್ತವಾದ, ಸಂವಾದಿಯಾದ ರೂಪ ದೊರೆತರೆ, ಬಯಕೆಗಳು ಈಡೇರಿದರೆ ಅದು ಸತ್ಯ, 'ವಾಕ್ ಸಿದ್ಧಿ'.



ಯಶಸ್ಕರೀ ಯಂತ್ರ

'ಮನಸಃ, ಕಾಮಂ' ಎಂದು ಸೇರಿಸಿ ಹೇಳಿದಂತೆ 'ವಾಚಃ ಆಕೂತಿಂ' ಎಂದು ಸೇರಿಸಿಯೂ ಅರ್ಥಮಾಡುವುದುಂಟು (ಶ್ರೀ.ಸೂ.ಭಾ.). ಹೀಗೆ ಮಾಡಿದಾಗ, ಮನಸ್ಸಿನ ಬಯಕೆಗಳು ಈಡೇರಲಿ ಎಂದು ಕೋರಿದಂತೆ, ಮಾತಿನಲ್ಲಿ ಸಂಕಲ್ಪವೂ ಮೂಡಿಬರಲಿ ಎಂಬುದು ಆಶಯ. ಆಗ 'ಸತ್ಯಂ' ಎನ್ನುವುದನ್ನು ಸ್ವತಂತ್ರಪದವನ್ನಾಗಿ ಗ್ರಹಿಸಬೇಕಾಗುತ್ತದೆ. ಸತ್ಯವೆನ್ನುವುದು ಬ್ರಹ್ಮನ ನಿರ್ದೇಶನವಿರುವಂತೆಯೇ ದೇವಿಯನ್ನೂ ಸೂಚಿಸುತ್ತದೆ. ಮನಸ್ಸಿನ ಬಯಕೆಗಳನ್ನು, ಮಾತಿನಲ್ಲಿ ಸಂಕಲ್ಪವನ್ನು ಪಡೆದುಕೊಳ್ಳುವೆನು ('ಅಶೀಮಹಿ') ಎಂದಂತೆಯೇ ಸತ್ಯಸ್ವರೂಪಳಾದ ದೇವಿಯನ್ನೂ ಪಡೆದುಕೊಳ್ಳುವೆನು ಎಂದರ್ಥವಾಗುತ್ತದೆ.

ಪಶೂನಾಂ ರೂಪಂ, ಅನ್ನಸ್ಯ (ರೂಪಂ) — ಪಶುಗಳೆಂದರೆ ಮನುಷ್ಯನ ನಿತ್ಯಯಾತ್ರೆಯಲ್ಲಿ ನೆರವಾಗುವ ಎಲ್ಲ ಪ್ರಾಣಿಗಳಿಗೂ ಉಪಲಕ್ಷಣ; ಹಸು, ಕುದುರೆ, ಎಮ್ಮೆ, ಆನೆ ಮೊದಲಾದುವೆಲ್ಲ ಈ ಮಾತಿನಲ್ಲಿ ಅಡಗಿವೆ ('ಗೋ ಮಹಿಷ್ಯಾದೀನಾಂ', ಸಾ.ಭಾ.; 'ಗಜಾಶ್ವಗೋಮಹಿಷ್ಯಾದಿ', (ಪೃ.ಭಾ.). ಇವುಗಳ 'ರೂಪ'ವೆಂದರೆ ಬಾಹುಳ್ಯ, ಪ್ರಾಚುರ್ಯ (ಪೃ.ಭಾ.). ಕೊರತೆಯಿರದಷ್ಟು ಪಶುಸಂಪತ್ತು ಒದಗಲಿ ಎಂದು ತಾತ್ಪರ್ಯ.

ಅನ್ನವೆಂದರೆ ಆಹಾರ ಸಾಮಗ್ರಿ. 'ಅದ್' ಎನ್ನುವ ಧಾತುವಿಗೆ 'ತಿನ್ನುವುದು' ಎಂದರ್ಥ. ನಾವು ತಿನ್ನುವ ಭಕ್ಷ್ಯ , ಭೋಜ್ಯ, ಲೇಹ್ಯ, ಚೋಷ್ಯ, ಎಂಬ ನಾಲ್ಕು ಬಗೆಯಾದ ಆಹಾರಗಳಿಗೂ ಈ ಮಾತು ಹೊಂದುತ್ತದೆ. 'ರೂಪ'ವೆನ್ನುವ ಪದವನ್ನು ಇದಕ್ಕೂ ಅನ್ವಯಿಸಿಕೊಳ್ಳಬೇಕು; ಅದೇ ಅರ್ಥ, ಬೇಕಾದಷ್ಟು ಆಹಾರ.

ಶ್ರೀಃ ಯಶಃ ಮಯಿ ಶ್ರಯತಾಂ — ಶ್ರೀ ಎಂದರೆ ಸಂಪತ್ತು (ಸಾ.ಭಾ.); ಮೇಲೆ ಹೇಳಿದ ಎಲ್ಲವನ್ನೂ ಒಳಗೊಂಡ ಸೌಲಭ್ಯ. ಲಕ್ಷ್ಮಿಯು ಸಮೀಪದಲ್ಲಿದ್ದರೆ ಅವೆಲ್ಲವೂ ಬರುವುದರಲ್ಲಿ ಸಂದೇಹವಿರದು. ಯಶಸ್ಸೆಂದರೆ ಸತ್ಕಾರ್ಯಗಳಲ್ಲಿ ತೊಡಗಿರುವನೆಂಬ, ಸತ್ಪುರುಷನೆಂಬ ಎಣಿಕೆ. ಸಂಪತ್ತಿದ್ದಲ್ಲಿ ಕುಖ್ಯಾತಿಯೂ ಇರುವುದು ವಾಡಿಕೆ; ಆದರೆ ಸಾಧಕನಿಗೆ ಸಂಪತ್ತಿನೊಡನೆ ಧರ್ಮಿಷ್ಠನೆಂಬ ಕೀರ್ತಿಯೂ ಕೂಡಿಕೊಂಡಿರಬೇಕು. ಹಾಗೆಂದೇ 'ಶ್ರೀಃ' ಮತ್ತು 'ಯಶಃ' ಎಂಬ ಎರಡೂ ಕೋರಿಕೆಗಳನ್ನೂ ಒಟ್ಟಿಗೆ ಹೇಳಿದೆ. ಇವೆರಡೂ ಉಪಾಸಕನಾದ ನನ್ನಲ್ಲಿ ನೆಲೆಯಾಗಿ ನಿಲ್ಲಲಿ ಎಂಬರ್ಥದಲ್ಲಿ 'ಮಯಿಶ್ರಯುತಾಂ' ಎಂಬ ಒಕ್ಕಣೆ ಬಂದಿದೆ ('ತದುಪಾಸಕೇ ಮಯಿ ಆಶ್ರಯತಾಂ', ಸಾ.ಭಾ.; 'ಸನ್ನಿಧತ್ತಾಂ', ಪೃ.ಭಾ.).

ಕೆಲವು ವ್ಯಾಖ್ಯಾನಕಾರರು 'ಪಶೂನಾಂ ರೂಪಂ' ಎಂದೂ 'ಅನ್ನಸ್ಯ ಯಶಃ' ಎಂದೂ ಪದಗಳನ್ನು ಜೋಡಿಸುತ್ತಾರೆ. ಇವರ ಪ್ರಕಾರ 'ಅನ್ನ' ವೆಂದರೆ ಸತ್ವ-ರಜಸ್ಸು-ತಮಸ್ಸು ಎಂಬ ಮೂರು ಗುಣಗಳಿಂದ ಕೂಡಿದ ('ತ್ರೈಗುಣ್ಯಂ'), ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ ತೇಜಸ್ಸು ಎಂಬ ಆರು ಗುಣಗಳಿಂದ ಒದಗಿಬಂದ ('ಷಡ್ಗುಣೋತ್ಥಂ') ಪದಾರ್ಥಗಳು. ಯಶಸ್ಸೆಂದರೆ ಇಲ್ಲಿ ವೃದ್ಧಿ ಅಥವಾ ಉತ್ತಮವಾದ ರೂಪ. ಲಕ್ಷ್ಮೀನಾಮಾವಳಿಗೆ ಸೇರಿರುವ ಹೆಸರು 'ಅನ್ನಸ್ಯ ಯಶಸೇ ನಮಃ' ಎಂದೇ ಇರುವುದನ್ನು ಗಮನಿಸಬೇಕು.

ವಾಕ್ಸಿದ್ಧಿ ಮತ್ತು ಭೋಗಸಿದ್ಧಿಗಳೇ ಫಲವೆಂದು ಕಾಣಿಸಿರುವ ಈ ಮಂತ್ರದ ಋಷಿ ಕಾಮ; ಛಂದಸ್ಸು ಅನುಷ್ಟುಪ್; ದೇವತೆ ಶ್ರೀ ಮಹಾಲಕ್ಷ್ಮಿ. 'ಮಂ' ಎಂಬುದು ಬೀಜ; 'ಸಂ' ಎಂಬುದು ಶಕ್ತಿ; 'ಶ್ರೀಂ' ಎಂಬುದು ಕೀಲಕ. ಧ್ಯಾನಶ್ಲೋಕ ಇದು –

ತಾಂ ಧ್ಯಾಯೇತ್ ಸತ್ಯಸಂಕಲ್ಪಾಂ ಲಕ್ಷ್ಮೀಂ ಕ್ಷೀರೋದನಪ್ರಿಯಾಮ್ ।
ಖ್ಯಾತಾಂ ಸರ್ವೇಷು ಭೂತೇಷು ತತ್ತ್ವಜ್ಞಾನಬಲಕ್ರಿಯಾಮ್ ॥

ಅಥವಾ ಇನ್ನೊಂದು ಧ್ಯಾನ ಶ್ಲೋಕವೂ ವಾಡಿಕೆಯಲ್ಲಿದೆ –

ಕಾಂತ್ಯಾ ಕಾಂಚನಸನ್ನಿಭಾಂ ದ್ವಿನಯನಾಂ ಕಲ್ಹಾರಮಾಲಾವತೀಂ
ಕಸ್ತೂರೀತಿಲಕಾಂ ಕರೈಶ್ಚ ಕಮಲೇ ಕಂಠೇ ಚ ಮುಕ್ತಾವಲೀಮ್ ।
ಶೇಷಾಶೇಷವಿಶೇಷಭೂಷಣರತಾಂ ಸಂಬಿಭ್ರತೀಂ ಕುಂಡಲಾಂ
ಪದ್ಮಾಕ್ಷೀಂ ಭಜ ಸರ್ವದಾಭಿಲಷಿತಪ್ರಾಪ್ತ್ಯೈ ಸಮೃದ್ಧಶ್ರಿಯೈ ॥

ಈ ಮಂತ್ರದಿಂದ ಲಕ್ಷ್ಮೀನಾಮಾವಳಿಗೆ ಸೇರಿರುವ ಹೆಸರುಗಳು ಇವು –

1. (40) ಮನಸಃ ಕಾಮಾಯೈ ನಮಃ
2. (41) ವಾಚ ಆಕೂತ್ಯೈ ನಮಃ
3. (42) ಸತ್ಯಾಯೈ ನಮಃ
4. (43) ಪಶೂನಾಂ ರೂಪಾಯೈ ನಮಃ
5. (44) ಅನ್ನಸ್ಯ ಯಶಸೇ ನಮಃ
6. (45) ಶ್ರಿಯೈ ನಮಃ

ಮಂತ್ರ 11

ಕರ್ದಮೇನ ಪ್ರಜಾಭೂತಾ ಮಯಿ ಸಂಭವ ಕರ್ದಮ ।
ಶ್ರಿಯಂ ವಾಸಯ ಮೇ ಕುಲೇ ಮಾತರಂ ಪದ್ಮಮಾಲಿನೀಂ ॥

(ಓ ಕರ್ದಮನೇ, ನಿನ್ನನ್ನು ಮಗನಾಗಿ ಪಡೆದವಳು ಶ್ರೀ, ನನ್ನಲ್ಲಿ ಮೂಡಿಬಾ. (ನೀನು ಬಂದು) ನಿನ್ನ ತಾಯಿಯಾದ, ತಾವರೆ ಹೂಮಾಲೆಗಳನ್ನು ತೊಟ್ಟ ಶ್ರೀಯನ್ನು ನನ್ನ ಮನೆಯಲ್ಲಿ ನೆಲೆಗೊಳಿಸು).

ಕರ್ದಮೇನ ಪ್ರಜಾಭೂತಾ – ಸ್ವಾಯಂಭುವ ಮನ್ವಂತರದಲ್ಲಿ ಕರ್ದಮನೆಂಬುವನು ಒಬ್ಬ ಪ್ರಜಾಪತಿ. ಭಾಗವತಪುರಾಣದ ಪ್ರಕಾರ (3,12,27) ಬ್ರಹ್ಮನ ನೆರಳಿನಿಂದ ಹುಟ್ಟಿಬಂದವನು ಇವನು ('ಬ್ರಹ್ಮಣಃ ಛಾಯಾಯಾಂ ಜಾತಃ'); ಇದೇ ವಿವರ ಬ್ರಹ್ಮವೈವರ್ತಪುರಾಣದಲ್ಲಿಯೂ ಇದೆ (ಬ್ರಹ್ಮಖಂಡ, 22); ಸ್ವಾಯಂಭುವ ಮನುವಿನ ಮಗಳಾದ ದೇವಹೂತಿಯನ್ನು ಮದುವೆಯಾದನಂತೆ. 'ಕರ್ದಮ'ವೆಂಬ ಮಾತಿಗೆ ವಾಡಿಕೆಯ ಅರ್ಥ ಕೆಸರು ; ಆದರೆ ವೈದಿಕ ವಾಙ್ಮಯದಲ್ಲಿ ನೆರಳೆಂಬ ಅರ್ಥವಿದೆ ('ವೇದೇಷು ಕರ್ದಮಃ ಶಬ್ದಃ ಛಾಯಾಯಾಂ ವರ್ತತೇ ಸ್ಫುಟಂ'). ಬ್ರಹ್ಮನ ನೆರಳು ಬಿದ್ದ ಭೂಮಿ ಕೆಸರಾಯಿತೆಂದೂ ಅಲ್ಲಿ ಈ ಮಗು ಹುಟ್ಟಿತೆಂದೂ ಕಥೆಯಿದೆ.

ವಿಷ್ಣು ಪುರಾಣದಲ್ಲಿ ಕರ್ದಮನೆಂಬ ಋಷಿಯ ಉಲ್ಲೇಖವಿದೆ. ದೇವಿಯನ್ನು ಕುರಿತು ತಪಸ್ಸು ಮಾಡಿ, ದೇವಿಯು ತನ್ನ ಮಗಳಾಗಿ ಕಾಣಿಸಿಕೊಳ್ಳಬೇಕೆಂದು ವರವನ್ನು ಪಡೆದುಕೊಂಡನಂತೆ. ಅಮೃತಮಂಥನ ಸಂದರ್ಭದಲ್ಲಿ ಲಕ್ಷ್ಮಿಯು ಸಮುದ್ರದಿಂದ ಹೊರಬಂದಾಗ, ಈ ಋಷಿಯು ಅವಳನ್ನು ತನ್ನ ಮಗಳಾಗಿ ಪರಿಗ್ರಹ ಮಾಡಿಕೊಂಡನಂತೆ ('ಪ್ರಾರ್ಥಿತಾ ತಸ್ಯ ತನಯಾ ಅಭೂತ್', ಶ್ರೀ.ಸೂ.ಭಾ.). ಇಲ್ಲಿ 'ಕರ್ದಮೇನ ಪ್ರಜಾಭೂತಾ' ಎಂದರೆ ಕರ್ದಮನಿಗಾಗಿ (ಅಥವಾ ಕರ್ದಮನಿಂದಾಗಿ) ಮಗಳಾಗಿ ತೋರಿಕೊಂಡವಳು ಎಂದರ್ಥ.

ಲಕ್ಷ್ಮಿಗೆ ಮೂವರು ಮಾನಸಪುತ್ರರಂತೆ. ಅವರಲ್ಲಿ ಕರ್ದಮ ಒಬ್ಬ ; ಉಳಿದ ಇಬ್ಬರು ಆನಂದ ಮತ್ತು ಚಿಕ್ಲೀತ ('ಆನಂದಃ ಕರ್ತಮಶ್ಚೈವ ಚಿಕ್ಲೀತ ಇತಿ ವಿಶ್ರುತಾಃ, ಋಷಯಸ್ತೇ ತ್ರಯಃ ಪ್ರೋಕ್ತಾಃ'). ಇಲ್ಲಿ 'ಕರ್ದಮೇನ ಪ್ರಜಾಭೂತಾ' ಎಂದರೆ ಕರ್ದಮನಿಂದಾಗಿ ತಾಯಿಯಾದವಳು ('ಪ್ರಕೃಷ್ಟಂ ಅಪತ್ಯಂ ಯಸ್ಯಾಃ ಸಾ ಸುಪುತ್ರವತೀ ಇತ್ಯರ್ಥಃ', ಸಾ.ಭಾ.; 'ಪುತ್ರವತೀ ಜಾತಾ', ಪೃ.ಭಾ.).

ಮಯಿ ಸಂಭವ – ಲಕ್ಷ್ಮಿಯ ಉಪಾಸಕನಾದ ನನ್ನಲ್ಲಿ (ಎಂದರೆ ನನ್ನ ಮನೆಯಲ್ಲಿ, 'ಮದ್ಗೃಹೇ', ಸಾ.ಭಾ.). ಎಂದೆಂದೂ ವಾಸಮಾಡು ('ಸಂವಸ', ಸಾ.ಭಾ.), ಎಂದರೆ ನನ್ನನ್ನು ಅನುಗ್ರಹಿಸು ಎಂದರ್ಥ ('ಮಯಿ ಪ್ರಸಾದಂ ಕುರು', ಪೃ.ಭಾ.).

ಮಾತೃಲಕ್ಷ್ಮೀ



ಮಾತೃಲಕ್ಷ್ಮೀ ಯಂತ್ರ

ಮಾತರಂ ಶ್ರಿಯಂ ಪದ್ಮಮಾಲಿನೀಂ — ಶ್ರೀ ಎಂದರೆ ಸಂಪತ್ತು. ಈಕೆಗೆ ಎರಡು ವಿಶೇಷಗಳನ್ನು ಹೇಳಿದ್ದಾರೆ. ತಾಯಿಯೆಂದು ಒಂದು. ಕರ್ದಮನನ್ನು ಸಂಬೋಧಿಸಿ ಹೇಳಿರುವ ಮಂತ್ರವಾದುದರಿಂದ, ಕರ್ದಮನ ತಾಯಿಯೇ ಶ್ರೀದೇವಿಯೆಂದು 'ತವ ಮಾತರಂ' ('ನಿನ್ನ ತಾಯಿ') ಎಂದು ವಿಶ್ಲೇಷಿಸಿದ್ದಾರೆ. ('ತವ ಜನನೀಂ', ಸಾ.ಭಾ.; ಪೃ.ಭಾ.). ಆದರೆ ಶ್ರೀದೇವಿಯು ಎಲ್ಲ ಪ್ರಾಣಿಗಳಿಗೂ ತಾಯಿಯೇ ('ಚೇತನಾನಾಂ' ಶ್ರೀ.ಸೂ.ಭಾ.). ಆದುದರಿಂದ 'ಮಾತರಂ' ಎಂಬುದನ್ನು ಹಾಗೆಯೇ (ಎಂದರೆ 'ತವ' ಎಂದು ಸೇರಿಸದೆ) ಉಳಿಸಿಕೊಂಡಿದೆ. 'ಶ್ರೀಮಾತಾ' ಎನ್ನುವುದು ಲಲಿತಾಸಹಸ್ರನಾಮದಲ್ಲಿ ದೇವಿಯ ಮೊದಲ ಹೆಸರೇ.

ಎರಡನೆಯ ವಿಶೇಷಣ ಪದ್ಮಮಾಲಿನಿಯೆನ್ನುವುದು. ತಾವರೆಹೂಗಳ ಮಾಲೆಯನ್ನು ಧರಿಸಿರುವವಳು ಪದ್ಮಮಾಲಿನಿ ('ಕಮಲಮಾಲಾಧಾರಿಣೀಂ',ಸಾ.ಭಾ.; 'ಪದ್ಮರಚಿತಮಾಲಿಕಾಂ', ಪೃ.ಭಾ.). ಪದ್ಮಕ್ಕೆ ಪ್ರಕೃತಿಯೆಂಬ ಸಾಂಕೇತಿಕವಾದ ಅರ್ಥವಿದೆಯಷ್ಟೆ ಇದರ ಮಾಲೆಯೆಂದರೆ ಪ್ರಕೃತಿ ತತ್ತ್ವಗಳು, ಅವುಗಳ ವಿಕೃತಿಗಳು (ಅವ್ಯಕ್ತ, ಮಹತ್, ಅಹಂಕಾರ, ಇಂದ್ರಿಯಗಳು, ತನ್ಮಾತ್ರಗಳು, ಭೂತಗಳು). ಇವನ್ನೆಲ್ಲ ಮಾಲೆಯಂತೆ ತನ್ನ ಮೈಮೇಲೆ ಧರಿಸಿರುವವಳು ಮೂಲಪ್ರಕೃತಿ ಅಥವಾ ಆದ್ಯಾಶಕ್ತಿ. ಈ ಕಾರಣದಿಂದಲೇ ಅವಳು ಎಲ್ಲಕ್ಕೂ ತಾಯಿಯಂತಿರುವವಳು (ಶ್ರೀಮಾತಾ).

ಮೇ ಕುಲೇ ವಾಸಯ — ಮೇಲೆ ವಿವರಿಸಿದ ಲಕ್ಷ್ಮಿಯು ನನ್ನ ಮನೆಯಲ್ಲೇ ವಾಸಮಾಡುವಂತೆ ಪ್ರೇರಿಸು ಎಂದು ಕರ್ದಮನಿಗೆ ಸಲ್ಲಿಸಿದ ಕೋರಿಕೆ. 'ಕುಲ' ಎಂಬ ಮಾತಿಗೆ ಮನೆಯೆಂದೂ ಅರ್ಥವಿದೆ, ವಂಶವೆಂದೂ ಅರ್ಥವಾಗುತ್ತದೆ. ಮನೆ ಸಂಪತ್ಸಮೃದ್ಧವಾಗಿರಲಿ ಎಂದೂ ಆಗುತ್ತದೆ ; ನನ್ನ ಮಕ್ಕಳು-ಮರಿ ಎಲ್ಲರೂ ಸಂಪತ್ತಿನಿಂದ ಕೂಡಿರುವಂತಾಗಲಿ ಎಂದಾದರೂ ಆಗುತ್ತದೆ.

'ವಾಸಯ' ಎಂದರೆ ನೆಲೆಗೊಳಿಸು ('ಪ್ರತಿಷ್ಠಾಪಯ' ಪೃ.ಭಾ.). ಮಗನು ಬಂದನೆಂದರೆ, ಅವನಲ್ಲಿ ವಾತ್ಸಲ್ಯವನ್ನಿಟ್ಟು ತಾಯಿಯೂ ಬರುವಳೆಂದು ಭಾವ ('ತತ್ಪರಾ ಸತೀ ವಾಸಂ ಕರೋತು ಇತ್ಯರ್ಥಃ').

ಈ ಮಂತ್ರಕ್ಕೆ ಲಕ್ಷ್ಮಿಯ ಮಗನಾದ ಕರ್ದಮ ಋಷಿ ; ಛಂದಸ್ಸು ಅನುಷ್ಟುಪ್ ; ದೇವತೆ ಮಹಾಲಕ್ಷ್ಮಿ. 'ಕಂ' ಎಂಬುದು ಬೀಜ ; 'ವಂ' ಶಕ್ತಿ; 'ಶ್ರೀಂ' ಕೀಲಕ. ಧ್ಯಾನಶ್ಲೋಕ (ಮಂ.ಕ.ದಲ್ಲಿ ಕಾಣಿಸಿರುವಂತೆ) ಇದು —

ಸವತ್ಸಾ ಗೌರಿವ ಪ್ರೀತಾ ಕರ್ದಮೇನ ಯಥೇಂದಿರಾ ।
ಕಲ್ಯಾಣೀ ಮದ್‌ಗೃಹೇ ನಿತ್ಯಂ ನಿವಸೇತ್ ಪದ್ಮಮಾಲಿನೀ ॥

ಅಥವಾ ಇನ್ನೊಂದು ಧ್ಯಾನಶ್ಲೋಕವನ್ನೂ ಕಾಣಿಸಿದ್ದಾರೆ –

ಧ್ಯಾಯೇದ್ಧಾಟಕಸನ್ನಿಭಾಂ ದ್ವಿನಯನಾಂ ದಿವ್ಯಾಂಬರಾಲಂಕೃತಾಂ
ಸತ್ಫುಲ್ಲೋದರಪದ್ಮಕೋಮಲಯುಗಶ್ರೀಮತ್ಕರಾಂಭೋರುಹಾಮ್ ।
ನಾನಾರತ್ನಕಿರೀಟಕುಂಡಲಲಸದ್ವಕ್ತ್ರಾಂಬುಜಾಂ ಪದ್ಮಿನೀಂ
ಸರ್ವಾಭೀಷ್ಟ ಫಲಪ್ರದಾನನಿರತಾಂ ಸಂಪತ್ಸಮೃದ್ಧ್ಯೈ ಸದಾ ॥

ಈ ಮಂತ್ರದಿಂದ ಲಕ್ಷ್ಮೀನಾಮಾವಳಿಗೆ ಎರಡು ನಾಮಗಳು ಸೇರಿವೆ –

1. (45) ಮಾತ್ರೇ ನಮಃ
2. (46) ಪದ್ಮಮಾಲಿನ್ಯೈ ನಮಃ

ಮಂತ್ರ 12

ಆಪಃ ಸೃಜಂತು ಸ್ನಿಗ್ಧಾನಿ ಚಿಕ್ಲೀತ ವಸ ಮೇ ಗೃಹೇ ।
ನಿ ಚ ದೇವೀಂ ಮಾತರಂ ಶ್ರಿಯಂ ವಾಸಯ ಮೇ ಕುಲೇ ॥

(ನೀರು ಹಿತವಾದ ಫಲಗಳನ್ನುಂಟು ಮಾಡಲಿ. ಓ ಚಿಕ್ಲೀತನೇ, ನನ್ನ ಮನೆಯಲ್ಲಿ ನೆಲೆಸು, ನಿನ್ನ ತಾಯಿಯಾದ ಶ್ರೀದೇವಿಯನ್ನು ನನ್ನ ಮನೆಯಲ್ಲಿ ನೆಲೆಗೊಳಿಸು).

ಆಪಃ ಸ್ನಿಗ್ಧಾನಿ ಸೃಜಂತು – ಆಪ್ ಎನ್ನುವ ಮಾತಿಗೆ ಸಾಮಾನ್ಯವಾಗಿ ನೀರು ಎಂದರ್ಥ. ಆದರೆ ಇಲ್ಲಿ ನೀರಿನ ಅಭಿಮಾನಿ ದೇವತೆಗಳನ್ನು ಸೂಚಿಸಲಾಗಿದೆ ('ಅಭಿಮಾನಿನ್ಯೋ ದೇವತಾಃ' ಸಾ.ಭಾ.). ಇಡೀ ವಿಶ್ವಕ್ಕೆ ಹಾಸುಹೊಕ್ಕಾಗಿರುವುದು ನೀರಿನ ತತ್ತ್ವ; ಎಲ್ಲಕ್ಕೂ ಮೊದಲಿದ್ದುದು ಅದೇ; ಅದರಿಂದಲೇ ಎಲ್ಲವೂ ಹೊರಬಂದುದು ('ಯದಗ್ರೇ ಆಪ ಏವಾಸನ್ ಅದ್ಭ್ಯಃ ಸರ್ವಮಭೂಜ್ಜಗತ್', ಸೂ.ಸಂ.). ನೀರಿನಲ್ಲಿರುವ ಗುಣವೇ ಸ್ನೇಹ. ಸ್ನೇಹವೆಂದರೆ ಬೇರೆ ಬೇರೆ ಪದಾರ್ಥಗಳನ್ನು ಒಂದುಗೂಡಿಸುವ ಶಕ್ತಿ; ಜಿಡ್ಡು, ಅಂಟು; ಅದಿಲ್ಲದಿದ್ದರೆ ಜಗತ್ತು ಒಂದಾಗಿರುವುದು ಸಾಧ್ಯವಿಲ್ಲದೆ, ವ್ಯವಸ್ಥೆ ಮುರಿದುಬೀಳುತ್ತದೆ, ಎಲ್ಲವೂ ನಶಿಸಿಹೋಗುತ್ತದೆ ('ಅಪ್ಸು ಪ್ರತಿಷ್ಠಿತಃ ಸ್ನೇಹಃ, ತೇನೈವ ಪರಮಾಣವಃ ಜಗದ್‌ಭಾವಾಯ ಸಂಬದ್ಧಾಃ, ತದ್ಧಾನೌ ಸ್ಯಾಜ್ಜಗಲ್ಲಯಃ', ಸೂ.ಸಂ.).

ಹೀಗೆ ಸ್ನೇಹವನ್ನು (ಜಿಡ್ಡನ್ನು, ಅಂಟನ್ನು) ಎಲ್ಲಕ್ಕೂ ಒದಗಿಸಿದಾಗ, ಅವೆಲ್ಲವೂ 'ಸ್ನಿಗ್ಧ'ವಾಗುತ್ತವೆ ('ಸ್ನೇಹಯುಕ್ತಾನಿ ಕಾರ್ಯಾಣಿ' ಸಾ.ಭಾ.). ಸ್ನಿಗ್ಧವಾದ ವಸ್ತುಗಳು ಪರಸ್ಪರ ಸಂಲಗ್ನವಾಗಿದ್ದುಕೊಂಡು, ಪ್ರೀತಿಯನ್ನೂ ಮೈತ್ರಿಯನ್ನೂ ಪ್ರತಿನಿಧಿಸುತ್ತದೆ.

ಶ್ರೀದೇವಿಯ ಅನುಗ್ರಹವೇ ನೀರಿನ ತತ್ತ್ವ. ಹಾಗೆಂದೇ ನೀರನ್ನು 'ನಾರಾಃ' ಎಂದು ಕರೆದು, ಅದರಲ್ಲಿ ನೆಲೆಸಿರುವವನನ್ನು 'ನಾರಾಯಣ'ನೆಂದಿರುವುದು. ಲಕ್ಷ್ಮಿಯ ಅನುಗ್ರಹದಿಂದ, ಜಗತ್ತಿನಲ್ಲಿ ಸ್ನೇಹ ಹೆಚ್ಚಲಿ ಎಂದು ಇಲ್ಲಿ ಋಷಿಯ ಆಶಯ. 'ಸೃಜಂತು' ಎಂದರೆ ಒದಗಿಸಲಿ ('ಉತ್ಪಾದಯಂತು').

ಚಿಕ್ಲೀತ – ಚಿಕ್ಲೀತನೆಂಬ ಋಷಿಯನ್ನು, ಶ್ರೀಪುತ್ರನನ್ನು ಉದ್ದೇಶಿಸಿ ಹೇಳಿದ ಮಂತ್ರ ಇದು. ಅವನನ್ನು 'ಭಗವಾನ್ ಋಷಿಃ' ಎಂದೂ (ಸಾ.ಭಾ.), 'ದುರ್ಜಯನಾದ ಕಾಮದೇವ'ನೆಂದೂ (ಸೂ.ಸೂಂ.), ಲಕ್ಷ್ಮಿಯ ಅಂತಃಪುರದ ದ್ವಾರಪಾಲಕನೆಂದೂ (ಶ್ರೀ.ಸೂ.ಭಾ.) ವರ್ಣಿಸಿದ್ದಾರೆ. ನೀರು ಮತ್ತು ಅನ್ನ ಈ ಎರಡು ತತ್ತ್ವಗಳಿಂದಾದುದು ಮನಸ್ಸು; ಮನಸ್ಸಿನಿಂದ ಹುಟ್ಟಿದವನು ಕಾಮ. ಇಡೀ ಜಗತ್ತಿನ ವ್ಯವಹಾರಕ್ಕೆಲ್ಲ ಅವನೇ ಕಾರಣ, ಮತ್ತು ಎಲ್ಲ ಪುರುಷಾರ್ಥಗಳನ್ನೂ ಸಾಧಿಸುವವನು ಅವನೇ ('ಅಬನ್ನವಿಕೃತೌ ಚಿತ್ತೇ ಜಾತಃ ಕಾಮೋ ಹಿ ಚಿತ್ತಜಃ; ಅಯಮೇವ ಹಿ ಸಂಸಾರಹೇತುಃ, ಸರ್ವಾರ್ಥ ಸಾಧಕಃ'). ಆದ್ದರಿಂದ ಈ ಮಂತ್ರ ಅವನನ್ನು ಕುರಿತದ್ದು.



ಅಮೃತೇಶ್ವರೀ ಯಂತ್ರ

ದೇವೀಂ ಮಾತರಂ ಶ್ರಿಯಂ ಚ ಮೇ ಕುಲೇ ನಿ ವಾಸಯ – ಹಿಂದಿನ ಮಂತ್ರದಲ್ಲಿ ಬಂದಂತೆಯೇ ಲಕ್ಷ್ಮಿಯನ್ನು ಚಿಕ್ಲೀತನ ತಾಯಿಯೆಂದೋ ಇಡೀ ವಿಶ್ವದ ತಾಯಿಯೆಂದೋ ಬಣ್ಣಿಸಿದೆ. ದೇವಿಯೆಂಬ ಹೊಸ ವಿಶೇಷಣವನ್ನೂ ಇಲ್ಲಿ ಸೇರಿಸಿದ್ದಾರೆ. ತಾಯಿಯ ರೂಪದಲ್ಲೇ ಎಲ್ಲ ಪ್ರಾಣಿಗಳಲ್ಲೂ ಬೆಳಗುವವಳು ('ದೀವ್ಯತಿ') ಎಂಬರ್ಥದಲ್ಲಿ ಅವಳು ದೇವಿ.

ಮಂತ್ರದ ಎರಡನೆಯ ಪಾದದ ಮೊದಲಲ್ಲಿ ಬರುವ 'ನಿ' ಎಂಬ ಪದಖಂಡವನ್ನು ಮುಂದೆ ಬರುವ 'ವಾಸಯ' ಎಂಬ ಪದಕ್ಕೆ ಉಪಸರ್ಗವಾಗಿ ಸೇರಿಸಿಕೊಳ್ಳಬೇಕು. 'ನಿವಾಸಯ' ಎಂದರೆ ನೆಲೆಗೊಳಿಸು ; ಲಕ್ಷ್ಮಿಯು ನನ್ನ ಮನೆಯಲ್ಲಿ ('ಮೇ ಕುಲೇ') ಅಥವಾ ನನ್ನ ವಂಶದಲ್ಲಿ ಎಂದೆಂದೂ ನೆಲೆಗೊಳ್ಳುವಂತೆ ಮಾಡು. 'ನಿ' ಎಂಬ ಪದಖಂಡವಾದಮೇಲೆ ಬಂದಿರುವ 'ಚ' ಎಂಬುದಕ್ಕೆ 'ಮತ್ತು' ಎಂದರ್ಥ. 'ನೀನು ನನ್ನ ಮನೆಯಲ್ಲಿರು' 'ವಸ ಮೇ ಗೃಹೇ') ಮತ್ತು 'ಲಕ್ಷ್ಮಿ'ಯನ್ನು ನನ್ನ ಮನೆಯಲ್ಲಿ ನೆಲೆಗೊಳಿಸು ('ಶ್ರಿಯಂ ಮೇ ಕುಲೇ ನಿವಾಸಯ').

ಈ ಮಂತ್ರದಲ್ಲಿ ಶ್ರೀಸುತನಾದ ಚಿಕ್ಲೀತ ಉದ್ದಿಷ್ಟನಾಗಿದ್ದಾನೆ. ಮಂತ್ರದ ತಾತ್ಪರ್ಯವನ್ನು ಹೇಳುವ ಶ್ಲೋಕವೊಂದಿದೆ (ಸೂ.ಸಂ.) –

ಚಿಕ್ಲೀತ ಶ್ರೀಸುತ ಸ್ವಾಮಿಂಶ್ಚಿರಂ ನಿವಸ ಮದ್‌ಗೃಹೇ ।
ತ್ವದಾಗಮನಮಾತ್ರೇಣ ತ್ವನ್ಮಾತಾ ತ್ವಾಮನುವ್ರಜೇತ್ ।
ತ್ವಯಿ ಪ್ರೀತಿಪರಾ ಸಾ ಹಿ ತವ ಛಂದೋನುವರ್ತಿನೀ ॥

ಶ್ರೀದೇವಿಗೆ ತುಂಬ ಪ್ರೀತಿಪಾತ್ರನಾದ ಮಗ ಚಿಕ್ಲೀತನೆಂದೂ, ಅವನ ಮನಸ್ಸಿನಂತೆ ತಾಯಿಯು ನಡೆದುಕೊಳ್ಳುವಳೆಂದೂ, ಅವನು ಸಾಧಕನ ಮನೆಗೆ ಬಂದೊಡನೆ ಶ್ರೀದೇವಿಯೂ ತಡಮಾಡದೆ ಬಂದೊದಗುವಳೆಂದೂ ಶ್ಲೋಕ ತಿಳಿಸುತ್ತದೆ.

ಮಂತ್ರದ ಋಷಿ ಚಿಕ್ಲೀತ (ಸಾ.ಭಾ.); ಚಂದ್ರನೆಂದೂ ಒಂದು ವಿವರವಿದೆ (ಸೂ.ಸಂ.); ಛಂದಸ್ಸು ಅನುಷ್ಟುಪ್ ; ದೇವತೆ ಅಮೃತೇಶ್ವರಿಯಾದ ಚಿಕ್ಲೀತಮಾತೃವಾದ ಲಕ್ಷ್ಮಿ. 'ಅಂ' ಎಂಬುದು ಬೀಜ; 'ಲಂ' ಎಂಬುದು ಶಕ್ತಿ; 'ಶ್ರೀಂ' ಎಂಬುದು ಕೀಲಕ. ಧ್ಯಾನಶ್ಲೋಕ ಇದು (ಸೂ.ಸಂ.) –

ನಮೋಽಸ್ತು ತುಭ್ಯಂ ಚಿಕ್ಲೀತ ಶ್ರೀದೇವ್ಯೈ ಚ ನಮೋ ನಮಃ। ಇನ್ನೊಂದು ಧ್ಯಾನಶ್ಲೋಕವೂ ಇದೆ –

ಧ್ಯಾಯೇತ್ ಕಲ್ಪತರೋರ್ಮೂಲೇ ರತ್ನಸಿಂಹಾಸನೇ ಸ್ಥಿತಾಂ
ಪದ್ಮದ್ವಯಧರಾಂ ಪದ್ಮಾಂ ವರಧಾಭಯಧಾರಿಣೀಮ್ ।
ಸರ್ವರತ್ನ ವಿಚಿತ್ರಾಂಗೀಂ ರಕ್ತಶ್ರೀಪಾದಪೀಠಿಕಾಂ
ಹೇಮದಂಡಸಿತಚ್ಛತ್ರಚಾಮರದ್ವಯವೀಜಿತಾಂ ॥

ಈ ಮಂತ್ರದಿಂದ ಲಕ್ಷ್ಮೀನಾಮಾವಳಿಗೆ ಸೇರಿರುವ ಹೆಸರು ಯಾವುದೂ ಇರದು.

ಮಂತ್ರ 13

ಆರ್ದ್ರಾಂ ಪುಷ್ಕರಿಣೀಂ ಪುಷ್ಟಿಂ ಪಿಂಗಲಾಂ ಪದ್ಮಮಾಲಿನೀಂ ।
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥

(ಓ ಜಾತವೇದ, ದಯಾಮಯಿಯೂ, ಆನೆಗಳಿಂದ ಸೇವಿತಳೂ, ಲೋಕಗಳಿಗೆ ಬಲವೂ, ಕೆಂಪಡರಿದ ಹಳದಿ ಬಣ್ಣದವಳೂ, ತಾವರೆ ಹೂ ಮಾಲೆಯನ್ನು ತೊಟ್ಟವಳೂ, ಚಂದ್ರನಂತೆ ಹಿತಕಾರಿಣಿಯೂ, ಬಂಗಾರದ ಆಕೃತಿಯುಳ್ಳವಳೂ ಆದ ಲಕ್ಷ್ಮಿಯನ್ನು ನನ್ನೆಡೆಗೆ ಬರಮಾಡು !)

ಆರ್ದ್ರಾಂ - ಈ ಮಾತಿಗೆ ಅರ್ಥ ಹಿಂದೆಯೇ ಬಂದಿದೆ. ದಯಾರ್ದ್ರಳೆಂದೂ ಶೀತಳಸ್ವಭಾವದವಳೆಂದೂ ವಿವರಣೆಗಳಿವೆ. ಗಜಲಕ್ಷ್ಮಿಯ ರೂಪದಲ್ಲಿ ಲಕ್ಷ್ಮಿಯು ಆನೆಗಳಿಂದ ಅಭಿಷಿಕ್ತಳಾಗುವಂತೆ ಕಲ್ಪನೆಯಿದೆ; ಹೀಗೆ ಅವಳು ಎಂದೂ ಒದ್ದೆಯಾದ ಮೈಯುಳ್ಳವಳು ('ಅಭಿಷೇಕಾದ್ರಾಂ'). ಭಕ್ತನು ತನ್ನ ಚಿತ್ತವನ್ನು ಮೈತ್ರೀ, ಮುದಿತಾ, ಕರುಣಾ, ತಿತಿಕ್ಷಾ ಎಂಬ ಶೀತಳ ಗುಣಗಳಿಂದ ಸಂಸ್ಕಾರಪಡಿಸಿಕೊಂಡಾಗ (ಇದನ್ನು ಚಿತ್ತಪರಿಕರ್ಮವೆನ್ನುತ್ತಾರೆ) ಲಕ್ಷ್ಮಿಯನ್ನು ಪಡೆದುಕೊಳ್ಳುವನೆಂಬ ಭಾವ ಇಲ್ಲಿ ಸೂಚಿತವಾಗಿದೆ.

ಪುಷ್ಕರಿಣೀಂ – ಈ ಮಾತಿಗೆ ಹೆಣ್ಣು ಆನೆ ಎಂಬ ಅರ್ಥವಿದೆ ; ಗಂಡು ಆನೆಗೆ ಪುಷ್ಕರವೆಂದು ಹೆಸರು. ಆನೆಯ ಸೊಂಡಿಲ ತುದಿಗೆ ಇರುವ ಪುಷ್ಕರವೆಂಬ ನಿರ್ದೇಶನವನ್ನೇ ಆನೆಗೆ ಬಳಸುತ್ತಾರೆ ('ಪುಷ್ಕರಶಬ್ದೋ ಗಜಶುಂಡಾಗ್ರ ವಾಚಕಃ', ಸಾ.ಭಾ.) ಎಂಟೂ ದಿಕ್ಕುಗಳಲ್ಲಿ ಆಧಾರವಾಗಿ ಜಗತ್ತನ್ನು ಎತ್ತಿ ಹಿಡಿದಿರುವ ದಿಗ್ಗಜಗಳು ಲಕ್ಷ್ಮಿಗೆ ತಮ್ಮ ಸೊಂಡಿಲ ತುದಿಗಳಿಂದ ಅಥವಾ ಅಲ್ಲಿ ಹಿಡಿದ ಕಲಶಗಳಿಂದ ಅಭಿಷೇಕ ಮಾಡುತ್ತಿರುವ ಚಿತ್ರಣವನ್ನು ಇಲ್ಲಿ ಸೂಚಿಸಿದ್ದಾರೆ ('ಅಭಿಷೇಕೋದ್ಯುಕ್ತ-ದಿಗ್ಗಜ-ಶುಂಡಾಗ್ರಾಂ', ಸಾ.ಭಾ.). ಲಕ್ಷ್ಮಿಯ ಎರಡೂ ಪಕ್ಕಗಳಲ್ಲಿ ಎರಡು ಆನೆಗಳಿದ್ದು ಅವುಗಳ ಸೊಂಡಿಲಿನಿಂದ ಬಂಗಾರದ ಕಲಶಗಳನ್ನು ಹಿಡಿದು ಲಕ್ಷ್ಮಿಯ ತಲೆಯ ಮೇಲೆ ನೀರು ಸುರಿಯುತ್ತಿರುವ ಚಿತ್ರಣವೂ ಇದೆ. ಶ್ರೀ.ತ.ದಲ್ಲಿ ಈ ಎರಡು ಆನೆಗಳನ್ನು 'ಮಮಕಾರ' (ನಾನು, ನನ್ನದು ಎಂಬ ಭಾವ) ಮತ್ತು 'ಮದ' ಎಂದು ನಿರ್ದೇಶಿಸಿದೆ ; ಅವುಗಳ ಸೊಂಡಿಲಲ್ಲಿ ಎತ್ತಿ ಹಿಡಿದ ಕಲಶಗಳು 'ಆಶಾ' (ಆಸೆ) ಮತ್ತು 'ಪ್ರೀತಿ'; ಕಲಶಗಳಿಂದ ಸುರಿಯುತ್ತಿರುವ ನೀರು 'ತೃಪ್ತಿ' ('ದೇವತೇ ಗಜರೂಪಿಣ್ಯೌ ಶ್ರೀದೇವೀಂ ಅಭಿಷಿಂಚಂತಃ, ಮಮಕಾರೋ ಮದಶ್ಚೇತಿ ವರ್ತೇತೇ, ಪಾರ್ಶ್ವಯೋರ್ದ್ವಯೋಃ, ತಯೋಃ ಶುಂಡಾಗ್ರಯೋರ್ಘಟ ಆಶಾ ಪ್ರೀತ್ಯಾಹ್ವಯೌ ಉಭೌ' ಇತ್ಯಾದಿ).

ಪುಷ್ಕರಿಣಿಯೆಂಬ ಮಾತಿಗೆ ನೈದಿಲೆಗಳಿರುವ ಕೊಳ, ಸರೋವರವೆಂದೂ ಅರ್ಥ. ಪುಷ್ಕರವೆಂದರೆ ನೀರು ಅಥವಾ ನೀರಿನಲ್ಲಿ ಬೆಳೆಯುವ ನೈದಿಲೆ. ತಾವರೆ ಗಿಡದ ಬಳ್ಳಿಗೂ ಪುಷ್ಕರಿಣಿಯೆಂಬ ಹೆಸರಿದೆ. ತಾವರೆ ಹೂಗಳನ್ನು ಕೈಗಳಲ್ಲಿ ಹಿಡಿದವಳೆಂದೋ, ನೈದಿಲೆಗಳಿರುವ ಕೊಳದ ನಡುವೆ ಇರುವವಳೆಂದೋ, ತಾವರೆ ಬಳ್ಳಿಯಂತೆ ಇರುವವಳೆಂದೋ ('ಪದ್ಮಲತಾ ರೂಪಾಂ', ಸಾ.ಭಾ.) ಅರ್ಥಮಾಡಬಹುದು.

ಚಾಂದ್ರಲಕ್ಷ್ಮೀ ಯಂತ್ರ

ಪುಷ್ಟಿಂ – ಪೋಷಣೆ ಮಾಡುವುದೆಂದರೆ ಬಲಗೊಳಿಸುವುದು, ಬೆಳೆಸುವುದು, ಪೂರ್ಣಗೊಳಿಸುವುದು. ಇದಕ್ಕೆ ಲಕ್ಷ್ಮೀ ಅಭಿಮಾನಿದೇವತೆ ('ಪುಷ್ಟ್ಯಭಿಮಾನಿನೀಂ', ಸಾ.ಭಾ.). ಮಾರ್ಕಂಡೇಯಪುರಾಣದ 'ಯಾ ದೇವೀ ಸರ್ವಭೂತೇಷು ಪುಷ್ಟಿರೂಪೇಣ ಸಂಸ್ಥಿತಾ' ಎಂಬ ವರ್ಣನೆ ಪ್ರಸಿದ್ಧವಾಗಿದೆಯಷ್ಟೆ? ಜಗತ್ತಿಗೇ ಅವಳಿಂದ ಧಾರಣ, ಭರಣ, ಪೋಷಣಾದಿಗಳು.

ಪಿಂಗಲಾಂ – ಪಿಂಗವೆಂದರೆ ಬೆಂಕಿ; ದೀಪಶಿಖೆಯಲ್ಲಿನ 'ನೀಲಪೀತ ಮಿಶ್ರಿತವರ್ಣ'ವೂ ಪಿಂಗವೆನಿಸಿಕೊಳ್ಳುತ್ತದೆ. ಇದಕ್ಕೆ ಸಂಬಂಧಿಸಿದ್ದು ಪಿಂಗಲ. ಇಲ್ಲಿ 'ಪಿಂಗಲಾಂ' ಎನ್ನುವ ಮಾತಿಗೆ 'ಪಿಂಗಲವರ್ಣಾಂ' (ಸಾ.ಭಾ.), 'ಹರಿದ್ವರ್ಣಾಂ' (ಮಂ.ಕ.), 'ಕದ್ರುವರ್ಣಾಂ' (ಪೃ.ಭಾ.) ಎಂದು ಅರ್ಥಗಳನ್ನು ಸೂಚಿಸಿದ್ದಾರೆ. ಹಳದಿ ಬಣ್ಣವೆಂದು, ಬಂಗಾರದ ಬಣ್ಣವೆಂದು, ಕೆಂಪುಛಾಯೆಯ ಮೇಲೆ ಇರುವ ಹಳದಿಯೆಂದು ಅರ್ಥ. ಲಕ್ಷ್ಮಿಯ ಬಣ್ಣ ಇದೆಂದು ಈ ವಿಶೇಷಣ.

ಪಿಂಗಲೆಯೆಂದು ದುರ್ಗೆಗೂ ಹೆಸರಿದೆ. ತಂತ್ರಶಾಸ್ತ್ರದಲ್ಲಿ ಪಿಂಗಲಾ ಮತಪ್ರಕಾಶ, ಪಿಂಗಲಾರ್ಥದೀಪ, ಪಿಂಗಲಾತತ್ವ ಪ್ರಕಾಶಿಕೆ, ಪಿಂಗಲಾಪ್ರಣವೋಪನಿಷತ್ ಮೊದಲಾದ ಗ್ರಂಥಗಳಿವೆ.

ಮಂತ್ರದಲ್ಲಿ ಬಂದಿರುವ ಉಳಿದ ಮಾತುಗಳಿಗೆ (ಪದ್ಮಮಾಲಿನೀಂ, ಚಂದ್ರಾಂ, ಹಿರಣ್ಮಯೀಂ) ಈಗಾಗಲೇ ವಿವರಣೆ ಬಂದಿದೆ.

ಈ ಮಂತ್ರವನ್ನು ಪಠಿಸಬೇಕಾದ ಸಂದರ್ಭವನ್ನು ಕೆಲವು ಆಕರಗಳು ಸೂಚಿಸಿವೆ. ರಾತ್ರಿಯಲ್ಲಿ ಚಂದ್ರಮಂಡಲವನ್ನು ನೋಡುತ್ತ ಇದ್ದು ಈ ಮಂತ್ರವನ್ನು ಹೇಳಬೇಕೆಂದು ಒಂದು ಆಕರ ('ಚಂದ್ರಮಂಡಲಮಾಲಕ್ಷ್ಯ', ಶ್ರೀ.ತ.). ಈ ಮಂತ್ರವು ಚಂದ್ರಮಂಡಲದಲ್ಲಿ ಲಕ್ಷ್ಮಿಯನ್ನು ಕಾಣಿಸುವಂತೆ ಮುಂದಿನ ಮಂತ್ರವು ಸೂರ್ಯಮಂಡಲದಲ್ಲಿ ಲಕ್ಷ್ಮಿಯನ್ನು ಕಾಣಿಸುತ್ತದೆ. ಇವೆರಡೂ ಮಂತ್ರಗಳು ಜಾತವೇದ ಅಗ್ನಿಯನ್ನೇ ಉದ್ದೇಶಿಸಿವೆ.

ಈ ಮಂತ್ರದ ಋಷಿ ಜಾತವೇದ; ಛಂದಸ್ಸು ಅನುಷ್ಟುಪ್ ; ದೇವತೆ ಶ್ರೀ ಮಹಾಲಕ್ಷ್ಮಿ. 'ಅಂ' ಎಂಬುದು ಬೀಜ ; 'ಸ್ವಾಹಾ' ಎಂಬುದು ಶಕ್ತಿ; 'ಶ್ರೀಂ' ಕೀಲಕ. ಹಿಂದಿನ ಮಂತ್ರಕ್ಕೆ ಹೇಳಿದ ಧ್ಯಾನಶ್ಲೋಕವೇ ಇಲ್ಲಿಯೂ ಪ್ರಸಕ್ತವಾಗಿದೆ.

ಈ ಮಂತ್ರದಿಂದ ಲಕ್ಷ್ಮೀನಾಮಾವಳಿಗೆ ಸೇರಿರುವ ಮೂರು ಹೆಸರುಗಳು –

1. (47) ಪುಷ್ಕರಿಣ್ಯೈ ನಮಃ
2. (48) ಪುಷ್ಟ್ಯೈ ನಮಃ
3. (49) ಪಿಂಗಲಾಯೈ ನಮಃ

ಮಂತ್ರ 14

ಆರ್ದ್ರಾಂ ಯಃಕರಿಣೀಂ ಯಷ್ಟಿಂ ಸುವರ್ಣಾಂ ಹೇಮಮಾಲಿನೀಂ ।
ಸೂರ್ಯಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥

(ಓ ಜಾತವೇದ, ದಯಾಮಯಿಯೂ, ಯಃಕರಿಣಿಯೂ, ಧರ್ಮದಂಡವೂ, ಹೊಳೆಯುವ ಬಣ್ಣವುಳ್ಳವಳೂ, ಬಂಗಾರದ ಮಾಲೆಗಳನ್ನು ತೊಟ್ಟವಳೂ, ಸೂರ್ಯರೂಪಿಣಿಯೂ, ಬಂಗಾರದ ಆಕೃತಿಯುಳ್ಳವಳೂ ಆದ ಲಕ್ಷ್ಮಿಯನ್ನು ನನ್ನೆಡೆಗೆ ಬರಮಾಡು).

ಹಿಂದಿನ ಮಂತ್ರದಲ್ಲಿರುವ ಮಾತುಗಳನ್ನೇ ಬಹುಮಟ್ಟಿಗೆ ಇಲ್ಲಿ ಬಳಸಿಕೊಂಡಿದೆ. ಕೆಲವು ಮಾತುಗಳು ಹೊಸದಾಗಿ ಬಂದಿವೆ.

ಯಃಕರಿಣೀಂ, ಯಷ್ಟಿಂ - ಈ ಮಾತಿನ ಅರ್ಥ ಅಷ್ಟಾಗಿ ಸ್ಪಷ್ಟವಾಗುವುದಿಲ್ಲ, ಕೆಲವರು 'ಯಷ್ಟಿಕರಿಣಿ' ಎಂಬ ಮಾತಿನ ಭ್ರಷ್ಟರೂಪ 'ಯಃಕರಿಣಿ'ಯೆಂದು ಸೂಚಿಸಿದ್ದಾರೆ (ಸಾ.ಭಾ. 'ಟಿಲೋಪಶ್ಛಾಂದಸಃ'); ಯಷ್ಟಿಯೆಂದರೆ ಕೋಲು, ಕಟ್ಟಿಗೆ ('ಯಷ್ಟಿಕರಾಂ ವೇತ್ರಹಸ್ತಾಂ'); ಕೋಲನ್ನು ಹಿಡಿದವಳೆಂದರೆ ಧರ್ಮದಂಡವನ್ನು ಹಿಡಿದವಳು, ಒಡತಿ, ನಿಯಾಮಿಕೆ. ಮುಂದೆ ಬಂದಿರುವ 'ಯಷ್ಟಿ' ಎಂಬ ಮಾತಿಗೆ ಧರ್ಮದಂಡವೆಂದೇ ಅರ್ಥ ಮಾಡಿದ್ದಾರೆ ('ದಂಡರೂಪಾಂ', ಸಾ.ಭಾ., ''ಧರ್ಮದಂಡಸ್ವರೂಪಿಣೀಂ''). ಮಾತೃದೇವತೆಯು ನಿಯತಿಯೂ ಹೌದು, ನಿಯಾಮಕಳೂ ಹೌದು; ತಾನೇ ಪದ್ಮಸ್ವರೂಪಳು, ಪದ್ಮವನ್ನು ಕೈಯಲ್ಲಿ ಹಿಡಿದೂ ಇದ್ದಾಳೆ ಎಂಬಂತೆ. ಮೂಲಪ್ರಕೃತಿಯೂ ಅವಳೇ, ಪ್ರಕೃತಿಯೂ ಅವಳೇ.

ಇನ್ನೊಂದು ವಿವರಣೆಯ ಪ್ರಕಾರ, 'ಯಃ' ಎನ್ನುವ ಮಾತಿಗೆ ಓಡಿಯಾಡುತ್ತಿರುವುದೆಂಬ ಅರ್ಥವೂ ಇದೆ. 'ಕರಿಣಿ'ಯೆಂದರೆ ಹೆಣ್ಣಾನೆ. ಲಕ್ಷ್ಮಿಯನ್ನು ಜಗತ್ತಿನಲ್ಲಿ ಅಡ್ಡಾಡುವ ಹೆಣ್ಣಾನೆಯೆಂದು ಚಿತ್ರಿಸಿಕೊಂಡಿದ್ದಾರೆ. ಹಿಂದಿನ ಮಂತ್ರದಲ್ಲಿ ಬಂದ ಪುಷ್ಕರಿಣಿಯೆನ್ನುವ ವಿಶೇಷಣಕ್ಕೆ ಇದು ಸಮಾನಾರ್ಥಕವಾದುದೆಂದು ಸೂಚನೆ. ಪುಷ್ಕರಿಣಿಯೆನ್ನುವುದು ಕುಮುದವೆಂಬ ದಿಗ್ಗಜದ ಹೆಣ್ಣಾನೆಯ ಹೆಸರು; ಅದನ್ನೇ ಇಲ್ಲಿ 'ಯಃಕರಿಣಿ' ಯೆಂದು ಕರೆದಿದೆ.

ಸುವರ್ಣಾಂ - ಸುವರ್ಣವೆಂದರೆ ಶೋಭನವಾದ ಬಣ್ಣವಿರುವ ಬಂಗಾರ, ಹೊಳೆಯುವ ಪದಾರ್ಥ. ಇಲ್ಲಿ ಲಕ್ಷ್ಮಿಯನ್ನು ಸುವರ್ಣವೆಂದು ಕರೆದಿರುವುದು 'ರುಕ್ಮ ರೂಪಿಣಿ' ಎಂಬ ಅರ್ಥದಲ್ಲಿ, ರುಕ್ಮ ರೂಪವೆಂದರೆ ಜಾಗ್ರದವಸ್ಥೆಯಲ್ಲಿ ಹೊರಗೆ ಕಾಣುವ ಬೆಳಕಿಗಿಂತ, ಕನಸಿಗೆ ಕಾರಣವಾಗಿ ಒಳಗೇ ಇರುವ ಬೆಳಕಿನಲ್ಲಿ ತೋರಿಕೊಳ್ಳುವ ರೂಪ ('ರುಕ್ಮಾಭಾಂ, ಸ್ವಪ್ನಧೀ ಗಮ್ಯಾಂ', ಶ್ರೀ.ತ.).

ಸೂರ್ಯಲಕ್ಷ್ಮೀ



ಸೂರ್ಯಲಕ್ಷ್ಮೀ ಯಂತ್ರ

'ಸು' ಎಂದರೆ ಅತ್ಯುತ್ಕೃಷ್ಟವಾದ ಕೊಡುಗೆ, ಮುಕ್ತಿ; ಅದನ್ನು ಭಕ್ತರಿಗೆ ನೀಡುವವಳು ಎಂಬರ್ಥದಲ್ಲಿಯೂ ಲಕ್ಷ್ಮಿ 'ಸುವರ್ಣ'ಳು (ಶ್ರೀ.ಸೂ.ಭಾ).

ಹೇಮಮಾಲಿನೀಂ - ಹೇಮವೆಂದರೆ ಬಂಗಾರ. ಬಂಗಾರದಿಂದ ಮಾಡಿದ ಕಮಲಹೂಗಳ ಮಾಲೆಯನ್ನು ಧರಿಸಿದವಳು ಹೇಮಮಾಲಿನಿ ('ಹೇಮ ವಿಕೃತ ಶೃಂಖಲಾದಿ ಮಾಲಾವತೀಂ', ಸಾ.ಭಾ.; 'ಹೇಮಪದ್ಮ ರಚಿತಸ್ರಗ್ವಿನೀಂ', ಪೃ.ಭಾ.).

ಹೇಮವೆನ್ನುವುದು ಸುಮೇರುಪರ್ವತಕ್ಕೂ ಹೆಸರು; ಅದು ಬಂಗಾರದ ಬೆಟ್ಟವೆಂಬ ಕಾರಣದಿಂದ. 'ಹೇಮಾದ್ರಿ', 'ಸೌವರ್ಣಪರ್ವತ' ಎಂದೆಲ್ಲ ಹೆಸರುಗಳಿರುವ ಈ ಬೆಟ್ಟವು ಭೂಮಂಡಲದ ಮಧ್ಯದಲ್ಲಿರುವುದೆಂದೂ, ಭೂಮಿಯನ್ನು ಹೊತ್ತಿರುವುದೆಂದೂ, ಅದರ ಸುತ್ತ ಪರ್ವತಗಳೂ ದ್ವೀಪಗಳೂ ಇರುವುವೆಂದೂ, ಅದರ ಶಿಖರದ ಮೇಲೆ ಸ್ವರ್ಗವಿರುವುದೆಂದೂ, ಅದರ ಸುತ್ತಲೂ ಸೂರ್ಯಚಂದ್ರರು ಸುತ್ತುತ್ತಿರುವರೆಂದೂ ವರ್ಣನೆಗಳಿವೆ. ಈ ಬೆಟ್ಟವನ್ನೇ ಮಾಲೆಯಾಗಿ ಧರಿಸಿಕೊಂಡ ಮೂಲಪ್ರಕೃತಿಯನ್ನು 'ಹೇಮಮಾಲಿನಿ' ಎಂದು ಕರೆದಿದ್ದಾರೆಂದೂ ಹೇಳುತ್ತಾರೆ (ಶ್ರೀ.ಗು.ರ.).

ಸೂರ್ಯಾಂ - ಹಿಂದಿನ ಮಂತ್ರದಲ್ಲಿ 'ಚಂದ್ರಾಂ' ಎಂದು ಬಂದಿರುವಂತೆ ಇಲ್ಲಿ 'ಸೂರ್ಯಾಂ' ಎಂದು ಬಂದಿದೆ. ಸೂರ್ಯನ ರೂಪದಲ್ಲಿ ತೋರಿಕೊಳ್ಳುವವಳು, ಸೂರ್ಯನಂತೆ ಪ್ರಕಾಶಮಾನವಾಗಿರುವವಳು, ಸೂರ್ಯನಂತೆ ಅತ್ಯುತ್ತಮವಾದ ನೆಲೆಯಲ್ಲಿರುವವಳು, ಜಗತ್ತಿನ ಆಗುಹೋಗುಗಳಿಗೆಲ್ಲ ಕಾರಣಳಾದವಳು ಎಂದು ತಾತ್ಪರ್ಯ ('ಸೂರ್ಯವತ್ ಪ್ರಕಾಶಮಾನಾಂ, ತದ್ರೂಪಾಂ ವಾ', ಸಾ.ಭಾ.; 'ಐಶ್ವರ್ಯರೂಪಾಂ', ಪೃ.ಭಾ.; 'ಸವಿತ್ರೀಂ ಸೂರ್ಯರೂಪಿಣೀಂ', ಶ್ರೀ.ತ.) ಸವಿತೃನಾಮಕ ವಿಷ್ಣುವು ಸೌರದೇವತೆಯೇ; ಅವನ ಮಡದಿಯಾದ ಲಕ್ಷ್ಮಿಯನ್ನು ಸೂರ್ಯೆಯೆಂದಿರುವುದು ಸಹಜವೇ. ಸೂರ್ಯೆ ಎಂದರೆ ನಿತ್ಯಸೂರಿಗಳಿಗೆ (ಅನಂತ, ಗರುಡ, ವಿಷ್ವಕ್ಸೇನರಿಗೆ) ಸದಾ ಸುಲಭಳಾಗಿರುವವಳು ಎಂದೂ ಅರ್ಥಮಾಡುತ್ತಾರೆ (ಶ್ರೀ.ಸೂ.ಭಾ.).

ಈ ಮಂತ್ರವನ್ನು ಸೂರ್ಯಮಂಡಲದ ಕಡೆ ತಿರುಗಿಕೊಂಡು ಜಪಿಸಬೇಕೆಂದು ವಿಧಿಯಿದೆ ('ಜಪೇನ್ನಿತ್ಯಂ ಪಶ್ಯನ್ನರ್ಕಂ', ಶ್ರೀ..ತ.). ತಾವರೆಹೂ ಅರಳುವುದು ಸೂರ್ಯನ ಕಿರಣದಿಂದ ಎಂಬ ಕಾರಣದಿಂದ ಸೂರ್ಯನು 'ಪದ್ಮಪ್ರಿಯ'; ಲಕ್ಷ್ಮಿಯನ್ನು 'ಪದ್ಮಪ್ರಿಯೆ' ಯೆಂದು ಕರೆದಿದ್ದಾರೆ.

ಸೂರ್ಯಮಂಡಲದಲ್ಲಿ ಲಕ್ಷ್ಮಿಯನ್ನು ಆಹ್ವಾನಿಸಿಕೊಂಡಿರುವ ಮಂತ್ರ ಇದು. ಆದರೆ ಸಾಧಕನು ತನ್ನ ಹೃದಯಕಮಲದಲ್ಲೇ ದೇವಿಯು ನೆಲೆಸಿರುವಂತೆ, ಚೈತನ್ಯರೂಪಿಣಿಯಂತೆ, ತನ್ನ ಶ್ರದ್ಧಾಭಕ್ತಿಗಳಿಂದ ಅವಳನ್ನು ಅಭಿಷೇಕ ಮಾಡುತ್ತಿರುವಂತೆ ಕಲ್ಪಿಸಿಕೊಳ್ಳಬೇಕೆಂಬ ವಿಧಿಯಿದೆ ('ಹೃತ್ಪದ್ಮವಾಸಿನೀ ದೇವೀ ಚಿದ್ರೂಪಿಣ್ಯಭಿಷಿಚ್ಯತೇ', ಶ್ರೀ.ತ.). ಸೂರ್ಯನಿಗೂ ಕಮಲಕ್ಕೂ ಇರುವ ಸಂಬಂಧ ಪ್ರಸಿದ್ಧವಾದುದು. ಸೂರ್ಯನ ಕಿರಣಗಳಿಂದಲೇ ತಾವರೆ ಹೂ ಅರಳುವುದು,

ಸಂಜೆಯೆಂದು ಸೂರ್ಯ ಮುಳುಗುವಾಗ ಇದೂ ಮುದುಡಿಕೊಳ್ಳುತ್ತದೆ. ಹಾಗೆಂದೇ ಸೂರ್ಯನು 'ಪದ್ಮಪ್ರಿಯ'; ಲಕ್ಷ್ಮಿಯನ್ನೂ 'ಪದ್ಮಪ್ರಿಯೆ'ಯೆಂದು ಬಣ್ಣಿಸಿರುವುದು. ಭಕ್ತನ ಹೃದಯವೇ ಕಮಲ, ಅಂತರ್ಯಾಮಿನಿಯಾದ ಲಕ್ಷ್ಮಿ ಅದನ್ನು ವಿಕಸಿತಗೊಳಿಸುತ್ತಾಳೆ. ಆದುದರಿಂದ ಭಕ್ತನ ಪಾಲಿಗೆ ಲಕ್ಷ್ಮಿ ಸೂರ್ಯಮಂಡಲವೇ.

ಈ ಮಂತ್ರದ ಋಷಿ ಜಾತವೇದ (ಅಗ್ನಿ); ಛಂದಸ್ಸು ಅನುಷ್ಟುಪ್; ದೇವತೆ ಶ್ರೀರಾಜ್ಯಲಕ್ಷ್ಮಿ. 'ಶ್ರೀಂ' ಎಂಬುದು ಬೀಜ ; 'ಹಂ' ಎಂಬುದು ಶಕ್ತಿ; 'ಹ್ರೀಂ' ಎಂಬುದು ಕೀಲಕ. ಧ್ಯಾನಶ್ಲೋಕ ಇದು –

ಪದ್ಮಂ ಮಣಿಮಯಂ ಕುಂಭಂ ಇಕ್ಷುಚಾಪಂ ಚ ಬಿಭ್ರತೀಮ್ ।
ಪುಷ್ಪಬಾಣಂ ಮಹಾಲಕ್ಷ್ಮೀಂ ಧ್ಯಾಯೇದ್ ರಾಜ್ಯಪ್ರದಾಯಿನೀಮ್ ॥

ಈ ಮಂತ್ರದಿಂದ ಲಕ್ಷ್ಮೀನಾಮಾವಳಿಗೆ ಸೇರಿರುವ ಹೆಸರುಗಳು -

1. (50) ಯಷ್ಟ್ಯೇ ನಮಃ
2. (51) ಸುವರ್ಣಾಯೈ ನಮಃ
3. (52) ಹೇಮಮಾಲಿನ್ಯೈ ನಮಃ
4. (53) ಸೂರ್ಯಾಯೈ ನಮಃ

ಮಂತ್ರ 15

ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಂ ।
ಯಸ್ಯಾಂ ಹಿರಣ್ಯಂ ಪ್ರಭೂತಂ ಗಾವೋ ದಾಸ್ಯೋಽಶ್ವಾಂ ವಿಂದೇಯಂ ಪುರುಷಾನಹಂ ॥

(ಓ ಜಾತವೇದ, ಎಂದಿಗೂ (ನನ್ನಿಂದ) ಕದಲಿ ಹೋಗದಿರುವ ಲಕ್ಷ್ಮಿಯನ್ನು ನನ್ನೆಡೆಗೆ ಬರಮಾಡು ; ಆಕೆ ಬಂದಳೆಂದರೆ ಹೆಚ್ಚಾದ ಬಂಗಾರವನ್ನೂ, ಹಸುಗಳನ್ನೂ, ದಾಸಿಯರನ್ನೂ, ಕುದುರೆಯನ್ನೂ, ಮನುಷ್ಯರನ್ನೂ ಪಡೆದುಕೊಳ್ಳುವೆನು).

ಈ ಮಂತ್ರದಲ್ಲಿ ಬಂದ ಎಲ್ಲ ಮಾತುಗಳಿಗೂ ವಿವರಣೆ ಹಿಂದಿನ ಮಂತ್ರಗಳಲ್ಲಿ ಬಂದಿದೆ. ಈ ಮಂತ್ರವು ಇಡೀ ಸೂಕ್ತಕ್ಕೆ ಫಲಶ್ರುತಿಯಂತೆಯೂ ಇದೆ. ಲಕ್ಷ್ಮಿಯ ಸಾನ್ನಿಧ್ಯದಿಂದ ಸಂಪತ್ತು, ಸೌಲಭ್ಯ, ಸೌಹಾರ್ದ ಇವೆಲ್ಲವೂ ಒದಗಿಬರುವುವೆಂದು ತಾತ್ಪರ್ಯ. ಲಕ್ಷ್ಮಿಯು 'ಐಹಿಕ ಸರ್ವಕಾಮಪ್ರದೆ' (ಮಂ.ಕ.).

ಈ ಮಂತ್ರಕ್ಕೆ ಋಷಿ ಕುಬೇರ ; ಛಂದಸ್ಸು ಪ್ರಸ್ತಾರ-ಪಂಕ್ತಿ ; ದೇವತೆ ಮಹಾಲಕ್ಷ್ಮಿ. 'ಹ್ರೀಂ' ಎಂಬುದು ಬೀಜ ; 'ಶ್ರೀಂ' ಎಂಬುದು ಶಕ್ತಿ; 'ಹ್ರೀಂ' ಕೀಲಕ. ಧ್ಯಾನಶ್ಲೋಕ ಇದು —

ಧ್ಯಾಯೇಲ್ಲಕ್ಷ್ಮೀಂ ಪ್ರಹಸಿತಮುಖೀಂ ರಾಜ್ಯಸಿಂಹಾಸನಸ್ಥಾಂ
ಮುದ್ರಾಶಕ್ತಿಂ ಸಕಲವಿನುತಾಂ ಸರ್ವಸಂಸೇವ್ಯಮಾನಾಮ್ ।
ಅಗ್ನೌ ಪೂಜ್ಯಾಮಖಿಲಜನನೀಂ ಹೇಮವರ್ಣಾಂ ಹಿರಣ್ಯಾಂ
ಭಾಗ್ಯೋಪೇತಾಂ ಭುವನಸುಖದಾಂ ಭಾರ್ಗವೀಂ ಭೂತಧಾತ್ರೀಮ್ ॥

ಈ ಮಂತ್ರದಿಂದ ಲಕ್ಷ್ಮೀನಾಮಾವಳಿಗೆ ಸೇರಿರುವ ಹೆಸರು ಯಾವುದೂ ಇರದು.



ಸಮಷ್ಟಿ ಯಂತ್ರ

ಪರಿಶಿಷ್ಟ ಶ್ಲೋಕಗಳು

1. ಯಃ ಶುಚಿಃ ಪ್ರಯತೋ ಭೂತ್ವಾ ಜುಹುಯಾದಾಜ್ಯಮನ್ವಹಮ್ ।
ಶ್ರಿಯಃ ಪಂಚದಶರ್ಚಂ ಚ ಶ್ರೀಕಾಮಃ ಸತತಂ ಜಪೇತ್ ॥

(ಸಂಪತ್ತನ್ನು ಬಯಸುವವನು ಶುಚಿಯಾಗಿ ಶ್ರದ್ಧೆಯಿಂದ ಹದಿನೈದು ಋಕ್ಕುಗಳಿರುವ ಶ್ರೀಸೂಕ್ತವನ್ನು ಸದಾ ಜಪಿಸಬೇಕು ; ಹೋಮ ಮಾಡಬೇಕು.)

2. ಆನಂದಃ ಕರ್ದಮಶ್ಚೈವ ಚಿಕ್ಲೀತ ಇತಿ ವಿಶ್ರುತಾಃ ।
ಋಷಯಸ್ತೇ ತ್ರಯಃ ಪ್ರೋಕ್ತಾಃ ಸ್ವಯಂ ಶ್ರೀರೇವ ದೇವತಾ ॥

(ಈ ಸೂಕ್ತಕ್ಕೆ ಆನಂದ, ಕರ್ದಮ, ಚಿಕ್ಲೀತ ಎಂಬುವರು ಮೂವರು ಋಷಿಗಳು; ಲಕ್ಷ್ಮಿಯೇ ದೇವತೆ.)

3. ಪದ್ಮಾಸನೇ ಪದ್ಮಊರೂ ಪದ್ಮಾಕ್ಷೀ ಪದ್ಮಸಂಭವೇ ।
ತ್ವಂ ಮಾಂ ಭಜಸ್ವ ಪದ್ಮಾಕ್ಷೀ ಯೇನ ಸೌಖ್ಯಂ ಲಭಾಮ್ಯಹಮ್ ॥

(ತಾವರೆ ಹೂ ಮೇಲೆ ಕುಳಿತವಳೇ, ತಾವರೆ ಹೂವಂತೆ ತೊಡೆಯುಳ್ಳವಳೇ, ತಾವರೆ ಹೂವಂತೆ ಕಣ್ಣುಳ್ಳವಳೇ, ತಾವರೆ ಹೂವಿಂದ ಒದಗಿ ಬಂದವಳೇ, ನನ್ನ ಬಳಿಸಾರು ; ನಿನ್ನ ಸಾನ್ನಿಧ್ಯದಿಂದ ಸೌಖ್ಯವನ್ನು ಪಡೆದುಕೊಳ್ಳುವೆನು !)

4. ಅಶ್ವದಾಯಿ ಗೋದಾಯಿ ಧನದಾಯಿ ಮಹಾಧನೇ ।
ಧನಂ ಮೇ ಜುಷತಾಂ ದೇವಿ ಸರ್ವಕಾಮಾರ್ಥಸಿದ್ಧಯೇ ॥

(ಕುದುರೆಯನ್ನು ಕೊಡುವವಳೇ, ಹಸುವನ್ನು ನೀಡುವವಳೇ, ಧನವನ್ನು ದಾನಮಾಡುವವಳೇ, ಬಹುವಾದ ಸಂಪತ್ತುಳ್ಳವಳೇ, ದೇವಿಯೇ, ಧನವು ನನ್ನನ್ನು ಸೇರುವಂತೆ ಮಾಡು, ನನ್ನೆಲ್ಲ ಬಯಕೆಗಳನ್ನೂ ಈಡೇರಿಸಿಕೊಳ್ಳುವೆನು !)

5. ಪುತ್ರಪೌತ್ರಧನಂ ಧಾನ್ಯಂ ಹಸ್ತ್ಯಶ್ವಾದಿಗವೇ ರಥಮ್ ।
ಪ್ರಜಾನಾಂ ಭವಸಿ ಮಾತಾ ಆಯುಷ್ಮಂತಂ ಕರೋಮ್ಯಹಮ್ ॥

(ಎಲ್ಲ ಪ್ರಾಣಿಗಳಿಗೂ ತಾಯಿಯಾದವಳು ನೀನು, ಮಕ್ಕಳನ್ನೂ, ಮೊಮ್ಮಕ್ಕಳನ್ನೂ, ಹಣವನ್ನೂ, ಕಾಳುಕಡ್ಡಿಗಳನ್ನೂ, ಪಶುಗಳನ್ನೂ, ವಾಹನವನ್ನೂ ನೀಡು, ಬಹುಕಾಲ ಬಾಳುವೆನು.)

6. **ಚಂದ್ರಾಭಾಂ ಲಕ್ಷ್ಮೀಮಿಶಾನಾಂ ಸೂರ್ಯಾಭಾಂ ಶ್ರಿಯಮೀಶ್ವರೀಮ್ ।**
ಚಂದ್ರಸೂರ್ಯಾಗ್ನಿಸಂಕಾಶಾಂ ಶ್ರೀಮಹಾಲಕ್ಷ್ಮೀಮುಪಾಸ್ಮಹೇ ॥

(ಚಂದ್ರನಂತೆ ಶೀತಲಕಿರಣಗಳುಳ್ಳ, ಸೂರ್ಯನಂತೆ ಬೆಳಗುವ, ಚಂದ್ರಸೂರ್ಯರಂತೆ ಅಗ್ನಿಯಂತೆ ಕಂಗೊಳಿಸುವ, ಎಲ್ಲಕ್ಕೂ ಒಡತಿಯಾದ, ನಿಯಾಮಕಳಾದ, ಶ್ರೀದೇವಿಯಾದ ಮಹಾಲಕ್ಷ್ಮಿಯನ್ನು ಉಪಾಸನೆ ಮಾಡುವೆವು !)

7. **ಧನಮಗ್ನಿರ್ಧನಂ ವಾಯುರ್ಧನಂ ಸೂರ್ಯೋ ಧನಂ ವಸುಃ ।**
ಧನಮಿಂದ್ರೋ ಬೃಹಸ್ಪತಿರ್ವರುಣಂ ಧನಮಶ್ನುತೇ ॥

(ನಿನ್ನ ಅನುಗ್ರಹದಿಂದ ಅಗ್ನಿಯೂ, ಸೂರ್ಯನೂ, ವಸುಗಳೂ, ಇಂದ್ರನೂ, ಬೃಹಸ್ಪತಿಯೂ, ವರುಣನೂ ತಮಗೆ ವಿಶಿಷ್ಟವಾದ ಸಂಪತ್ತನ್ನು ಪಡೆದುಕೊಳ್ಳುವರು.)

8. **ವೈನತೇಯ ಸೋಮಂ ಪಿಬ ಸೋಮಂ ಪಿಬತು ವೃತ್ರಹಾ ।**
ಸೋಮಂ ಧನಸ್ಯ ಸೋಮಿನೋ ಮಹ್ಯಂ ದದಾತು ಸೋಮಿನಃ ॥

(ವಿನತೆಯ ಮಗನಾದ ಗರುಡನೇ, ಸೋಮರಸವನ್ನು ಕುಡಿ! ವೃತ್ರಾಸುರನನ್ನು ಕೊಂದ ಇಂದ್ರನು ಸೋಮರಸವನ್ನು ಕುಡಿಯಲಿ! ಸೋಮಪಾನದ ಅಧಿಕಾರವನ್ನು ಪಡೆದ ದೇವತೆಗಳೇ, ಲಕ್ಷ್ಮಿಯಿಂದ ಕೊಡಲ್ಪಟ್ಟ ಸೋಮವನ್ನು ಕುಡಿಯಿರಿ; ಸೋಮವನ್ನು ಕುಡಿಯುತ್ತಿರುವ ನನಗೆ ಧನವನ್ನು ನೀಡಿ!)

9. **ನ ಕ್ರೋಧೋ ನ ಚ ಮಾತ್ಸರ್ಯೋ ನ ಲೋಭೋ ನಾಶುಭಾ ಮತಿಃ ।**
ಭವಂತಿ ಕೃತಪುಣ್ಯಾನಾಂ ಭಕ್ತಾನಾಂ ಶ್ರೀಸೂಕ್ತಂ ಜಪತಾಂ ಸದಾ ॥

(ಪುಣ್ಯವಂತರಾದ ಭಕ್ತರು ಶ್ರೀಸೂಕ್ತವನ್ನು ಜಪಿಸುತ್ತಿದ್ದರೆ ಅವರಿಗೆ ಕೋಪವಾಗಲಿ, ಅಸೂಯೆಯಾಗಲಿ, ದುರಾಶೆಯಾಗಲಿ, ಕೆಟ್ಟ ಮನಸ್ಸಾಗಲೀ ಎಂದೂ ಇರುವುದಿಲ್ಲ!)

10. **ವರ್ಷಂತು ತೇ ವಿಭಾವರಿ ದಿವೋ ಅಭ್ರಸ್ಯ ವಿದ್ಯುತಃ ।**
ರೋಹಂತು ಸರ್ವಬೀಜಾನ್ಯವ ಬ್ರಹ್ಮದ್ವಿಷೋ ಜಹಿ ॥

(ಪ್ರಕಾಶಮಾನವಾಗಿ ಕಂಗೊಳಿಸುವ ದೇವತೆಯೇ, ನಿನ್ನ ಅನುಗ್ರಹದಿಂದ ಮಳೆ ಬೀಳಲಿ, ಗುಡುಗು ಮೊಳಗಲಿ, ಮಿಂಚು ಬೆಳಗಲಿ! ಭೂಮಿಯ ಮೇಲೆ ಬೀಜಗಳು ಮೊಳೆತು ಸಸ್ಯ ಸಮೃದ್ಧವಾಗಲಿ! ಜ್ಞಾನವಿರೋಧಿಗಳಾದ ಜನರನ್ನು ನಾಶಗೊಳಿಸು!)

11. **ಪದ್ಮಪ್ರಿಯೇ ಪದ್ಮಿನಿ ಪದ್ಮಹಸ್ತೇ ಪದ್ಮಾಲಯೇ ಪದ್ಮದಲಾಯತಾಕ್ಷಿ ।**
ವಿಶ್ವಪ್ರಿಯೇ ವಿಷ್ಣುಮನೋನುಕೂಲೇ ತ್ವತ್ಪಾದಪದ್ಮಂ ಮಯಿ ಸಂನಿಧತ್ಸ್ವ ॥

(ತಾವರೆಹೂವನ್ನು ಪ್ರೀತಿಸುವವಳೇ, ತಾವರೆಹೂವಿನಿಂದ ಬಂದವಳೇ, ತಾವರೆ ಹೂವನ್ನು ಹಿಡಿದವಳೇ, ತಾವರೆಹೂವಲ್ಲಿ ಇರುವವಳೇ, ತಾವರೆ ಹೂವಂತೆ ಕಣ್ಣುಳ್ಳವಳೇ, ಎಲ್ಲರಿಗೂ ಪ್ರಿಯಳಾದವಳೇ, ವಿಷ್ಣುವಿನ ಬಯಕೆಗೆ ಅನುಕೂಲವಾಗಿರುವವಳೇ, ನಿನ್ನ ಅಡಿದಾವರೆಗಳನ್ನು ನನ್ನಲ್ಲಿ ಇರಿಸು !)

12. ಯಾ ಸಾ ಪದ್ಮಾಸನಸ್ಥಾ ವಿಪುಲಕಟಿತಟೀ ಪದ್ಮಪತ್ರಾಯತಾಕ್ಷೀ
ಗಂಭೀರಾವರ್ತನಾಭಿಸ್ತನಭರನಮಿತಾ ಶುಭ್ರವಸ್ತ್ರೋತ್ತರೀಯಾ ।
ಲಕ್ಷ್ಮೀರ್ದಿವ್ಯೈರ್ಗಜೇಂದ್ರೈರ್ಮಣಿಗಣಖಚಿತೈಃ ಸ್ನಾಪಿತಾ ಹೇಮಕುಂಭೈಃ
ನಿತ್ಯಂ ಸಾ ಪದ್ಮಹಸ್ತಾ ಮಮ ವಸತು ಗೃಹೇ ಸರ್ವಮಾಂಗಲ್ಯಯುಕ್ತಾ ॥

(ತಾವರೆ ಹೂ ಮೇಲೆ ಕುಳಿತವಳೂ, ವಿಪುಲವಾದ ಕಟ ಪ್ರದೇಶವುಳ್ಳವಳೂ, ತಾವರೆಯ ಎಲೆಯಂತೆ ವಿಶಾಲವಾದ ಕಣ್ಣುಳ್ಳವಳೂ, ಆಳವಾದ ಹೊಕ್ಕುಳುಳ್ಳವಳೂ, ಭಾರವಾದ ಕುಚಗಳಿಂದ ಬಗ್ಗಿದವಳೂ, ಬಿಳಿಬಣ್ಣದ ಮೇಲುಹೊದಿಕೆಯನ್ನು ಹೊದ್ದವಳೂ, ತಾವರೆ ಹೂಗಳನ್ನು ಕೈಯಲ್ಲಿ ಹಿಡಿದವಳೂ, ಬಂಗಾರದ ಕೊಡಗಳನ್ನು ಹೊತ್ತ ಆನೆಗಳಿಂದ ಅಭಿಷೇಕ ಕೈಗೊಳ್ಳುತ್ತಿರುವವಳೂ ಆದ ಲಕ್ಷ್ಮಿಯು ಎಲ್ಲ ಮಂಗಳಗಳಿಂದ ಕೂಡಿದವಳಾಗಿ ನನ್ನ ಮನೆಯಲ್ಲಿ ಎಂದೂ ನೆಲೆಗೊಳ್ಳಲಿ !)

13. ಲಕ್ಷ್ಮೀಂ ಸಮುದ್ರರಾಜತನಯಾಂ ಶ್ರೀರಂಗಧಾಮೇಶ್ವರೀಂ
ದಾಸೀಭೂತಸಮಸ್ತದೇವವನಿತಾಂ ಲೋಕೈಕ ದೀಪಾಂಕುರಾಮ್ ।
ಶ್ರೀಮನ್ಮಂದಕಟಾಕ್ಷಲಬ್ಧ ವಿಭವಬ್ರಹ್ಮೇಂದ್ರ ಗಂಗಾಧರಾಂ
ತ್ವಾಂ ತ್ರೈಲೋಕ್ಯಕುಟುಂಬಿನೀಂ ಸರಸಿಜಾಂ ವಂದೇ ಮುಕುಂದಪ್ರಿಯಾಮ್ ॥

(ಸಮುದ್ರರಾಜನ ಮಗಳೂ, ಶ್ರೀರಂಗರಾಜನ ಒಡತಿಯೂ, ದೇವತಾ ಸ್ತ್ರೀಯರೆಲ್ಲರಿಂದ ಸೇವೆಗೊಳ್ಳುವವಳೂ, ಇಡೀ ಲೋಕಕ್ಕೆ ಬೆಳಕಾದವಳೂ, ತನ್ನ ಕಡೆಗಣ್ಣಿಂದಲೇ ಬ್ರಹ್ಮ, ಇಂದ್ರ, ಶಿವ ಇವರಿಗೆಲ್ಲ ಹಿರಿಮೆಯನ್ನು ಒದಗಿಸಿದವಳೂ, ಮೂರು ಲೋಕಗಳ ಪೋಷಣೆಯ ಭಾರವನ್ನು ಹೊತ್ತವಳೂ, ವಿಷ್ಣುವಿಗೆ ಪ್ರಿಯಳೂ ಆದ ಲಕ್ಷ್ಮಿಯನ್ನು ನಮಸ್ಕರಿಸುತ್ತೇನೆ.)

14. ಸಿದ್ಧಲಕ್ಷ್ಮೀರ್ಮೋಕ್ಷಲಕ್ಷ್ಮೀರ್ಜಯಲಕ್ಷ್ಮೀಸ್ಸರಸ್ವತೀ ।
ಶ್ರೀಲಕ್ಷ್ಮೀರ್ವರಲಕ್ಷ್ಮೀಶ್ಚ ಪ್ರಸನ್ನಾ ಭವ ಸರ್ವದಾ ॥

(ನೀನು ಸಿದ್ಧಲಕ್ಷ್ಮಿ, ಮೋಕ್ಷಲಕ್ಷ್ಮಿ, ಜಯಲಕ್ಷ್ಮಿ, ಸರಸ್ವತಿ, ಶ್ರೀಲಕ್ಷ್ಮಿ, ವರಲಕ್ಷ್ಮಿ – ನನ್ನಲ್ಲಿ ಎಂದೂ ದಯೆಮಾಡು.)

15. ವರಾಂಕುಶೌ ಪಾಶಮಭೀತಿಮುದ್ರಾಂ ಕರೈರ್ವಹಂತೀಂ ಕಮಲಾಸನಸ್ಥಾಮ್ ।
ಬಾಲಾರ್ಕಕೋಟಿಪ್ರತಿಭಾಂ ತ್ರಿನೇತ್ರೀಂ ಭಜೇಹಮಾದ್ಯಾಂ ಜಗದೀಶ್ವರೀಂ ತಾಮ್ ॥

(ಆದ್ಯಳೂ, ಜಗದೀಶ್ವರಿಯೂ, ತಾವರೆಹೂ ಮೇಲೆ ಕುಳಿತವಳೂ, ಕೈಗಳಲ್ಲಿ ಅಂಕುಶ, ಪಾಶ, ವರದ, ಅಭಯ ಮುದ್ರೆಗಳನ್ನು ಧರಿಸಿದವಳೂ, ಆಗ ತಾನೆ ತೋರಿಕೊಂಡ ಕೋಟಿ ಸೂರ್ಯರಂತೆ ಕಂಗೊಳಿಸುವವಳೂ, ಮೂರು ಕಣ್ಣುಗಳುಳ್ಳವಳೂ ಆದ ಲಕ್ಷ್ಮಿಯನ್ನು ಭಜಿಸುತ್ತೇನೆ.)

16. **ಸರ್ವಮಂಗಳಮಾಂಗಲ್ಯೇ ಶಿವೇ ಸರ್ವಾರ್ಥಸಾಧಕೇ ।**
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತು ತೇ ॥

(ಎಲ್ಲ ಮಂಗಳಗಳಿಗೂ ಮಂಗಳಳಾದವಳೇ, ಶಿವೆಯೇ, ಎಲ್ಲ ಬಯಕೆಗಳನ್ನೂ ಈಡೇರಿಸುವವಳೇ, ಎಲ್ಲರಿಗೂ ಆಸರೆಯಾದವಳೇ, ತ್ರ್ಯಂಬಕಿಯೇ, ನಾರಾಯಣಿಯೇ, ನಿನಗೆ ನಮಸ್ಕಾರ.)

17. **ಮಹಾಲಕ್ಷ್ಮೀ ಚ ವಿದ್ಮಹೇ ವಿಷ್ಣುಪತ್ನ್ಯೈ ಚ ಧೀಮಹಿ ।**
ತನ್ನೋ ಲಕ್ಷ್ಮೀಃ ಪ್ರಚೋದಯಾತ್ ॥

(ಮಹಾಲಕ್ಷ್ಮಿಯನ್ನು ಅರಿತುಕೊಳ್ಳುವೆವು, ವಿಷ್ಣುಪತ್ನಿಯನ್ನು ಕುರಿತು ಧ್ಯಾನ ಮಾಡುವೆವು - ನಮ್ಮನ್ನು ಲಕ್ಷ್ಮಿಯು ಪ್ರೇರೇಪಿಸಲಿ.)

ನಮ್ಮ ಪ್ರಕಟಣೆಗಳು

1.	ಋಗ್ವೇದದ ಅಂತರಂಗ	75
2.	ಯಜುರ್ವೇದದ ಅಂತರಂಗ	65
3.	ಸಾಮವೇದದ ಅಂತರಂಗ	35
4.	ಅಥರ್ವ ವೇದದ ಅಂತರಂಗ	70
5.	ಕೃಷ್ಣ ಯಜುರ್ವೇದ ತೈತ್ತಿರೀಯ ಸಂಹಿತೆ - ಕಾಂಡ 1	190
6.	ಋಗ್ವೇದವನ್ನು ಯಾಕೆ ಓದಬೇಕು	50
7.	ಅಂತರ್ಯಜ್ಞ	12
8.	ಸರಸ್ವತಿ (ಋಗ್ವೇದ ಮಂತ್ರಗಳು)	22
9.	ಭೂ ಸೂಕ್ತ	20
10.	ಪರಮಾನಂದ ಪ್ರಾಪ್ತಿ (ಋಗ್ವೇದ ಮಂತ್ರಗಳು)	18
11.	ಆಧುನಿಕರಿಗಾಗಿ ವೇದ ಜ್ಞಾನ	27
12.	ನೆಮ್ಮದಿಯ ಬಾಳು ನಿಮ್ಮದಾಗಿಸಿಕೊಳ್ಳಿ	35
13.	ಯಂತ್ರಗಳು	50
14.	ನಿಶ್ಚಿತ ಪ್ರಯೋಜನಗಳಿಗಾಗಿ ಪ್ರಾಣಾಯಾಮ ಹಾಗೂ ಆಸನಗಳು	40
15.	ಅಪೂರ್ವ ಆಧ್ಯಾತ್ಮಿಕ ಅನುಭವ	25
16.	ಶ್ರೀವಿದ್ಯಾ ಸಾಧನೆ	25
17.	ರುದ್ರ ಮಂತ್ರಗಳು (ನಮಕ, ಚಮಕ)	50
18.	ವೇದ ಪ್ರಕಾಶ	20
19.	ವಿವಾಹದ ಸಂಕೇತ	15
20.	ಪ್ರಗತಿಪರ ಜೀವನ - ದೃಢ ಸೂತ್ರಗಳು	20
21.	ಆಧುನಿಕ ಮಾನವನಿಗಾಗಿ ಯೋಗ	30
22.	ಶಾಂತಿ ಮಂತ್ರಗಳು	25
23.	ಗಣಪತಿ , ಬ್ರಹ್ಮಣಸ್ಪತಿ, ಕುಮಾರ	30
24.	ಅಗ್ನಿ - ದೈವೀ ಸಂಕಲ್ಪದ ಅಧಿದೇವತೆ	65
25.	ಅಗ್ನಿ ಸಹಸ್ರನಾಮ	20
26.	ವಾಯು ಹಾಗೂ ಸೋಮ ಸಹಸ್ರನಾಮ	27
27.	ಓಂ - ಪರಮಪದ	25
28.	ಇಂದ್ರ ಸಹಸ್ರನಾಮ	18
29.	ಆರೋಗ್ಯಮಯ ಜೀವನ	18
30.	ಇಂದ್ರ - ದೈವೀ ಮನಸ್ಸಿನ ಅಧಿದೇವತೆ	15
31.	ಕುಂಡಲಿನಿ ಯೋಗ	45
32.	ಸೋಮ - ಅಸ್ತಿತ್ವದ ಆನಂದ	18
33.	ವ್ಯಾಪಕವಾಗಿ ಬಳಕೆಯಲ್ಲಿರುವ ವೇದ ಮಂತ್ರಗಳು	60
34.	ಕಾರ್ಯಸಾಧನೆಯ ರಹಸ್ಯಗಳು - ಅಗ್ನಿಯ ಮಾರ್ಗದರ್ಶನ	25
35.	ಯಜುರ್ವೇದ ಶಾಖೆಗಳು	35
36.	ತಂತ್ರ ಸಾಧನೆ	25
37.	ವೇದ ಸುರಭಿ (100 ಮಂತ್ರಗಳು, ಸುಲಭ ಅರ್ಥ)	25
38.	ಪುರುಷ ಸೂಕ್ತ	50
39.	ಗೃಹ ವಾಸ್ತು	12
40.	ಮಂತ್ರಮಣಿ	70

(ಸಂಸ್ಕೃತ, ಇಂಗ್ಲೀಷ್ ಹಾಗೂ ಹಲವು ಭಾರತೀಯ ಭಾಷೆಗಳ ಪ್ರಕಟಣೆ ಪಟ್ಟಿಗಾಗಿ ನಮ್ಮನ್ನು ಸಂಪರ್ಕಿಸಿ.)